  

# ಕರ್ನಾಟಕ ಮ್ಯಾನಿಫೆಸ್ಟೋ 2018-2023





## ಪ್ರಗತಿಯ
## ಪಕ್ಷ
## ಕಾಂಗ್ರೆಸ್


FINANCIAL EMERGENCY
FINANCIAL EMERGENCY

# ಪರಿವಿಡಿ


I. ಪ್ರಗತಿಯ ಪಕ್ಷ ಕಾಂಗ್ರೆಸ್ ........ 03

II. ಕರ್ನಾಟಕ–"**ಹಲವು ಮೊದಲುಗಳ ರಾಜ್ಯ**" ಎಲ್ಲಾ ವಲಯಗಳಲ್ಲಿ ಶ್ರೇಷ್ಟತೆಯನ್ನು ಮತ್ತು ಪ್ರಗತಿಯನ್ನು ಸಾಧಿಸುತ್ತಿರುವ ರಾಜ್ಯ. ........ 05

III. ಕರ್ನಾಟಕದ ಜನರು ಕಾಂಗ್ರೆಸನ್ನು ಆಯ್ಕೆ ಮಾಡುವುದು ಏಕೆ ಕಡ್ಡಾಯವಾಗಿದೆ. ........ 07

IV. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರದ ಸಾಧನೆಗಳು ........ 14

V. ಇವೆಲ್ಲವುಗಳನ್ನು ನಮ್ಮ ಅಭಿವೃದ್ಧಿಯ ಪಥದಲ್ಲಿ ತೆಗೆದುಕೊಂಡು ಹೋಗಿದ್ದೇವೆ ........ 15

1. ಕೃಷಿ ........ 07
2. ಶಿಕ್ಷಣ ........ 08
3. ಶಕ್ತಿ ........ 09
4. ಆಡಳಿತ ........ 10
5. ಆರೋಗ್ಯ ........ 11
6. ಕೈಗಾರಿಕಾಭಿವೃದ್ಧಿ ........ 12
7. ಮಾಹಿತಿ ತಂತ್ರಜ್ಞಾನ ........ 13
8. ಮೂಲಭೂತ ಸೌಕರ್ಯ ........ 14
9. ನೀರಾವರಿ ........ 15
10. ಕಾನೂನು ಮತ್ತು ನ್ಯಾಯ ........ 16
11. ಗ್ರಾಮೀಣಾಭಿವೃದಿ ........ 17
12. ಕೌಶಲ್ಯ ........ 18
13. ಸಾಮಾಜಿಕ ನ್ಯಾಯ ........ 19
14. ಪ್ರವಾಸೋದ್ಯಮ ........ 20
15. ನಗರಾಭಿವೃದ್ಧಿ ........
16. ಮಹಿಳಾ ಸಬಲೀಕರಣ ........

V. ಸಾರಾಂಶ ........



# ಪ್ರಗತಿಯ ಪಕ್ಷ ಕಾಂಗ್ರೆಸ್

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತೊಮ್ಮೆ ಸಂಪೂರ್ಣವಾಗಿ ಹೊಸದಾದ ಮಾರ್ಗವನ್ನನುಸರಿಸಿ ತನ್ನ ಚುನಾವಣಾ ಪ್ರಣಾಳಿಕೆಯನ್ನು ತಯಾರಿಸುವುದರಲ್ಲಿ ಪ್ರವರ್ತಕ ಪಕ್ಷವಾಗಿದೆ. ಈ ಪ್ರಣಾಳಿಕೆಯು ಜನರ ಆಕಾಂಕ್ಷೆಗಳನ್ನು ಪ್ರತಿಫಲಿಸುತ್ತ ನಮ್ಮ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸ್ಪೂರ್ತಿಯಾದ ಅಭಿವೃದ್ಧಿ ಪಥವನ್ನು ಅನುಸರಿಸಿದೆ. ನಮ್ಮ ಪ್ರನಾಳಿಕೆಯು ಕರ್ನಾಟಕದ ಜನರ ಧ್ವನಿ ಮತ್ತು ಆಶೋತ್ತರಗಳನ್ನು ಪ್ರತಿನಿಧಿಸುತ್ತದೆ ಹಾಗೂ ತನ್ನ ರಾಜ್ಯಕ್ಕಾಗಿ ಒಂದು ಹೊಸ ದೃಷ್ಟಿಕೋನವನ್ನು ಹೊಂದಿದೆ. ಜಿಲ್ಲೆಗಳು, ನಗರ ಮತ್ತು ಗ್ರಾಮಗಳಾದ್ಯಂತ ವಿಭಿನ್ನ ಭಾಗೀದಾರರೊಂದಿಗೆ ಅನೇಕ ಸಮಾಲೋಚನೆಗಳನ್ನು ಮಾಡಲಾಗಿದ್ದು ಕರ್ನಾಟಕದ ಭವಿಷ್ಯದ ಬೆಳವಣಿಗೆಗೆ, ಅಭಿವೃದ್ಧಿಯ ಕಾರ್ಯಸೂಚಯನ್ನು ಒಳಗೊಂಡಂತೆ ಈ "ಜನರ ಪ್ರನಾಳಿಕೆ" ಯನ್ನು ರಚನೆ ಮಾಡಲಾಗಿದೆ.

ನಿಮ್ಮ ಪಕ್ಷ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮಾತಿನಂತೆ ನಡೆದುಕೊಂಡಿದ್ದು ಸುಸ್ಥಿರವಾದ, ಅಭಿವೃದ್ಧಿ ಹೊಂದುತ್ತಿರವ ಅತಿ ಹೆಚ್ಚು ಪ್ರಗತಿಪರವಾದ ಮತ್ತು ದೇಶದ ಸುಖಕರ ರಾಜ್ಯವನ್ನಾಗಿಸಲು ಅಧಿಕಾರದಲ್ಲಿ ಮುಂದುವರಿಯಲು ಕರ್ನಾಟಕದ ಜನರ ಬೆಂಬಲ ಮತ್ತು ಮತವನ್ನು ಕೇಳುತ್ತಿದೆ.

ಕರ್ನಾಟಕದ ಜನತೆ ಸಾಮಾಜವಾದಿ ಜಾತ್ಯಾತೀತ ಮತ್ತು ಪ್ರಜಾತಾಂತ್ರಿಕ ಗಣತಂತ್ರದವರಾಗಿದ್ದಾರೆ ಅಲ್ಲದೆ ಸಾಂವಿಧಾನಿಕ ವ್ಯವಸ್ಥೆಯು ಕರ್ನಾಟಕದ ವಿವಿಧತೆಯನ್ನು ಆಚರಿಸುತ್ತಿದೆ. ಕರ್ನಾಟಕವನ್ನು ಧಾರ್ಮಿಕ, ಸಾಂಸ್ಕೃತಿಕ, ವಿಚಾರ ಮತ್ತು ಅಭಿಪ್ರಾಯ ವೈವಿಧ್ಯತೆಯಿಂದ ಬಲಿಷ್ಟವಾಗಿದೆ. ಕಾಂಗ್ರೆಸ್ ಪಕ್ಷದ ಅವಕಾಶಗಳ ಸಮಾನತೆಯೆಂದರೆ, ಪ್ರತಿ ನಾಗರೀಕನೂ, ತನ್ನ ಆರ್ಥಿಕ ಸ್ಥಿತಿ, ಜಾತಿ, ಧರ್ಮ ಅಥವಾ ಲಿಂಗದ ಪರಿಗಣನೆಯಿಲ್ಲದೆ ಎಲ್ಲರನ್ನೂ ಸಮಾನವೆಂದು ಕಾಣುವುದೇ ಆಗಿದೆ.

ಭಾರತದ ಸಂವಿಧಾನವು ದೇಶದ ವೈವಿಧ್ಯತೆಯನ್ನು ಈ ರೀತಿಯಲ್ಲಿ ಎತ್ತಿ ಹಿಡಿಯುತ್ತದೆ (ಎ) ಅಲ್ಪಸಂಖ್ಯಾತರಿಗೆ ಭಾಷೆ ಮತ್ತು ಧಾರ್ಮಿಕ ಹಕ್ಕುಗಳು (ಬಿ) ವೈಯಕ್ತಿಕ ಹಕ್ಕುಗಳು. ಮೊದಲನೆಯದು ಧಾರ್ಮಿಕ ಮತ್ತು ಭಾಷಾ ಅಲ್ಪಂಖ್ಯಾತರಿಗೆ ಅವಕಾಶಗಳ ಭರವಸೆ ನೀಡಿದರೆ ಎರಡನೆಯದು ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಅಸಮ್ಮತಿಯ ಹಕ್ಕನ್ನು ರಕ್ಷಿಸುತ್ತದೆ. ಇತ್ತೀಚೆಗೆ ಒಂದು ರಾಜಕೀಯ ಪಕ್ಷವು ರಹಸ್ಯವಾಗಿ ಮತ್ತು ಬಹಿರಂಗವಾಗಿ ಅಡ್ಡಿಪಡಿಸುತ್ತ ಬಹುತ್ವದ ಮೇಲೆ ಪದೇ ಪದೇ ಹಲ್ಲೆಯನ್ನು ಮಾಡಿತ್ತಿದೆ. ಈ ಚುನಾವಣಾ ಪ್ರನಾಳಿಕೆಯ ಮೂಲಕ, ಕಾಂಗ್ರೆಸ್ ಪಕ್ಷವು ಮುಂಬರುವ ವರ್ಷಗಳಲ್ಲಿ ಈ ಹಿಂದೆ ಮಾಡಿದಂತೆಯೇ ಕರ್ನಾಟಕದ ಬಹುತ್ವವನ್ನು ಗೌರವಿಸಲು, ಸಮರ್ಥಿಸಲು ಮತ್ತು ಸಂರಕ್ಷಿಸಲು ಬದ್ಧವಾಗಿದೆ.

# "ಕರ್ನಾಟಕ ಹಲವು ಮೊದಲುಗಳ ರಾಜ್ಯ"

- **ಏಕೀಕೃತ ಕೃಷಿ ಇ–ಮಾರುಕಟ್ಟೆ ವೇದಿಕೆಯನ್ನು ಅಳವಡಿಸಿಕೊಂಡ ಮೊದಲ ರಾಜ್ಯ:** ಕರ್ನಾಟಕವು ಕೃಷಿ ಮಾರುಕಟ್ಟೆಗಳಲ್ಲಿ ತಾಂತ್ರಿಕತೆಯ ಶಕ್ತಿಯ ಅಂತರ್ಜಾಲ ವಹಿವಾಟನ್ನು ಪ್ರಯೋಗಿಸಿದ ಮೊದಲ ರಾಜ್ಯವಾಗಿದ್ದು, ರೈತರು ತಮ್ಮ ಉತ್ಪನ್ನಗಳನ್ನು ಉತ್ತಮ ಬೆಲೆಗಳತೆ ಮಾರಾಟ ಮಾಡಲು ಅವಕಾಶ ಕಲ್ಪಿಸಿಕೊಟ್ಟಿದೆ. ಇದರ ಪರಿಣಾಮವಾಗಿ, ರೈತರು 38% ಕ್ಕೂ ಅಧಿಕ ಆದಾಯವನ್ನು ತಮ್ಮ ಉತ್ಪನ್ನಗಳಿಗೆ ಪಡೆದುಕೊಳ್ಳುತ್ತಿದ್ದಾರೆ. ಭಾರತದ ಸರ್ಕಾರವು ಈಗ ಎಲ್ಲಾ ರಾಜ್ಯಗಳೂ ಇದೇ ಮಾದರಿಯನ್ನು ಅಳವಡಿಸುಕೊಳ್ಳುವಂತೆ ಪ್ರೋತ್ಸಾಹಿಸುತ್ತಿದೆ.
- **ಮಹಿಳೆಯರಿಗೆ ಮೀಸಲಾದ ಕೈಗಾರಿಕಾ ಕೇಂದ್ರ ನಿರ್ಮಿಸಿದ ಮೊದಲ ರಾಜ್ಯ:** ಕರ್ನಾಟಕದಲ್ಲಿ ಮೊಟ್ಟ ಮೊದಲಬಾರಿಗೆ ಕೈಗಾರಿಕಾ ಟೆಕ್ ಪಾರ್ಕ್ ಪರಿಕಲ್ಪನೆಯನ್ನು ಹೊಂದಿದ್ದು ಇದನ್ನು ಸಂಪೂರ್ಣವಾಗಿ ಮಹಿಳಾ ಉದ್ಯಮಿಗಳಿಗಾಗಿ ವಿನ್ಯಾಸಗೊಳಿಸಿ ಸಮರ್ಪಣೆ ಮಾಡಲಾಗಿದೆ. ಕರ್ನಾಟಕದ ಸರ್ಕಾರವು ಮಹಿಳೆಯರಿಗಾಗಿ 4 ಇನ್ಕ್ಯೂಬೇಟರ್ ಗಳಲ್ಲಿ 20% ರಷ್ಟು ಸ್ಥಳಗಳನ್ನು ಕಾಯ್ದಿರಿಸಿದೆ ಮತ್ತು ಮಹಿಳಾ ಉದ್ಯಮಿಗಳಿಗಾಗಿ 10 ಕೋಟಿ ರೂಪಾಯಿಗಳ ನಿಧಿಯನ್ನು ಸ್ಥಾಪಿಸಿದೆ.
- **ಸಾರ್ವತ್ರಿಕ ಆರೋಗ್ಯ ವ್ಯಾಪ್ತಿಯನ್ನು ಪ್ರಾರಂಭಿಸಿದ ಮೊದಲ ರಾಜ್ಯ:** ಎಲ್ಲರಿಗೂ ಆರೋಗ್ಯ ಎಂಬ ದೃಷ್ಟಿಕೋನದಿಂದ, ದೇಶದಲ್ಲಿ ಮೊದಲಬಾರಿಗೆ ಕರ್ನಾಟಕವು ಸಮಗ್ರ ಆರೋಗ್ಯ ಭಾಗ್ಯ ಯೋಜನೆಯಡಿಯಲ್ಲಿ ಸಾರ್ವತ್ರಿಕ ಆರೋಗ್ಯ ವ್ಯಾಪ್ತಿಯನ್ನು ಘೋಷಣೆ ಮಾಡಿತು. ಇದರಿಂದ ಕುಟುಂಬಗಳಿಗೆ ಉಚಿತವಾಗಿ ಆರೋಗ್ಯ ಸೇವೆ ಸಿಗಲಿದ್ದು ರಾಜ್ಯದ 1.4 ಕೋಟಿ ಕುಟುಂಬಗಳು ಅನುಕೂಲತೆಯನ್ನು ಪಡೆದುಕೊಳ್ಳಲಿವೆ.
- **ವಿದ್ಯುತ್ ವಾಹನ ಮತ್ತು ವಿದ್ಯುತ ಸಂಗ್ರಹಣಾ ನೀತಿಯನ್ನು ಘೋಷಣೆ ಮಾಡಿದ ಮೊದಲ ರಾಜ್ಯ:** ಇವಿ ಮತ್ತು ಇ.ಎಸ್.ಪಿ. ಯು "ಮೇಕ್ ಇನ್ ಕರ್ನಾಟಕ" ಉಪಕ್ರಮದ ಪ್ರಮುಖ ಉದ್ದೇಶವಾಗಿದೆ. ಇದನ್ನು ಕರ್ನಾಟಕವನ್ನು ಇ.ವಿ.ಗಳ ತಯಾರಿಕೆ ಕೇಂದ್ರವನ್ನಾಗಿಸುವ ದೃಷ್ಟಿಕೋನದಿಂದ ಪ್ರಾರಂಭಿಸಲಾಗಿದ್ದು ಈ ನೀತಿಯು ಹೊಸ ಇ.ವಿ. ಉತ್ಪಾದನಾ ವಲಯಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ, ಸುಮಾರು 31,000 ಕೋಟಿಗಳ ಹೂಡಿಕೆಯನ್ನು ನಿರೀಕ್ಷಿಸಲಾಗಿದೆ ಮತ್ತು ಸಾರ್ವಜನಿಕ ಮತ್ತು ಖಾಸಗೀ ಸ್ಥಳಗಳಲ್ಲಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಪ್ರಾರಂಭಿಸುವ ಗುರಿಯನ್ನು ಹೊಂದಿದೆ.
- **ದೇಶದಾದ್ಯಂತ ಹೂಡಿಕೆ ಉದ್ದೇಶಗಳಲ್ಲಿ ಮೊದಲನೇ ಸ್ಥಾನ ಹೊಂದಿರುವ ರಾಜ್ಯ:** ನಿರಂತರವಾಗಿ ಎರಡನೇ ವರ್ಷದಲ್ಲಿ ಕರ್ನಾಟಕವು ದೇಶದ ಹೂಡಿಕೆ ಪ್ರಸ್ತಾವನೆಗಳಲ್ಲಿ ಅತಿ ಎತ್ತರದಲ್ಲಿದೆ – ಕಳೆದ 18 ತಿಂಗಳಲ್ಲಿ 1.54 ಲಕ್ಷ ಕೋಟಿಗಳಷ್ಟು ಸ್ವೀಕೃತವಾಗಿದ್ದು ಇದು ಸಮಗ್ರ ಭಾರತ ಹೂಡಿಕೆ ಪ್ರಸ್ತಾವನೆಗಳಲ್ಲಿ 45% ರಷ್ಟು ಬೃಹತ್ ಮೊತ್ತವಾಗಿದೆ. ಪ್ರವರ್ತಕ ನೀತಿಗಳು, ಬಲಿಷ್ಠ ಆಡಳಿತ ಮತ್ತು ವೈವಿಧ್ಯಮಯ ಪರಿಸರವು ಕರ್ನಾಕವನ್ನು ಒಂದು ಜಾಗತಿಕ ಹೂಡಿಕೆ ಕೇಂದ್ರನ್ನಾಗಿಸಿವೆ. 15 ಪ್ರಮುಖ ಕಂಪನಿಗಳು ಹೊಸ ಹೂಡಿಕೆಗಳನ್ನು ಮಾಡುತ್ತಿದ್ದು ಸುಮಾರು 15,000+ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿವೆ.
- **ಐಟಿ ರಫ್ತಿನಲ್ಲಿ ಪ್ರಥಮ #1 :** ಭಾರತದ ಐಟಿ ಕೇಂದ್ರವಾಗಿ ಕರ್ನಾಟಕದಲ್ಲಿ 3500+ಕ್ಕೂ ಹೆಚ್ಚು ಐಟಿ ಕಂಪನಿಗಳಿವೆ ಮತ್ತು ಇದು ವಿಶ್ವದ ನಾಲ್ಕನೇ ಅತಿದೊಡ್ಡ ಟೆಕ್ ಕ್ಲಸ್ಟರ್ ಎಂಬ ಹೆಗ್ಗಳಿಕೆ ಹೊಂದಿದೆ. 2017 ರಲ್ಲಿ ಸುಮಾರು 3 ಲಕ್ಷ ಕೋಟಿಗಳಷ್ಟು ಮೌಲ್ಯದ ರಫ್ತು ಮಾಡಿದೆ, ಕರ್ನಾಟಕವು ಸಮಗ್ರ ಭಾರತದ ರಫ್ತಿನ 38% ರಷ್ಟು ಸಿಂಹ ಪಾಲನ್ನು ಹೊಂದಿದ್ದು ಐಟಿ ರಫ್ತಿನಲ್ಲಿ ಕರ್ನಾಟಕವನ್ನು ನಿರ್ವಿವಾದದ ನಾಯಕನನ್ನಾಗಿಸಿದೆ. ಐಟಿಯು 30.6% ದಷ್ಟು ಇದ್ದು ಇದು ದೇಶದ ಅತಿ ಹೆಚ್ಚು ಬೆಳವಣಿಗೆ ದರವನ್ನು ಹೊಂದಿದೆ.
- **ಭಾರತದ #1 ಜೈವಿಕ ತಂತ್ರಜ್ಞಾನದ ಕೇಂದ್ರ :** ಸುಮಾರು 228 ಕ್ಕೂ ಅಧಿಕ ಜೈವಿಕ ತಂತ್ರಜ್ಞಾನ ಕೇಂದ್ರಗಳು ಮತ್ತು 65 + ಗೂ ಹೆಚ್ಚು ಜೈವಿಕ ಪ್ರಾರಂಭಿಕ ಸಂಸ್ಥೆಗಳಿದ್ದು, ದೇಶದ ಜೈವಿಕ ತಂತ್ರಜ್ಞಾನ ಉದ್ಯಮದ ಆದಾಯದಲ್ಲಿ ಕರ್ನಾಟಕವು ಈ ಕ್ಷೇತ್ರದಲ್ಲಿ 35% ರಷ್ಟು ಆದಾಯವನ್ನು ನೀಡುತ್ತಿದೆ. ಜೈವಿಕ ಆರ್ಥಿಕತೆಯನ್ನು ಇನ್ನೂ ವಿಸ್ತರಿಸಲು ಮತ್ತು ಜೈವಿಕ ಕ್ಷೇತ್ರದಲ್ಲಿನ ಭಾರತದ 1000 ಕೋಟಿಗೆ ಕರ್ನಾಟಕದ ಕೊಡುಗೆ ಪ್ರಮುಖಗೊಳಿಸಲು ಸರ್ಕಾರವು ಇತ್ತೀಚೆಗೆ ಕರ್ನಾಟಕ ಜೈವಿಕ ತಂತ್ರಜ್ಞಾನ ನೀತಿ 2017–22 ಕ್ಕೆ ಅನುಮೋದನೆ ನೀಡಿದೆ.

- **ಉತ್ಪಾದನಾ ಉತ್ಕೃಷ್ಟತೆಯಲ್ಲಿ ಕರ್ನಾಟಕ ಮೊದಲ ರಾಜ್ಯ ಆಗಿದೆ:** ಐಟಿ ಮತ್ತು ಬಿಟಿಗಳಲ್ಲದೆ, ಉತ್ತಮ ಉತ್ಪಾದನಾ ಪ್ರಕ್ರಿಯೆ ಪ್ರಮಾಣವು 2.63 ಯಾಗಿದ್ದು ಕರ್ನಾಟಕವು ದೇಶದ ಉತ್ಪಾದನಾ ಉತ್ಕೃಷ್ಟತೆಯಲ್ಲಿ ಅಗ್ರಗಣ್ಯವೆನಿಸಿದೆ, ರಾಜ್ಯವು ಉತ್ಪಾದನಾ ಹೂಡಿಕೆಯಲ್ಲಿ ಭಾರತದ ಒಟ್ಟು ಹೂಡಿಕೆಯ 10% ರಷ್ಟನ್ನು ಪಡೆದುಕೊಂಡಿದೆ, ಅದೇ ರೀತಿ 32% ರಷ್ಟು ಉತ್ಪಾದನಾ ವಲಯದಲ್ಲಿನ ಹೂಡಿಕೆಯ ಪಾಲನ್ನು ಕರ್ನಾಟಕವು ಆಕರ್ಷಿಸಿದೆ.

- **ಪ್ರವರ್ತಕ ನೀತಿಗಳ #1 ರಾಜ್ಯವಾಗಿದೆ :** ಕರ್ನಾಟಕವು ನೀತಿಗಳನ್ನು ಪ್ರವರ್ತಿಸುವುದರಲ್ಲಿ ರಾಷ್ಟ್ರ ಮಟ್ಟದಲ್ಲಿ ಹೆಸರುವಾಸಿಯಾಗಿದೆ, ಅದರ ಉದ್ದೇಶವೆಂದರೆ ಆವಿಷ್ಕಾರಗಳನ್ನು ಉದ್ಯಮಶೀಲತೆಯನ್ನು ಬೆಂಬಲಿಸುವುದೇ ಆಗಿದೆ: ಕರ್ನಾಟಕ ಎಲೆಕ್ಟ್ರಾನಿಕ್ಸ್ ಸಿಸ್ಟಮ್ ಡಿಸೈನ್ ಆಂಡ್ ಮಾನ್ಯುಫಾಕ್ಚರಿಂಗ್ ಪಾಲಿಸಿ ಕರ್ನಾಟಕ ಅನಿಮೇಷನ್ ವಿಷ್ಯುಯಲ್ ಎಫೆಕ್ಟ್ಸ್, ಆಟಗಳು ಮತ್ತು ಕಾಮಿಕ್ ನೀತಿಗಳು (ಎವಿಜಿಸಿ), ವಿವಿಧ-ವಲಯಗಳ ಸ್ಟಾರ್ಟ್ ಅಪ್ ಪಾಲಿಸಿ ಮತ್ತು ಇತ್ಯಾದಿಗಳು.

- **ಹೊಸ ಸಂಸ್ಥೆಗಳ ಸ್ಥಾಪನೆ ಮತ್ತು ಆವಿಷ್ಕಾರಗಳಿಗೆ #1 ರಾಜ್ಯ :** ಆವಿಷ್ಕಾರ ಮತ್ತು ಉದ್ಯಮಶೀಲತೆಯ ಕೇಂದ್ರವಾಗಿದ್ದು ಕರ್ನಾಟಕದಲ್ಲಿ ಸುಮಾರು 20,000 ತಂತ್ರಜ್ಞಾನ ಆಧಾರಿತ ಪ್ರಾರಂಭಿಕ ಸಂಸ್ಥೆಗಳಿವೆ ಇವುಗಳಲ್ಲಿ 2020ನೇ ವರ್ಷದೊಳಗೆ 6,000 ಉತ್ಪನ್ನಗಳ ಸಂಸ್ಥೆಗಳು ಒಳಗೊಂಡಿವೆ. ಇದು ಪ್ರಥಮವಾದ ವಿವಿಧ ವಲಯಗಳ ಪ್ರಾರಂಭಿಕ ಸಂಸ್ಥೆಗಳ ನಿಯಮವಾಗಿದೆ. ನೀತಿಯು ತಾಂತ್ರಿಕ ಹೂಡಿಕೆ ಮತ್ತು ನೀತಿಗಳ ಮಧ್ಯಪ್ರವೇಶಾತಿಗಳಿಂದಾಗಿ ವಿಶ್ವಮಟ್ಟದ ಪರಿಸರವ್ಯವಸ್ಥೆಯನ್ನು ಹೊಂದಲಿದೆ ಹಾಗೂ 18 ಲಕ್ಷ ಉದ್ಯೋಗಾವಕಾಶಗಳನ್ನು ಸೃಜಿಸಲಿದೆ. ಸರ್ಕಾರದ ಮಧ್ಯಪ್ರವೇಶಾತಿಯೊಂದರ ಮೂಲಕವೇ ಪ್ರಾರಂಭಿಕ ಸಂಸ್ಥೆಗಳಿಗಾಗಿ 2,000 ಕೋಟಿಯನ್ನು ವಿನಿಯೋಗಿಸಲಾಗುತ್ತಿದೆ. ಸಾಮಾಜಿಕ ಪರಿಣಾಮಗಳ ಕ್ಷೇತ್ರಗಳಾದ ಆರೋಗ್ಯ ರಕ್ಷಣೆ, ಆಹಾರ ಭದ್ರತೆ, ಶುದ್ಧ ಪರಿಸರ ಮತ್ತು ಎಲ್ಲರಿಗೂ ಶಿಕ್ಷಣದಂತಹ ಕನಿಷ್ಟ 25 ಆವಿಷ್ಕಾರೀ ಪರಿಹಾರಗಳನ್ನು ಸೃಜಿಸಲು ಸಹಾಯಕವಾಗಲಿದೆ.

- **ಆಧುನಿಕ ಇಂಟೆಲಿಜೆಂಟ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್ ಸಂಚಾರಿ ವ್ಯವಸ್ಥೆಯನ್ನು ಪ್ರಾರಂಭಿಸಿದ ಮೊದಲ ರಾಜ್ಯ :** ಕರ್ನಾಟಕವು ಆವಿಷ್ಕಾರಗಳ ಭೂಮಿಯೆಂಬುದು ತಿಳಿದಿದೆ ಅಲ್ಲದೆ ಆಧುನಿಕ ಸಾರಿಗೆ ವ್ಯವಸ್ಥೆಯನ್ನು ಪ್ರಾರಂಭಿಸುವುದರೊಂದಿಗೆ ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಹೆಚ್ಚು ಅಗತ್ಯವಿರುವ ಮತ್ತು ಸುರಕ್ಷಿತವಾದ ಸಾರಿಗೆ ವ್ಯವಸ್ಥೆಯನ್ನು ಸಾಕಾರಗೊಳಿಸಿದೆ. ಪ್ರಯಾಣಿಕರು ವಾಹನಗಳು (ಬಸ್ಸು) ಬರುವ ಮತ್ತು ಹೊರಡುವ ಸಮಯದ ಮಾಹಿತಿಯನ್ನು ತಿಳಿದುಕೊಳ್ಳಬಹುದು ಅಲ್ಲದೆ ಎಲ್ ಇ ಡಿ ಪರದೆಗಳಿರುವ ಬಸ್ ನಿಲ್ದಾಣಗಳಲ್ಲಿ ಬಸ್ಸುಗಳ ಸಮಯದ ಸರಿಯಾದ ಮಾಹಿತಿ ಚಿತ್ತರವಾಗುತ್ತಿರುತ್ತದೆ.

- **ರೇಷ್ಮೆ ಉತ್ಪಾದನೆಯಲ್ಲಿ #1 ರಾಜ್ಯ :** ರೇಷ್ಮೆ ಉತ್ಪಾದನೆಗೆ ನೀಡಲಾಗಿರುವ ಪ್ರೋತ್ಸಾಹದಿಂದಾಗಿ, ಕಳೆದ ನಾಲ್ಕು ವರ್ಷಗಳಲ್ಲಿ ಸುಮಾರು 36,147 ಮೆಟ್ರಿಕ್ ಟನ್‌ಗಳಷ್ಟು ರೇಷ್ಮೆಯನ್ನು ಉತ್ಪಾದಿಸಲಾಗಿದೆ. ಇದರೊಂದಿಗೆ, ರಾಜ್ಯವು ದೇಶದಲ್ಲಿ ರೇಷ್ಮೆ ಉತ್ಪಾದನೆಯಲ್ಲಿ ಪ್ರಥಮ ಸ್ಥಾನವನ್ನು ಉಳಿಸಿಕೊಂಡಿದೆ. ದೇಶದಲ್ಲಿ ಉತ್ಪಾದನೆಯಾಗುವ ಒಟ್ಟು ರೇಷ್ಮೆಯಲ್ಲಿ, ರಾಜ್ಯದ ಪಾಲು ಸುಮರು 48% ರಷ್ಟು ಇದರಿಂದ ಸುಮಾರು 12 ಲಕ್ಷ ಜನರಿಗೆ ಉದ್ಯೋಗ ಸೃಷ್ಟಿಯಾಗಿದೆ.

- **ಬಡ್ಡಿರಹಿತ ಸಾಲ ನೀಡಿಕೆಯಲ್ಲಿ ಮೊದಲನೇ ರಾಜ್ಯ :** ದೇಶದಲ್ಲಿ ಮೊದಲನೇ ಬಾರಿಗೆ ಕರ್ನಾಟಕ ಸರ್ಕಾರವು 3 ಲಕ್ಷ ರೂ.ಗಳವರೆಗೆ ಬಡ್ಡಿರಹಿತ ಸಾಲವನ್ನು ನೀಡಿದೆ ; 10 ಲಕ್ಷ ರೂ.ಗಳವರೆಗಿನ ಸಾಲವನ್ನು ಕೇವಲ ಶೇಕಡ 3 ರಂತೆ ವಿತರಣೆ ಮಾಡಲಾಗುತ್ತಿದೆ.

- **ಸ್ಮಾರ್ಟ್ ಕಾರ್ಡ್ ವಿತರಣೆಯಲ್ಲಿ ಮೊದಲನೇ ರಾಜ್ಯ :** ನಮ್ಮ ಸರ್ಕಾರವು ದೇಶದಲ್ಲೇ ಅತಿ ಹೆಚ್ಚು ಸಂಖ್ಯೆಯ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲು ಬದ್ಧವಾಗಿದೆ ಅಂದರೆ, ದೇಶದಲ್ಲಿ 70 ಲಕ್ಷಗಳಷ್ಟು ಸ್ಮಾರ್ಟ್ ಕಾರ್ಡ್‌ಗಳನ್ನು ಅಸಂಘಟಿತ ಕಾರ್ಮಿಕರಿಗೆ ವಿತರಣೆ ಮಾಡಲಾಗಿದೆ, ಇದರಿಂದ ಅವರಿಗೆ ಭದ್ರತೆಯನ್ನು ಒದಗಿಸಲಾಗಿದೆ. "ಸರ್ಕಾರವು ಸುಮಾರು 122 ಕೋಟಿ ಕುಟುಂಬಗಳನ್ನು ಅಸಂಘಟಿತ ವಲಯವೆಂದು ಗುರುತಿಸಿದೆ. ಇದರಲ್ಲಿ ಬಡತನ ರೇಖೆಯಿಂದ ಕೆಳಗಿರುವ (ಬಿಪಿಎಲ್) ಕಾರ್ಮಿಕರು ಸಹ ಸೇರುತ್ತಾರೆ. ಇಂತಹ ಕಾರ್ಮಿಕರನ್ನು ಸ್ವಾಸ್ಥ್ಯ ಭೀಮಾ ಯೋಜನೆ ಸೊಸೈಟಿ (ಆರ್‌ಎಸ್‌ಬಿವೈ) ಯಡಿಯಲ್ಲಿ ಗುರುತಿಸಲಾಗಿದ್ದು ಏಕ ಗವಾಕ್ಷಿ ವ್ಯವಸ್ಥೆಯ ಮೂಲಕ ಸರ್ಕಾರವು ಅವರಿಗೆ ಸ್ಮಾರ್ಟ್ ಕಾರ್ಡ್ ವಿತರಿಸುವ ಯೋಜನೆಯನ್ನು ಹೊಂದಿದೆ".

- **ಉಪ ಜಿಲ್ಲಾ ವಿಭಾಗ ಮಟ್ಟದಲ್ಲಿ ಉಚಿತ ಡಯಾಲಿಸಿಸ್ ಕೇಂದ್ರಗಳ ಸ್ಥಾಪಿಸಿದ ಪ್ರಥಮ ರಾಜ್ಯ :** ಉಚಿತ ಡಯಾಲಿಸಿಸ್ ಕೇಂದ್ರಗಳನ್ನು ಉಪ ವಿಭಾಗ ಮಟ್ಟದ ಆಸ್ಪತ್ರೆಯಲ್ಲಿ ಸ್ಥಾಪಿಸಿದ ಮೊದಲ ರಾಜ್ಯ. ಪ್ರಸ್ತಾಪನೆಗೊಂಡ ಒಟ್ಟು ಡಯಾಲಿಸಿ ಕೇಂದ್ರಗಳು-171. ಒಟ್ಟು ಕಾರ್ಯ ನಿರ್ವಹಿಸುತ್ತಿರುವುವು-67. ನೀಡಲಾಗುವ ಸೇವೆ ಉಚಿತ.

- **ಮೊದಲ ರಾಜ್ಯ** ಸಬ್ಸಿಡಿಗಳನ್ನು "ಪರಿಹಾರ" ಎಂಬ ಆನ್ ಲೈನ್ ಪ್ಲಾ ್ಯಟ್ ಫಾರ್ಮ್ ಮೂಲಕ ವರ್ಗಾವಣೆ ಮಾಡುವಲ್ಲಿ ಮೊದಲ ರಾಜ್ಯವಾಗಿದೆ. ರೂ. 1459.1 ಕೋಟಿಗಳಷ್ಟನ್ನು ನೇರವಾಗಿ ಆಧಾರ್ - ಸಂಪರ್ಕಹೊಂದಿರುವ ರೈತರ 21.90 ಲಕ್ಷ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ.

- **ಮೊದಲನೇ ರಾಜ್ಯ** 4000 ಸರ್ಕಾರಿ ಮತ್ತು ಖಾಸಗಿ ಸೇವೆಗಳನ್ನು ಒಟ್ಟುಗೂಡಿ ನೀಡುವ ಸಂಚಾರಿ ವೇದಿಕೆಯ ಮೊದಲ ರಾಜ್ಯವಾಗಿದೆ.

# ಕರ್ನಾಟಕದ ಜನರು ಕಾಂಗ್ರೆಸ್ ಅನ್ನು ಆಯ್ಕೆ ಮಾಡಿಕೊಳ್ಳುವುದು ಏಕೆ ಅತ್ಯವಶ್ಯಕ

## ನವ ಕರ್ನಾಟಕವನ್ನು ಕಟ್ಟುವುದನ್ನು ಮುಂದುವರಿಸಲು – ರಾಜ್ಯವು ನಿರಂತರ ಪ್ರಗತಿಯಲ್ಲಿರಲು

### ಸ್ವಾತಂತ್ರ್ಯದ ನಂತರ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ಸಾಧನೆಗಳು

ನೆಹರೂರವರ ದೃಷ್ಟಿಕೋನಗಳು – ಪಿಎಸ್‌ಯುಗಳ ಸ್ಥಾಪನೆ

- ಹೆಚ್‌ಎಮ್‌ಟಿ, ಹೆಚ್‌ಎಎಲ್, ಬಿಇಎಲ್, ಬಿಜಿಎಮ್‌ಎಲ್, ಬಿಇಎಮ್‌ಎಲ್, ಇಸ್ರೋ, ಎನ್‌ಎಎಲ್, ಡಿಆರ್‌ಡಿಒ
- ವೃತ್ತಿಪರ ಕಾಲೇಜುಗಳಲ್ಲಿ ದಾಖಲಾತಿಗಾಗಿ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)
- ಶಿಕ್ಷಕರ ನೇಮಕಾತಿಯಲ್ಲಿ ಪಾರದರ್ಶಕತೆಯ ಪದ್ಧತಿಯ ರಚನೆ
- ಮೈಸೂರಿನಲ್ಲಿ ಪ್ರಾರಂಭವಾಗಿ ನಂತರ ಬೆಂಗಳೂರಿಗೆ ಸ್ಥಳಾಂತರವಾದ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ
- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸ್ಥಾಪನೆ
- ಸರ್ಕಾರಿ ನೇಮಕಾತಿಯಲ್ಲಿ ಅಲ್ಪ ಸಂಖ್ಯಾತ ಮುಸ್ಲಿಂಮರಿಗೆ 4% ರಷ್ಟು ಮೀಸಲಾತಿ.
- ಜಿಂದಾಲ್ ವಿಜಯನಗರ ಸ್ಟೀಲ್ ಲಿಮಿಟೆಡ್ ಪ್ರಾರಂಭ
- ಇತರೆ ಹಿಂದುಳಿದ ವರ್ಗಗಳಿಗಾಗಿ (ಓಬಿಸಿ) ಹಾವನೂರ್ ಆಯೋಗ ಹಾಗು ಚನ್ನಪ್ಪರೆಡ್ಡಿ ಆಯೋಗದ ಶಿಫಾರಸುಗಳ ಅನುಷ್ಠಾನ
- ಕೆಂಪೆಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸ್ಥಾಪನೆ
- ಕೃಷ್ಣಾ ನದಿಗೆ ಆಲಮಟ್ಟಿ ಅಣೆಕಟ್ಟು ನಿರ್ಮಾಣ – ಅದರ ಮೇಲೆ ಜಲವಿದ್ಯುತ್ ಯೋಜನೆ
- ಘಟಪ್ರಭಾ ಭಾರೀ ನೀರಾವರಿ ಯೋಜನೆ
- ಬಾಗೂರು ನವಿಲೆ ಸುರಂಗ ಮಾರ್ಗದ ಪ್ರಾರಂಭ
- ಕಡಬಘಟ್ಟೆ ಸುರಂಗ
- ಚಟ್ಟಮಗೆರೆ ಸುರಂಗ
- ಕೃಷ್ಣಾ ಜಲಭಾಗ್ಯ ನಿಗಮದ ರಚನೆ
- ಕಾವೇರಿ ನೀರಾವರಿ ನಿಗಮದ ರಚನೆ
- ವಿಶ್ವೇಶ್ವರಯ್ಯ ನೀರಾವರಿ ನಿಗಮದ ರಚನೆ ಬರಮುಕ್ತ ಕರ್ನಾಟಕಕ್ಕೆ
- ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್
- ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ
- ಬೆಂಗಳೂರು ಅಂತರರಾಷ್ಟ್ರೀಯ ಟೆಕ್ ಪಾರ್ಕ್ (ಐಟಿಪಿಬಿ) ಸ್ಥಾಪನೆ – ಭಾರತದ ಯಶೋಗಾಥೆಯ ಮಾದರಿ ಕಥೆ, ನಮ್ಮ ಸರ್ಕಾರದಿಂದ ಎಲೆಕ್ಟ್ರಾನಿಕ್ ಸಿಟಿ ಅಭಿವೃದ್ಧಿ ಮತ್ತು ಬೆಂಗಳೂರನ್ನು ದೇಶದ ಸಾಫ್ಟ್‌ವೇರ್ ಕೇಂದ್ರವಾಗಿಸಿದ್ದು.

### ಯುಪಿಎ I ಮತ್ತು II ಕೆಲವು ಪ್ರಮುಖ ಸಾಧನೆಗಳು

- ಮಾಹಿತಿ ಹಕ್ಕು ಕಾಯ್ದೆ
- ಶಿಕ್ಷಣದ ಹಕ್ಕು ಕಾಯ್ದೆ
- ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಯೋಜನೆ
- ಕಂಪನಿ ಕಾಯ್ದೆ
- ರೈತರಿಗೆ ನ್ಯಾಯಯುತ ಪರಿಹಾರ, ಭೂಸ್ವಾಧೀನದಲ್ಲಿ ಪಾರದರ್ಶಕತೆ, ಹಾಗು ಪುನರ್ವಸತಿ ಕಾಯ್ದೆ
- ದಭೋಲ್ ನಿಂದ ಬೆಂಗಳೂರಿಗೆ ಅನಿಲ ಕೊಳವೆ – ಜಿಎಐಎಲ್.
- ಮನೆಗಳಿಗೆ ಅನಿಲ ಪೂರೈಕೆಗೆ ಸಿಟಿ ಗ್ಯಾಸ್ ರಚನೆ
- ಮಂಗಳೂರು ಮತ್ತು ಉಡುಪಿಯ ಪಡೂರ್ ನಲ್ಲಿ ಕಚ್ಚಾ ತೈಲದ ರಿಸರ್ವ್
- ಬೆಂಗಳೂರಿನಲ್ಲಿ ಮೆಟ್ರೋ ರೈಲ್ ನಮ್ಮ ಬೆಂಗಳೂರು
- ಕೊಚಿ–ಕುಟ್ಟನಾಡ್–ಬೆಂಗಳೂರು–ಮಂಗಳೂರು ಅನಿಲ ಕೊಳವೆ ಯೋಜನೆ
- ಮಂಗಳೂರಿನಲ್ಲಿ ಎಲ್.ಎನ್.ಜಿ. ನಿಲುಗಡೆಯನ್ನು ಪ್ರಾರಂಭಿಸಲು ಕಾರ್ಯಸಾಧ್ಯತೆಯ ವರದಿ
- ಕೊಚ್ಚಿ ಮಂಗಳೂರು ಅನಿಲ ಕೊಳವೆ ಯೋಜನೆ
- ಭಾರತದ ಒಂದು ಯಶಸ್ವಿ ಎಸ್‌ಇಝಡ್‌ಗಳಲ್ಲಿ ಒಂದಾದ ಮಂಗಳೂರು ವಿಶೇಷ ಆರ್ಥಿಕ ವಲಯ (ಎಮ್‌ಎಸ್‌ಇಝಡ್)ದ ರಚನೆ ಎಮ್‌ಎಸ್‌ಇಝಡ್ ಭಾರತದಲ್ಲಿ ಒಂದು ಬಹು ಉತ್ಪಾದಕ ಎಸ್‌ಇಝಡ್ ಆಗಿ ಅತಿ ಮಹತ್ವದ ಕ್ರಿಯಾಶೀಲವಾದ ಯೋಜನೆಯಾಗಿದೆ.
- ಎಮ್.ಆರ್.ಪಿ.ಎಲ್ ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ ಲಿಮಿಟೆಡ್ ವಿಸ್ತರಣೆ.

## ಕರ್ನಾಟಕದಲ್ಲಿ

# ಕಾಂಗ್ರೆಸ್ ಸರ್ಕಾರದ ಸಾಧನೆಗಳು

**(2013–2018)**

- ಬಸವಣ್ಣ, ಮಹಾತ್ಮ ಗಾಂಧಿ, ಪಂಡಿತ್ ಜವಹರ್ ಲಾಲ್ ನೆಹರು, ಡಾ.ಬಿ.ಆರ್.ಅಂಬೇಡ್ಕರ್, ಶ್ರೀಮತಿ. ಇಂದಿರಾಗಾಂದಿ, ರಾಜೀವ್ ಗಾಂಧಿ, ಡಾ. ಮನ್ ಮೋಹನ್ ಸಿಂಗ್ ಮತ್ತು ದೇವರಾಜ ಅರಸು ಇವರು ನಮ್ಮ ಅಭಿವೃದ್ಧಿ ಮಾದರಿಯ ಹರಿಕಾರರಾಗಿದ್ದಾರೆ.

- ಕರ್ನಾಟಕದಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರವು ತನ್ನದೇ ಬಲದ ಮೇಲೆ 2013 ರ ಮೇ ತಿಂಗಳಿನಲ್ಲಿ ಅಧಿಕಾರಕ್ಕೆ ಬಂದ ನಂತರ ಕಳೆದ 5 ವರ್ಷಗಳಲ್ಲಿ ರಾಜ್ಯದ ಜನತೆಯ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯಲ್ಲಿ ಆಗಿರುವ ಸುಧಾರಣೆಗಳು, ಸಾಮಾಜಿಕ ಹಾಗೂ ಆರ್ಥಿಕ ಸೂಚಕಗಳಲ್ಲಿ ಬಿಂಬಿಸುತ್ತಿವೆ.

- ಬೆಂಗಳೂರಿನಲ್ಲಿ ನಡೆದ 3 ದಿನಗಳ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅಂತರರಾಷ್ಟ್ರೀಯ ಸಮ್ಮೇಳನವು ಭಾರತೀಯ ಸಂವಿಧಾನದ ಪಿತಾಮಹನಿಗೆ ಮತ್ತು ಅವರ ಚಿಂತನೆಗಳಿಗೆ ಒಂದು ಅರ್ಥಪೂರ್ಣ ಗೌರವ ಸಮರ್ಪಣೆಯಾಗಿದೆ.

- ರಾಜ್ಯ ಸರ್ಕಾರದಿಂದ ನಡೆಸಲಾಗುವ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ಕ್ಷೀರ ಭಾಗ್ಯ ಯೋಜನೆಯಲ್ಲಿ ರಾಜ್ಯದ 1 ಕೋಟಿ ವಿದ್ಯಾರ್ಥಿಗಳಿಗೆ ವಾರದಲ್ಲಿ 5 ದಿನ ಹಾಲು ಮತ್ತು ಕರ್ನಾಟಕದ ಅಂಗನವಾಡಿ ಕೇಂದ್ರಗಳ 60 ಲಕ್ಷ ಮಕ್ಕಳಿಗೆ ಮೊಟ್ಟೆಗಳನ್ನು ಕೊಡಲಾಗುತ್ತಿದೆ ಇದು ಭೌಗೋಳಿಕವಾಗಿದ್ದು ಭಾರತ ಏಳನೇ ದೊಡ್ಡ ರಾಜ್ಯವಾಗಿದೆ (191791 ಚ.ಕಿ.ಮೀ) ಕರ್ನಾಟಕದ ರಾಜ್ಯ ತಲಾ ಆದಾಯ (ಎನ್‌ಎಸ್‌ಡಿಪಿ) 2016–17 ರಲ್ಲಿ ಅಂದಾಜು ರೂ. 1,59,893 ಆಗಿದೆ.

- ಉತ್ತಮ ಆಡಳಿತ ಮತ್ತು ಬೆಳವಣಿಗೆ ಆಧಾರದ ಸಾಮಾಜಿಕ ನ್ಯಾಯ, ಜ್ಯಾತ್ಯಾತೀತ ಮೌಲ್ಯಗಳು ಮತ್ತು ಪ್ರಜಾತಾಂತ್ರಿಕವಾದ ಎಲ್ಲರಿಗೂ ಸಮಾನ ಅವಕಾಶಗಳೆಂಬ ನೀತಿಗಳಿಂದ ನವಕರ್ನಾಟಕವನ್ನು ನಿರ್ಮಿಸಿದೆ, ಸರ್ಕಾರವು ಸಮಾಜದ ಎಲ್ಲಾ ವರ್ಗದವರ ಕಲ್ಯಾಣಕ್ಕಾಗಿ ಅವಿರತ ಶ್ರಮಿಸುತ್ತಿದೆ.

- ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಬರಗಾಲ ತಾಂಡವವಾಡುತ್ತಿದೆ. ನಮ್ಮ ಸರ್ಕಾರವು ಬರಗಾಲವನ್ನು ಸಮರ್ಥವಾಗಿ ಎದುರಿಸಿದೆ ಹಾಗೂ ರೈತರ ಸಹಾಯಕ್ಕೆ ಧಾವಿಸಿದೆ. ಬೀಜಗಳು ಮತ್ತು ಗೊಬ್ಬರಗಳನ್ನು ಸಮಯಕ್ಕೆ ಸರಿಯಾಗಿ ರೈತರಿಗೆ ಒದಗಿಸಲಾಗಿದೆ. ಸುಮಾರು 1.2 ಲಕ್ಷ ಕೃಷಿ ಹೊಂಡಗಳನ್ನು ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ರೈತರಿಗಾಗಿ ನಿರ್ಮಿಸಲಾಗಿದೆ. ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಬೃಹತ್ ಮೊತ್ತದ ಸಾಲ ವಿತರಣೆ ಮಾಡಲಾಗಿದೆ.

- ಶ್ರೀ ಸಿದ್ದರಾಮಯ್ಯನವರು ಮುಖ್ಯ ಮಂತ್ರಿಗಳಾಗಿ ಕರ್ನಾಟಕವು ತನ್ನದೇ ಅಭಿವೃದ್ಧಿ ಮಾದರಿಯನ್ನು ರಚಿಸಿರುವುದನ್ನು ಖಾತರಿಗೊಳಿಸಿದ್ದಾರೆ.

- 2013-2017 ರ ವರೆಗಿನ ಕರ್ನಾಟಕ ಮುಂಗಡ ಪತ್ರದಲ್ಲಿ ಬೆಳವಣಿಗೆ ಆಧಾರಿತ ರಾಜ್ಯವಾಗಿರುವುದು ಕಂಡುಬಂದಿದೆ.
- ಕರ್ನಾಟಕದ ವೆಬ್‌ಸೈಟ್ ಪ್ರತಿಬಿಂಬದ ಪ್ರಾರಂಭದಿಂದ ರಾಜ್ಯದಾದ್ಯಂತ ಜನರು ಅಭಿವೃದ್ಧಿಯ ಪ್ರಗತಿಯನ್ನು ಪರೀಕ್ಷಿಸಬಹುದು.
- ಮುಂಚೂಣಿ ಕಾರ್ಯಕ್ರಮಗಳಾದ ಕೃಷಿ ಭಾಗ್ಯ, ವಸತಿ ಯೋಜನೆಗಳು, ವಿದ್ಯಾಶ್ರೀ, ಅನ್ನಭಾಗ್ಯ, ಶುದ್ಧ ಕುಡಿಯುವ ನೀರು ಯೋಜನೆಗಳು, ನರೇಗಾ ಕಾರ್ಯಕ್ರಮಗಳು, ಪಶು ಭಾಗ್ಯ ಯೋಜನೆಗಳು, ಕ್ಷೀರ ಭಾಗ್ಯ ಯೋಜನೆಗಳು, ಮೈತ್ರಿ, ಮನಸ್ವಿನಿ
- ಅನ್ನಭಾಗ್ಯ ಯೋಜನೆಯಡಿಯಲ್ಲಿ 3.5 ಕೋಟಿ ಜನರು ಅನುಕೂಲ ಪಡೆದುಕೊಂಡಿದ್ದಾರೆ. ಬಿಪಿಎಲ್ (ಬಡತನ ರೇಖೆಯಿಂದ ಕೆಳಗಿರುವವರ)ಕುಟುಂಬಗಳ 1 ಕೋಟಿಗೂ ಅಧಿಕ ಜನರಿಗೆ  ಉಚಿತ ಆಹಾರ ಧಾನ್ಯಗಳನ್ನು ಒದಗಿಸಲಾಗಿದೆ.
- 10,000 ಶುದ್ಧ ಕುಡಿಯುವ ನೀರಿನ ಆರ್ ಓ ಘಟಕಗಳನ್ನು ಸ್ಥಾಪನೆ ಮಾಡಲಾಗಿದ್ದು ಇವುಗಳ ಮೂಲಕ ಶುದ್ಧ ಕುಡಿಯುವ ನೀರನ್ನು ಗ್ರಾಮೀಣ ಪ್ರದೇಶದ ಜನರಿಗೆ ಒದಗಿಸಲಾಗುತ್ತಿದೆ.
- ಪ್ರಗತಿಪರ ಗ್ರಾಮ ಸ್ವರಾಜ್ ಮತ್ತು ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ 2015 ನ್ನು ಅನುಷ್ಠಾನಗೊಳಿಸಲಾಗಿದೆ.
- ಇಂದಿರಾ ಕ್ಯಾಂಟೀನ್ ಪ್ರಾರಂಭವು ಇತಿಹಾಸದಲ್ಲಿ ಒಂದು ಹೊಸ ಮೈಲಿಗಲ್ಲಾಗಿದೆ, ಇದು ಬಡಜನತೆಗೆ ಮಾಡಿರುವ ಮಹದುಪಕಾರವಾಗಿದೆ.
- ಹಿಂದುಳಿದ ವರ್ಗ ಮತ್ತು ಪಂಗಡದವರ (ಎಸ್‌ಸಿ/ಎಸ್‌ಟಿ) ಅಭಿವೃದ್ಧಿಗಾಗಿ 2013 ರ ಉಪಯೋಜನೆ ಕಾಯಿದೆಯನ್ನು ಜಾರಿಗೆ ತರಲಾಗಿದೆ. ಅವರ ಜನಸಂಖ್ಯೆಯ ಆಧಾರದ ಮೇಲೆ, ಶೇಕಡಾ 24.10 ರಷ್ಟು ಮುಂಗಡ ಪತ್ರದಲ್ಲಿ ಹಣ ಕಾಯ್ದಿರಿಸಿರುವುದು ಅವರ ಕಲ್ಯಾಣದ ಹೆಗ್ಗುರುತಾಗಿದೆ. ಎಸ್‌ಸಿಪಿ/ಎಸ್‌ಟಿಪಿ ನಿಧಿಯನ್ನು ಬಳಸಿಕೊಳ್ಳಲು ವಿಶೇಷ ಕಾಯಿದೆಯನ್ನು ಜಾರಿಗೊಳಿಸಲಾಗಿದೆ.
- ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.
- ಕರ್ನಾಟಕ ಭೂ ಸುಧಾರಣಾ ಕಾಯಿದೆ(ತಿದ್ದುಪಡಿ)ಯಿಂದ 58,000 ನಿವಾಸಿಗಳಿಗೆ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗಿದೆ ಅಲ್ಲದೆ ಆ ನಿವಾಸಿಗಳಿಗೆ ಸ್ವತ್ತಿನ ಮಾಲೀಕತ್ವದ ಹಕ್ಕನ್ನು ನೀಡಲಾಗಿದೆ.
- 2015-20 ಕ್ಕೆ ಹೊಸ ಪ್ರವಾಸೋದ್ಯಮ ನೀತಿಯನ್ನು ಜಾರಿಗೊಳಿಸಲಾಗಿದ್ದು ಇದು ಪ್ರವಾಸೋದ್ಯಮಕ್ಕೆ ಒತ್ತು ಕೊಡುತ್ತದೆ ಮತ್ತು ಈ ಕ್ಷೇತ್ರದಲ್ಲಿ ಹೂಡಿಕೆಯನ್ನು ಪ್ರೋತ್ಸಾಹಿಸುತ್ತದೆ ಇದೊಂದು ಪವಿತ್ರ ದಾಖಲೆಯಾಗಿದ್ದು ಮುಂಬರುವ ವರ್ಷಗಳಲ್ಲಿ ಕರ್ನಾಟಕವು ಪ್ರವಾಸೋದ್ಯಮ ನಕ್ಷೆಯಲ್ಲಿ ಮೇಲಕ್ಕೇರಲಿದೆ.
- ರಾಜ್ಯವನ್ನು ಗುಡಿಸಲು ಮುಕ್ತರಾಜ್ಯವನ್ನಾಗಿಸಲು ಮತ್ತು ಎಲ್ಲರಿಗೂ ಸೂರನ್ನು ಒದಗಿಸಲು ಇದುವರೆಗೆ 11.75 ಲಕ್ಷ ಮನೆಗಳನ್ನು ನಿರ್ಮಿಸಲಾಗಿದೆ ಅಲ್ಲದೆ ಇನ್ನೂ 7 ಲಕ್ಷ ಮನೆಗಳನ್ನು ಈ ವರ್ಷಕ್ಕೆ ಮಂಜೂರು ಮಾಡಲಾಗಿದೆ.
- ನಮ್ಮ ಸರ್ಕಾರವು ರೈತರಿಗೆ ಮತ್ತು ಸ್ತ್ರೀ ಶಕ್ತಿ ಸಂಘಗಳಿಗೆ 3 ಲಕ್ಷಗಳವರೆಗೆ ಬಡ್ಡಿರಹಿತ ಸಾಲವನ್ನು  ಒದಗಿಸಿದೆ. 22,27,506 ರೈತರು ಪಡೆದುಕೊಂಡಿದ್ದ  ರೂ.8165 ಕೋಟಿಗಳಷ್ಟು ಬೆಳೆ ಸಾಲದಲ್ಲಿ ರೂ.50,000 ಗಳಷ್ಟು ಪ್ರತಿ ರೈತರಿಗೆ 20 ಜೂನ್ 2017 ರ ವರೆಗೆ ಮನ್ನಾ ಮಾಡಲಾಗಿದೆ.
- ನೀರಾವರಿಯು ರಾಜ್ಯ ಸರ್ಕಾರದ ಆದ್ಯ ಪ್ರಾಮುಖ್ಯತೆಯಾಗಿದೆ. ಸರ್ಕಾರವು ಬೃಹತ್ ಮತ್ತು ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳಿಗಾಗಿ ರೂ.50,000 ಕೋಟಿಗಳಷ್ಟನ್ನು ನಿಗಧಿಪಡಿಸಿದೆ, ಇದರಿಂದ ರಾಜ್ಯದಾದ್ಯಂತ ನೀರಾವರಿ ಸಾಮರ್ಥ್ಯವು ಕಳೆದ ನಾಲ್ಕು ವರ್ಷಗಳಲ್ಲಿ 6.40,900 ಎಕರೆಗಳಿಗೆ ವಿಸ್ತರಿಸಿದೆ.
- ಕರ್ನಾಟಕದ ಪಶು ಸಂಗೋಪನೆ ಮತ್ತು ಜಾನುವಾರುಗಳ ಕ್ಷೇತ್ರವು ಗ್ರಾಮೀಣ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಲಿದೆ.
- ರಾಜ್ಯದಲ್ಲಿ 161 ಕೃಷಿ ಉತ್ಪನ್ನ ಮಾರುಕಟ್ಟೆಗಳಿದ್ದು ಕೃಷಿ ಉತ್ಪನ್ನಗಳ ಮಾರುಕಟ್ಟೆಯನ್ನು ನಿಯಂತ್ರಿಸುತ್ತವೆ ಮತ್ತು ಸಹಾಯ ಮಾಡುತ್ತಿವೆ.
- ಮಾರುಕಟ್ಟೆ ಸುಧಾರಣೆಗಾಗಿ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಹುಬ್ಬಳ್ಳಿಯಲ್ಲಿ 2015 ರಲ್ಲಿ ಏರ್ಪಡಿಸಲಾಗಿತ್ತು
- ಕರ್ನಾಟಕ ಹಾಲು **ಒಕ್ಕೂಟ** ರಾಜ್ಯದ ಗ್ರಾಮೀಣ ಹಾಲು ಉತ್ಪಾದಕರಿಗೆ ಪರಿಹಾರಾತ್ಮ ಧಾರಣೆಗಳನ್ನು ನೀಡುವ ಜವಾಬ್ದಾರಿಯನ್ನು ಹೊಂದಿದೆ ಮತ್ತು ಗ್ರಾಹಕರಿಗೆ ಶುದ್ಧ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪೂರೈಸುವ ಜವಾಬ್ದಾರಿಯನ್ನು ಹೊಂದಿದೆ. ರಾಜ್ಯ ಸರ್ಕಾರವು ಪ್ರತಿ ಲೀಟರ್ ಗೆ ರೂ.5/ರಂತೆ ಸಬ್ಸಿಡಿಯನ್ನು ನೀಡುತ್ತಿದೆ.
- ಕರ್ನಾಟಕದ ವಾರ್ಷಿಕ ಮೀನು ಉತ್ಪಾದನೆಯು ಗಣನೀಯ ಹೆಚ್ಚಳವನ್ನು ತೋರಿಸಿದ್ದು ಅದು 6 ಲಕ್ಷ ಮೆಟ್ರಿಕ್ ಟನ್ ಆಗಿದೆ. ರಾಜ್ಯವು ದೇಶದಲ್ಲಿ 6 ನೇ ಹೆಚ್ಚು ಮೀನು ಉತ್ಪಾದಕ ರಾಜ್ಯವಾಗಿದೆ.
- ತೋಟಗಾರಿಕೆ ವಲಯವು ನಮ್ಮ ರಾಜ್ಯದ ಒಂದು ಪ್ರಮುಖ ಆರ್ಥಿಕ ಭಾಗವಗಿ ಹೊರಹೊಮ್ಮಿದೆ.
- ಸರ್ಕಾರವು ಪರಿಸರ ಸ್ನೇಹಿ ಹೊಸ ಮರಳು ನೀತಿಯನ್ನು ಪ್ರಾರಂಭಿಸಿದೆ.
- ರಾಜ್ಯದಲ್ಲಿ ರೇಷ್ಮೆ ಉದ್ಯೋಗ ಸೃಷ್ಟಿಸುವ ಒಂದು ಪ್ರಮುಖವಾದ ಕ್ಷೇತ್ರವಾಗಿದೆ ಸರ್ಕಾರವು ರೈತರಿಗೆ ಸಬ್ಸಿಡಿ ಮತ್ತು ಇತರೆ ಮೂಲಸೌಕರ್ಯಗಳ ಸೌಲಭ್ಯಗಳನ್ನು

ಆಧುನಿಕ ರೇಷ್ಮೆ ಕೈಗಾರಿಕೆಗೆ ನೀಡುತ್ತಿದೆ.

- ಇಡೀ ಕೃಷಿ ಕ್ಷೇತ್ರಕ್ಕೆ ಉಚಿತ ವಿದ್ಯುತ್ ಪೂರೈಕೆ ಮಾಡಲಾಗುತ್ತಿದ್ದು ಸಬ್ಸಿಡಿಯ ಮೂಲಕ **ರೈತರಿಗೆ ಉತ್ತೇಜನ ನೀಡಲಾಗುತ್ತಿದೆ.** ಸೌರ ವಿದ್ಯುತ್‌ಗೆ **ಹೆಚ್ಚಿನ** ಪ್ರೋತ್ಸಾಹ ನೀಡಿದ್ದು ತನ್ನ ಸೌರ ಶಕ್ತಿ ನೀತಿಗಳನ್ನು **ಅನುಷ್ಠಾನಗೊಳಿಸಿದೆ.**

- ಸರ್ಕಾರವು ವೈದ್ಯಕೀಯ, ಇಂಜಿನಿಯರಿಂಗ್, ಪಾಲಿಟೆಕ್ನಿಕ್, ಸ್ನಾತಕೋತ್ತರ ಕೋರ್ಸ್‌ಗಳನ್ನು ಪಡೆಯುತ್ತಿರುವ 1.5 ಲಕ್ಷ ವಿದ್ಯಾರ್ಥಿಗಳನ್ನು ಐಟಿ ಆಧಾರಿತ ಶಿಕ್ಷಣದತ್ತ ಸೆಳೆಯಲು ಉಚಿತ ಲ್ಯಾಪ್ ಟಾಪ್‌ಗಳನ್ನು ಒದಗಿಸುತ್ತಿದೆ.

- ರಾಯಚೂರು ಮತ್ತು **ಯಾದಗಿರಿ** ಜಿಲ್ಲೆಗಳಲ್ಲಿ ಉನ್ನತ ಶಿಕ್ಷಣವನ್ನು ಉತ್ತೇಜಿಸಲು ರಾಯಚೂರಿನಲ್ಲಿ ಹೊಸ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುತ್ತಿದೆ.

- ಬೆಂಗಳೂರು ವಿಶ್ವವಿದ್ಯಾಲಯವನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದು – ಉತ್ತರ, ದಕ್ಷಿಣ, ಮತ್ತು ಸೆಂಟ್ರಲ್ ಯೂನಿವರ್ಸಿಟಿಗಳನ್ನಾಗಿ ಮಾಡಲಾಗಿದೆ.

- ಡಾ.ಬಿ.ಆರ್. ಅಂಬೇಡ್ಕರ್ **ವಾಣಿಜ್ಯಶಾಸ್ತ್ರ** ಶಾಲೆಯ (ಸ್ಕೂಲ್ ಆಫ್ ಎಕನಾಮಿಕ್ಸ್)ನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ.

- ಯುದ್ಧ ಅಥವಾ ಯುದ್ಧದಂತಹ ಸನ್ನಿವೇಶಗಳಲ್ಲಿ **ಅಂಗವಿಕಲರಾದ** ಅಥವಾ ಹುತಾತ್ಮರಾದ ಸೈನಿಕರ ಕುಟುಂಬದ ಒಬ್ಬರು ಅವಲಂಬಿತ ಸದಸ್ಯರಿಗೆ ಸರ್ಕಾರಿ ನೌಕರಿಯನ್ನು ನೀಡಲಾಗಿದೆ.

- ರಾಜ್ಯವನ್ನು ಸೀಮೆ ಎಣ್ಣೆ ಮುಕ್ತ ರಾಜ್ಯವಾಗಿಸಲು ಬಡ ಕುಟುಂಬಗಳಿಗೆ ಅಡುಗೆ ಅನಿಲ ಸಂಪರ್ಕವನ್ನು ಉಚಿತವಾಗಿ ಒದಗಿಸಲಾಗುತ್ತಿದೆ.

- ನಮ್ಮ ದೇಶದ **ಐಕ್ಯತೆಯ ಶಕ್ತಿಯೆಂದರೆ** ಅದು ವಿವಿಧತೆಯಲ್ಲಿ ಏಕತೆಯಾಗಿದ್ದು ವಿವಿಧತೆಯ ಮೂಲಕ ಪ್ರತಿ ರಾಜ್ಯವೂ ತನ್ನದೆ ಆದ ಅಧಿಕೃತ ಭಾಷೆಯನ್ನು ಹೊಂದಿದೆ ಮತ್ತು ಸಂವಿಧಾನವು ಆ ಭಾಷೆಯ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತದೆ. ಆದ್ದರಿಂದ ನಮ್ಮ ಕನ್ನಡ ಭಾಷೆಯ ಪ್ರಾಮುಖ್ಯತೆಯೊಂದಿಗೆ ರಾಜಿ ಮಾಡಿಕೊಳ್ಳಲಾಗುವುದಿಲ್ಲ, ಇತರೆ ಭಾಷೆಗಳನ್ನು ಕಲಿಯಲು ಅವಕಾಶಗಳನ್ನೂ ಸಹ ನೀಡಲಾಗಿದೆ ಎನ್ನುತ್ತಾರೆ ಶ್ರೀ.ಸಿದ್ದರಾಮಯ್ಯ.

- ಆರೋಗ್ಯ ಭಾಗ್ಯ ಯೋಜನೆಯು ಸಾಮಾನ್ಯ ಜನರ ಆಶೋತ್ತರಗಳಿಗೆ ಒಂದು ವರವಾಗಿದೆ. ಇಂತಹ ಯೋಜನೆಗಳು ಸುಮಾರು 1.3 ಕೋಟಿ ಕುಟುಂಬಗಳನ್ನು ಒಳಗೊಳ್ಳಲಿದ್ದು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ಕೆಲವು ಆಯ್ದ ಖಾಸಗೀ ಆಸ್ಪತ್ರೆಗಳಲ್ಲಿ ನಗದು ರಹಿತ ಚಿಕಿತ್ಸೆಯನ್ನು ಒದಗಿಸುತ್ತದೆ.

- ಸರ್ಕಾರವು ಸುಮಾರು 10 ಲಕ್ಷ ಗರ್ಭಿಣಿ ಮಹಿಳೆಯರಿಗೆ ಮಾತೃಪೂರ್ಣ ಯೋಜನೆಯೊಂದಿಗೆ ಆಹಾರ ಒದಗಿಸುತ್ತಿದೆ ಮತ್ತು ರಾಜ್ಯದಾದ್ಯಂತ ಮಹಿಳೆಯರಿಗೆ ಪೌಷ್ಟಿಕಾಂಶಯುಕ್ತ ಊಟದೊಂದಿಗೆ ಹಾಲನ್ನು ಒದಗಿಸುತ್ತಿದೆ.

- 2016-17 ರಲ್ಲಿ ರಾಷ್ಟ್ರೀಯ ತಲಾ ಆದಾಯವು ರೂ. 1,03,007 ಗಳನ್ನು ಮುಟ್ಟುವ ಅಂದಾಜಿದೆ.

- ಕರ್ನಾಟಕದ ಹಣಕಾಸು ಸ್ಥಿತಿಯು ಬಲಿಷ್ಠ ಮತ್ತು ಸ್ಥಿರವಾಗಿದೆ. ರಾಜ್ಯದ ಹಣಕಾಸು ಏಕೀಕರಿಸುವ ಪ್ರಯತ್ನಗಳು ಮುಂದುವರಿದಿದ್ದು ಕರ್ನಾಟಕ ಹಣಕಾಸು ಜವಾಬ್ದಾರಿ ಕಾಯಿದೆ 2002ರೊಳಗಿನ ನಿಗಧಿತ ಮಿತಿಯೊಳಗೆ ಎಲ್ಲಾ ಹಣಕಾಸು ಸೂಚಕಗಳಲ್ಲಿ ಪರಿಣಾಮಕಾರಿಯಾಗಿರಲಿವೆ.

- ಕರ್ನಾಟಕವು ಮುಂಗಡಪತ್ರದಲ್ಲಿ ಲಿಂಗ ಸಮಾನತೆ ಮತ್ತು ಲಿಂಗಾಧಾರಿತ ಆಯವ್ಯಯ ಮಂಡನೆ ಮಾಡಿರುವುದು ಒಂದು ಪ್ರಮುಖ ಹೆಜ್ಜೆಯಾಗಿದೆ.

- ಕರ್ನಾಟಕದ ಹೂಡಿಕೆದಾರ ಸ್ನೇಹಿ **ನೀತಿ** ಮತ್ತು ಜವಾಬ್ದಾರಿಯುತ ಆಡಳಿತವು ಕಾಲಕಾಲಕ್ಕೆ ಖಾಸಗೀ ಹೂಡಿಕೆದಾರರನ್ನು ಆಕರ್ಷಿಸುವಲ್ಲಿ ಪ್ರಚೋದನಕಾರಿಯಾಗಿದೆ ಅಲ್ಲದೆ ಅನೇಕ ಸುಧಾರಣಾ ಉಪಕ್ರಮಗಳನ್ನು ತೆಗೆದುಕೊಂಡು ಜಾಗತಿಕ ಹೂಡಿಕೆಗಳಿಗೆ ಕರ್ನಾಟಕವನ್ನು ಸ್ಪರ್ಧಾತ್ಮಕ ಮತ್ತು ಆಕರ್ಷಕ ಗಮ್ಯಸ್ಥಳವನ್ನಾಗಿಸಿದೆ.

- ಕರ್ನಾಟಕವು ವಿದೇಶೀ ಹೂಡಿಕೆಗಳ ಐದು **ಪ್ರಮುಖ** ಸ್ಥಳಗಳಲ್ಲಿ ಒಂದಾಗಿದೆ.

- ಕರ್ನಾಟಕವು ಭಾರತೀಯ ಮಾಹಿತಿ ತಂತ್ರಜ್ಞಾನ ಕ್ರಾಂತಿಯಲ್ಲಿ ಪ್ರವರ್ತಕ ರಾಜ್ಯವಾಗಿದೆ. ಬೆಂಗಳೂರು ವಿಶ್ವದ 4 ನೇ ಅತ್ಯುತ್ತಮ ತಂತ್ರಜ್ಞಾನ ಕೇಂದ್ರವಾಗಿದೆ.

- ಜಾಗತಿಕ ಜೈವಿಕ ತಂತ್ರಜ್ಞಾನ ಉದ್ಯಮದಲ್ಲಿ ಭಾರತದಲ್ಲಿ ಉದಯವಾಗುತ್ತಿರುವ ರಾಜ್ಯಗಳಲ್ಲಿ ಕರ್ನಾಟಕವು ಪ್ರಮುಖ ಪಾತ್ರವನ್ನು ವಹಿಸುತ್ತಿದೆ.

- ಜಾಗತಿಕ ಮಾರುಕಟ್ಟೆಯಲ್ಲಿ **ಬೌದ್ಧಿಕ** ಮಾರುಕಟ್ಟೆಯೆಂಬ ಹೆಗ್ಗಳಿಕೆಯನ್ನು ಹೊಂದಿದೆ ಮತ್ತು ದೇಶದ ತಂತ್ರಜ್ಞಾನ ರಾಜಧಾನಿಯಾಗಿದೆ.

- ಭಾರತೀಯ ಉದ್ಯಮ ಬೆಳವಣಿಗೆಯಲ್ಲಿ ಭಾರತವು ಮುಂಚೂಣಿ ಶಕ್ತಿಯಾಗಿದೆ.

- ಕರ್ನಾಟಕವು ದೇಶದಲ್ಲಿ ರಾಜ್ಯ ಟೆಕ್ಸ್‌ಟೈಲ್ ನೀತಿಯನ್ನು ಪ್ರಾರಂಭಿಸಿದ ಪ್ರಥಮ ರಾಜ್ಯವಾಗಿದೆ ಇದರ ಗುರಿ 2018 ರಲ್ಲಿ ರೂ.10,000 ಕೋಟಿಗಳಷ್ಟು ಹೂಡಿಕೆಯನ್ನು ಆಕರ್ಷಿಸುವುದು.

- ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದ ಪ್ರವಾಸೋದ್ಯಮವು ಪ್ರವಾಸೋದ್ಯಮ ಅಭಿವೃದ್ಧಿ ವರ್ಗದಲ್ಲಿ ಕರ್ನಾಟಕಕ್ಕೆ ಮೂರನೇ ಅತ್ಯುತ್ತಮವೆಂಬ ಸ್ಥಾನ ದೊರಕಿದೆ

- ರಾಜ್ಯ ಸರ್ಕಾರವು ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸಲು ಹೊಸದಾದ ಸ್ಥಾಪನೆಗಳನ್ನು

ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಸಲು ಅನೇಕ ಉಪಕ್ರಮಗಳನ್ನು ತೆಗೆದುಕೊಂಡಿದೆ

- ಸರ್ಕಾರವು ರಸ್ತೆ ಅಭಿವೃದ್ಧಿ, ಗ್ರಾಮೀಣ ರಸ್ತೆಗಳು, ಜಿಲ್ಲಾ ಮುಖ್ಯ ರಸ್ತೆಗಳು, ರಾಜ್ಯ ಹೆದ್ದಾರಿಗಳು, ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೆತ್ತಿಕೊಂಡಿದೆ.

- ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಯು ಮೂರು ಕರಾವಳ ಜಿಲ್ಲೆಗಳಲ್ಲಿ ಕಡಲ ಕೊರೆತವನ್ನು ತಡೆಯಲು ಕೊರೆತವಾಗುವ ಸ್ಥಳಗಳಲ್ಲಿ 2000 ಮೀಟರುಗಳಷ್ಟು ಉದ್ದದ ತಡೆಗೋಡೆಯನ್ನು ನಿರ್ಮಿಸಿದೆ.

- ರೈಲುಗಳನ್ನು ಹೆಚ್ಚಿಸುವ ದೃಷ್ಟಿಯಿಂದ ಮತ್ತು ಅನುಷ್ಠಾನದ ಅವಕಾಶಗಳನ್ನು ಹೆಚ್ಚಿಸಲು ರೈಲ್ವೆ ಸಚಿವಾಲಯದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಹೊಸ ರೈಲ್ವೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲು 50:50 ವೆಚ್ಚವನ್ನು ಭರಿಸುವ ಆಧಾರದ ಮೇಲೆ ಒಪ್ಪಿದೆ

- ಕರ್ನಾಟಕ ರಾಜ್ಯವು ನ್ಯಾಯಯುತ ಉತ್ತಮ ಅಭಿವೃದ್ಧಿಹೊಂದಿದ ಹಣಕಾಸು ವಿನ್ಯಾಸವನ್ನು ಹೊಂದಿದೆ. ರಾಜ್ಯ ಸರ್ಕಾರವು ನೀತಿಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸಿದ್ದು ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗಾಗಿ ಸಹಕಾರ ನೀಡಿ ಮಹಿಳೆಯರು ಮಕ್ಕಳ ರಕ್ಷಣೆಯ ಭರವಸೆ ನೀಡಿದೆ.

- ಸರ್ಕಾರವು ಮಹಿಳಾ ಸಬಲೀಕರಣಕ್ಕಾಗಿ ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಿದೆ.

- ರಾಜ್ಯ ಸರ್ಕಾರವು ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಆರ್ಥಿಕ ಕಲ್ಯಾಣಕ್ಕಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಿದೆ. ವಿದೇಶೀ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಅಧ್ಯಯನ ಮಾಡುವಂತಹ ವಿದ್ಯಾರ್ಥಿಗಳಿಗೆ ಧನ ಸಹಾಯ ನೀಡಲಾಗುತ್ತಿದೆ. ಅದರ ಗರಿಷ್ಟ ಮೊತ್ತ ಒಂದು ವರ್ಷಕ್ಕೆ ರೂ.10 ಲಕ್ಷಗಳಾಗಿವೆ

- ಮುಸಲ್ಮಾನರು, ಬೌದ್ಧರು, ಜೈನರು,ಕ್ರಿಶ್ಚಿಯನ್ನರು,.ಸಿಖ್ಖರು, ಮತ್ತು ಪಾರ್ಸಿಗಳಂತಹ ಸಮುದಾಯದವರ ಏಳಿಗೆಯನ್ನು ಪ್ರೋತ್ಸಾಹಿಸುತ್ತಿದೆ. ಇತರೆ ಸಮುದಾಯಗಳಿಗೆ ಸಮನಾಗಿ ಸರ್ಕಾರವು ವಿವಿಧ ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸಿದೆ.

- ಯುಪಿಎ ಸರ್ಕಾರವು ಹೈದರಾಬಾದ್ ಕರ್ನಾಟಕ ಪ್ರದೇಶದ ಆರು ಹಿಂದುಳಿದ ಜಿಲ್ಲೆಗಳಿಗೆ ವಿಶೇಷ ಅನುದಾನವನ್ನು ನೀಡಿದೆ. ರಾಜ್ಯ ಸರ್ಕಾರವು ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಲು ಕ್ರಿಯಾ ಯೋಜನೆಯನ್ನು ಅನುಮೋದಿಸಿದೆ, ಅಗತ್ಯ ಅನುದಾನವನ್ನು ಒದಗಿಸಲಾಗಿದೆ.

- ರಾಜ್ಯ ಸರ್ಕಾರವು ದೊಡ್ಡ ಮತ್ತು ವೈವಿಧ್ಯಮಯ ಕೈಗಾರಿಕೆ ಮತ್ತು ವ್ಯವಹಾರ ವಲಯಕ್ಕೆ ಕೌಶಲಯುಕ್ತ ಕಾರ್ಮಿಕ ಪಡೆಯನ್ನು ನಿರ್ಮಾಣ ಮಾಡಲು ಕೌಶಲ್ಯ ನೀತಿಯನ್ನು ಜಾರಿಗೊಳಸಿದೆ.

- ರಾಜ್ಯವು ತಂತ್ರಜ್ಞಾನ ಕ್ರಾಂತಿಯ ಸ್ಥಳವಾಗಿದ್ದು ಬೆಂಗಳೂರು ಭಾರತದ ತಂತ್ರಜ್ಞಾನ ರಾಜಧಾನಿಯಾಗಿದೆ ಮತ್ತು ವಿಶ್ವದ ಹೆಚ್ಚು ಪ್ರಗತಿಪರ ನಗರವಾಗಿದೆ.

- ಅಂತರ್ಜಾಲ ವಿಷಯಗಳಲ್ಲಿ ಪರಿಣಿತಿಯ ಕೇಂದ್ರವಾಗಿದ್ದು ಇವುಗಳೊಂದಿಗೆ ಸಹಭಾಗಿತ್ವವನ್ನು ಹೊಂದಿದೆ.

- ಕೇಂದ್ರ ಸರ್ಕಾರ ಮತ್ತು ಐಟಿ ಉದ್ಯಮದ ಪ್ರಾತಿನಿಧಿಕ ಸಂಸ್ಥೆ, ನಾಸ್ಕಾಂ, ಅನಿಮೇಷನ್, ವಿಷ್ಯುಯಲ್ ಎಫೆಕ್ಟ್ಸ್, ಗೇಮಿಂಗ್ ಅಂಡ್ ಕಾಮಿಕ್ಸ್, ಇದನ್ನು ಸರ್ಕಾರವು ಸ್ಥಾಪನೆ ಮಾಡಿದ್ದು ಕಂಪನಿಗೆ ಬಂಡವಾಳ ಸಹಭಾಗಿತ್ವವನ್ನು ಒದಗಿಸುತ್ತದೆ.

- 2014-19 ರ ಕೈಗಾರಿಕಾ ನೀತಿಯು ಸುಸ್ಥಿರ ಸಮತೋಲಿತ ಕೈಗಾರಿಕಾ ಬೆಳವಣಿಗೆಯ ಮೂಲಕ ಸಮೃದ್ಧ ಕರ್ನಾಟಕವನ್ನು ಕಟ್ಟುವ ಗುರಿಯನ್ನು ಹೊಂದಿದೆ ಮತ್ತು ರಾಜ್ಯದಲ್ಲಿ ಹೆಚ್ಚು ಉದ್ಯೋಗಗಳನ್ನು ಸೃಜಿಸುವ ಗುರಿ ಹೊಂದಿದೆ.

- ಏಷಿಯಾದ ಶೀಘ್ರವಾಗಿ ಬೆಳವಣಿಗೆ ಹೊಂದುತ್ತಿರುವ ಬೆಂಗಳೂರು ನಗರದಲ್ಲಿ ನಿಧಾನಗತಿಯಲ್ಲಿ ಜನಸಂಖ್ಯೆ ಹೆಚ್ಚುತ್ತಿರುವುದನ್ನು ಗಮನದಲ್ಲಿರಿಸಿಕೊಂಡು, ಸಮಗ್ರ ಶೀಘ್ರ ಸಂಚಾರ ವ್ಯವಸ್ಥೆಯನ್ನು ಅನುಷ್ಠಾನಗೊಳಸುವುದರ ಅಗತ್ಯವಿದ್ದು ಇದರಿಂದ ನಮ್ಮ ಮೆಟ್ರೋವನ್ನು ನಿರ್ಮಿಸುವುವು ಅನಿವಾರ್ಯವಾಯಿತು.

- ಸರ್ಕಾರವು ಮೂಲಭೂತ ಸೌಕರ್ಯಗಳನ್ನು ಸೃಜಿಸಲು ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗಾಗಿ ಕ್ರಮಗಳನ್ನು ಕೈಗೊಂಡಿದೆ. ಬೆಂಗಳೂರು ಅಭಿವೃದ್ಧಿಗೆ ಅನೇಕ ಅಭಿವೃದ್ಧಿ ಯೋಜನೆಗಳು ಅಗತ್ಯವಿದ್ದು ಅವುಗಳನ್ನು ಕೈಗೆತ್ತಿಕೊಳ್ಳಲಾಗಿದೆ.

- ಭಾರತೀಯ ಕಾಂಗ್ರೆಸ್ ಒಳಗೊಳ್ಳುವ ವಿಧಾನವನ್ನು ಪ್ರತಿನಿಧಿಸುತ್ತದೆ, ಬೆಳವಣಿಗೆ ಆಧಾರಿತ ಆಧುನಿಕ ಪರಿಕಲ್ಪನೆಗಳು, ವೈಜ್ಞಾನಿಕ ಮನೋಭಾವ, ಜಾತ್ಯಾತೀನ ನಿಲುವು, ಮತ್ತು ಸಾಮಾಜಿಕ ನ್ಯಾಯಗಳನ್ನು ಗಾಂಧಿ, ನೆಹರು ಮತ್ತು ಅಂಬೇಡ್ಕರ್ ಇವರು ಬೋಧಿಸಿದರು.

- ಆದ್ದರಿಂದ ಮೇಲ್ಕಂಡ ಕಾರ್ಯಕ್ರಮಗಳು ಮತ್ತು ನೀತಿಗಳನ್ನು ಶ್ರೀ.ಸಿದ್ದರಾಮಯ್ಯನವರ ನೇತೃತ್ವದ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಮುಖ್ಯಸ್ಥರಾದ ಡಾ.ಜಿ. ಪರಮೇಶ್ವರ್ ಇವರ ಸಹಯೋಗದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರವು ಅನುಷ್ಠಾನಗೊಳಸಿದ್ದು ಇವು ಕರ್ನಾಟಕದ ಬೆಳವಣಿಗೆಗೆ ಉಪಯುಕ್ತವಾಗಿವೆ ಮತ್ತು ರಾಜ್ಯದಲ್ಲಿ ಪಕ್ಷ ಸಂಘಟನೆಯ ವ್ಯವಹಾರಗಳನ್ನು ಬಲಗೊಳಸಿವೆ.

- 2018 ರ ವಿಧಾನ ಸಭಾ ಚುನಾವಣೆಗಳು ಮತ್ತು 2019 ರ ಲೋಕ ಸಭಾ ಚುನಾವಣೆಗಳು ದೇಶ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಗೆ ರಾಜ್ಯಕ್ಕೆ ಅತ್ಯಂತ ನಿರ್ಣಾಯಕವಾದವುಗಳು. ಆದ್ದರಿಂದ ರಾಜ್ಯದ

ಹಿತಾಸಕ್ತಿಯಿಂದ ಕರ್ನಾಟಕದಲ್ಲಿ ಅಧಿಕಾರವನ್ನು ಉಳಿಸಿಕೊಳ್ಳುವುದು ಮತ್ತು ಕಾಂಗ್ರೆಸನ್ನು ಕೇಂದ್ರದಲ್ಲಿ ಅಧಿಕಾರಕ್ಕೆ ತರುವುದಕ್ಕೆ ಕಠಿಣ ಪರಿಶ್ರಮವಹಿಸುವುದು ಅತ್ಯಾವಶ್ಯಕ.

- **ಹಿಂದುಳಿದ** (ಒಬಿಸಿ) ವಿದ್ಯಾರ್ಥಿಗಳಿಗೆ ಅವರು ಪ್ರೌಢಶಾಲಾ ನಂತರದ ಶಿಕ್ಷಣವನ್ನು ವ್ಯವಸ್ಥಿತವಾಗಿ ಪಡೆದುಕೊಳ್ಳಲು ನಾವು 90,998 ಹೊಸ ಹಾಸ್ಟೆಲ್ ಗಳನ್ನು ನಿರ್ಮಿಸಿದ್ದೇವೆ

- **ಪದವಿ ಶಿಕ್ಷಣ** ಇಲಾಖೆಯು 2,034 ಸಹಾಯಕ ಪ್ರೊಫೆಸರ್ ಹುದ್ದೆಗೆ ಆಯ್ಕೆ ಮಾಡಿದ್ದು ಕೆಇಎ ಮೂಲಕ ಖಾಲಿ ಹುದ್ದೆಗಳನ್ನು ತುಂಬಲಿದೆ.

- ನಾವು ಪ್ರತಿ ವರ್ಷ **ಪರಿಶಿಷ್ಟ ಜಾತಿ** (ಎಸ್‌ಸಿ, ಎಸ್‌ಟಿ) **ಮತ್ತು ಹಿಂದುಳಿದ ವರ್ಗ** (ಒಬಿಸಿ) ವಿದ್ಯಾರ್ಥಿಗಳಿಗೆ ಪ್ರವಾಸೋದ್ಯಮ ಇಲಾಖೆಯ ಸಹಯೋಗದೊಂದಿಗೆ ಶೈಕ್ಷಣಿಕ ಪ್ರವಾಸವನ್ನು ಏರ್ಪಡಿಸುತ್ತಿದ್ದೇವೆ

- ವಿದ್ಯಾಶ್ರೀ ಯೋಜನೆಯಲ್ಲಿ, ನಾವು ಬಡ ಒಬಿಸಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ಹಣಕಾಸು ನೆರವನ್ನು ನೀಡಿದ್ದೇವೆ(ರೂ.1,500)ಇದರಲ್ಲಿ ಶೇಕಡಾ 106 ರಷ್ಟು ಸಾಧನೆ ಮಾಡಲಾಗಿದೆ.

- ರಾಜ್ಯ ಸಚಿವ ಸಂಪುಟವು ಇಂಜಿನಿಯರಿಂಗ್, ವೈದ್ಯಕೀಯ, ಪಾಲಿಟೆಕ್ನಿಕ್, ಮತ್ತು **ಪ್ರಥಮ** ದರ್ಜೆ ಕಾಲೇಜುಗಳ ಸುಮಾರು 1.5 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್ ಟಾಪನ್ನು ವಿತರಿಸಿದ್ದೇವೆ ಮತ್ತು 1.19 ಲಕ್ಷ ವಿದ್ಯಾರ್ಥಿನಿಯರಿಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಉಚಿತ ಶಿಕ್ಷಣಕ್ಕೆ ಸಹಾಯ ಮಾಡಿದ್ದೇವೆ.

- ನಾಗರೀಕರ ಆರೋಗ್ಯ ಹಕ್ಕನ್ನು ರಕ್ಷಿಸುವ ಸಾರ್ವತ್ರಿಕ ಆರೋಗ್ಯ ವಿಮಾ ವ್ಯಾಪ್ತಿಯನ್ನು( ಯುಹೆಚ್‌ಸಿ)ಪ್ರಾರಂಭಿಸಿರುವ ಮೊದಲ ರಾಜ್ಯವಾಗಿದೆ.

- ದೇಶದಲ್ಲಿ ಮೊದಲ ಬಾರಿಗೆ ಖಾಸಗೀ ವೈದ್ಯಕೀಯ ವಿಧೇಯಕವನ್ನು ಮಂಡಿಸಿದ ರಾಜ್ಯವಾಗಿದೆ, ಉದಾ,. ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳು(ತಿದ್ದುಪಡಿ) ಮಸೂದೆ 2017.

- ನಮ್ಮ ಸರ್ಕಾರದ ಸುವರ್ಣ ಅರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಹಿರಿಯ ನಾಗರಿಕರಿಗೆ ಮತ್ತು ಬಿಪಿಎಲ್ ಕುಟುಂಬದವರಿಗೆ ಉಚಿತ ಮತ್ತು ಗುಣಮಟ್ಟದ ವೈದ್ಯಕೀಯ ರಕ್ಷಣೆಯನ್ನು ನೀಡುತ್ತದೆ.

- ಮುಖ್ಯ ಮಂತ್ರಿಗಳ ಹರೀಶ್ ಸಾಂತ್ವನ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು ಯಾವುದೇ ಅಪಘಾತದ ಫಲಾನುಭವಿಗಳು ರೂ.25,00/ವರೆಗೆ ದೇಶದಾದ್ಯಂತ ಉಚಿತ ಸೇವೆಗಳನ್ನು ಪಡೆದುಕೊಳ್ಳಬಹುದು ಇವುಗಳಲ್ಲಿ ಸರಣಿಯಲ್ಲಿರುವ ಆಸ್ಪತ್ರೆಗಳೂ ಸೇರುತ್ತವೆ.

- ಸುಮಾರು 711 ಆರೋಗ್ಯ ಕವಚ ಆಂಬ್ಯುಲೆನ್ಸ್ ಗಳು ಸುಮರು 25 ಕಿ,ಮೀ.ವ್ಯಾಪ್ತಿಯನ್ನು ಹೊಂದಿವೆ ಮತ್ತು 827 ರಾಜ್ಯ ಆಂಬ್ಯುಲೆನ್ಸ್ ಗಳನ್ನು ಆರೋಗ್ಯ ಕವಚದ ಅಡಿಯಲ್ಲಿ ತರಲಾಗಿದೆ ತುರ್ತು ಸೇವೆಯ 108 ಸೇವೆಗಳನ್ನು 10-12 ಕಿ.ಮೀ.ವ್ಯಾಪ್ತಿಯಲ್ಲಿ ನೀಡಲಾಗುತ್ತದೆ.

- ಚೆನ್ನೈ- ಬೆಂಗಳೂರು-ಚಿತ್ರದುರ್ಗ ಕೈಗಾರಿಕಾ **ಪ್ರಭಾವ ವಲಯ** (ಸಿಬಿಸಿಐಸಿ) ಮತ್ತು ಬೆಂಗಳೂರು-ಮುಂಬೈ ಆರ್ಥಿಕ **ವಲಯ** (ಬಿಎಮ್‌ಇಸಿ) ಗಳನ್ನು ಚುರುಕುಗೊಳಿಸಲಾಗಿದ್ದು ದೆಹಲಿ ಮುಂಬೈ ಕೈಗಾರಿಕಾ **ವಲಯ** (ಡಿಎಮ್‌ಐಸಿ) **ದೊಂದಿಗೆ** ಮತ್ತು ಭಾರತ ಸರ್ಕಾರದೊಂದಿಗೆ ಕೈಜೋಡಿಸಲಾಗಿದೆ.

- ವಸಂತ ನರಸಾಪುರದಲ್ಲಿ ತುಮಕೂರು ಚನ್ನೈ-ಬೆಂಗಳೂರು-ಚಿತ್ರದುರ್ಗ ಕೈಗರಿಕಾ **ಪ್ರಭಾವ ವಲಯ** ಅಡಿಯಲ್ಲಿ ಸುಮಾರು 629 ಎಕರೆಗಳಲ್ಲಿ ತುಮಕೂರು ಕೈಗಾರಿಕಾ **ಘಟಕವನ್ನು** ಪ್ರಾರಂಭಿಸಲಾಗಿದೆ.

- ವಸಂತ ನರಸಾಪುರ ಇಂಡಸ್ಟ್ರಿಯಲ್ ಏರಿಯಾ ತುಮಕೂರು ಇಲ್ಲಿ ಸುಮಾರು 540 ಎಕರೆಗಳಲ್ಲಿ ಮೆಷೀನ್ ಟೂಲ್ ಪಾರ್ಕನ್ನು ಸ್ಥಾಪಿಸಲಾಗಿದೆ ಇದರ ಯೋಜನಾ ವೆಚ್ಚ ರೂ. 425 ಕೋಟಿ.

- ವಸಂತ ನರಸಪುರ ತುಮಕೂರಿನಲ್ಲಿ ಜೆಟ್ರೋದೊಂದಿಗೆ ಸಮಾಲೋಚಿಸಿ ಜಪಾನಿನ ಹೂಡಿಕೆಯನ್ನು ರಾಜ್ಯದಲ್ಲಿ ಪ್ರೋತ್ಸಾಹಿಸುವ ಸಲುವಾಗ ಜಪಾನೀ ಇಂಡಸ್ಟ್ರಿಯಲ್ ಟೌನ್ ಷಿಪ್ ಸ್ಥಾಪಿಸಲಾಗುತ್ತಿದ್ದು ಇದರ ವಿಸ್ತೀರ್ಣ ಸುಮಾರು 500 ಎಕರೆಗಳಾಗಿದೆ.

- ಕರ್ನಾಟಕ ಸೌಕರ್ಯನೀಡಿಕೆ ಕಾಯಿದೆ, 2002ರ ಅಡಿಯಲ್ಲಿ ಯೋಜನೆಗಳಿಗೆ ಗವಾಕ್ಷಿಯಲ್ಲಿ ಆನ್ ಲೈನ್ **ಪೋರ್ಟಲ್** (www.ebizKarnataka.gov.in), ಮೂಲಕ ಅನುಮತಿ ನೀಡಲಾಗಿದೆ, ಇದರಲ್ಲಿ ನೊಂದಣಿ ಮತ್ತು 15 ಸಂಬಂಧಪಟ್ಟ ಇಲಾಖೆಗಳ ಅನುಮೋದನೆ ಒಳಗೊಂಡಿದೆ.

- ಕೈಗಾರಿಕೋದ್ಯಮವನ್ನು ಸ್ಥಾಪನೆ ಮಾಡುವ ಹೂಡಿಕೆದಾರರಿಗೆ ಮಾರ್ಗಸೂಚಿ ಎಂಬ ವಿವರವಾದ ಮಾಹಿತಿ ವಿಝಾರ್ಡ್‌ನಲ್ಲಿ ಮೂಲಭೂತ ಸೌಕರ್ಯಗಳು, ನೋಂದಣಿಗಳು, ಅನುಮೋದನೆ, ಇತ್ಯಾದಿಗಳ ಏಕ ಗವಾಕ್ಷಿ ವಿಂಡೋಪೋರ್ಟಲ್ ನಲ್ಲಿ ಅತ್ಯುತ್ತಮ ಮಾಹಿತಿಗಳನ್ನು ಒದಗಿಸಲಾಗಿದೆ.

- ಕರ್ನಾಟಕದಲ್ಲಿ ಹೂಡಿಕೆ ವೇದಿಕೆಯನ್ನು ಎಕನಾಮಿಕ್ ಡೆವಲಪ್‌ಮೆಂಟ್ ಬೋರ್ಡ್ ಆಫ್ ಸಿಂಗಪೂರ್ ಗೆ ಸಮಾನವಾಗಿ ಸ್ಥಾಪಿಸಲಾಗಿದ್ದು ಇದು ಬ್ರಾಂಡ್ ಕರ್ನಾಟಕವನ್ನು ಪ್ರೋತ್ಸಾಹಿಸುತ್ತದೆ ಮತ್ತು ಹೂಡಿಕೆದಾರರನ್ನು ರಾಜ್ಯಕ್ಕೆ ಆಕರ್ಷಿಸುತ್ತದೆ.

# ಕೃಷಿಯ ಮೂಲಕ ಪ್ರಗತಿಯ ಕೊಯ್ಲು

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕರ್ನಾಟಕದ ರೈತರ ಸರ್ವತೋಮುಖ ಅಭಿವೃದ್ಧಿಯ ಕಡೆಗೆ ಕಾರ್ಯನಿರ್ವಹಿಸಲು ಸನ್ನದ್ಧವಾಗಿದೆ ರೈತರಿಗೆ ಸುಧಾರಿತ ಉತ್ಪಾದಕತೆ ಮತ್ತು ಆದಾಯ ಭದ್ರತೆಯನ್ನು ಹವಾಮಾನ ಚೇತರಿಸಿಕೊಳ್ಳುವ ತಂತ್ರಜ್ಞಾನ, ಮೌಲ್ಯಾಧಾರಿತ ಮತ್ತು ಸುಧಾರಿತ ಮಾರುಕಟ್ಟೆ ಜಾಲವನ್ನು ನಿರ್ಮಿಸಿ ಅವರಿಗೆ ಸುಸ್ಥಿರವಾದ ಜೀವನವನ್ನು ಕಟ್ಟಿಕೊಡುವ ಭರವಸೆಯನ್ನು ನೀಡುತ್ತದೆ.

## ನಮ್ಮ ಪ್ರಮುಖ ಸಾಧನೆಗಳು

- ನಮ್ಮ ಕಾಂಗ್ರೆಸ್ ಸರ್ಕಾರವು ಬರಗಾಲವನ್ನು ಸಮರ್ಥವಾಗಿ ಎದುರಿಸಿದೆ ಹಾಗೂ ರೈತರ ಸಹಾಯಕ್ಕೆ ಧಾವಿಸಿದೆ. ಬೀಜಗಳು ಮತ್ತು ಗೊಬ್ಬರಗಳನ್ನು ಸಮಯಕ್ಕೆ ಸರಿಯಾಗಿ ರೈತರಿಗೆ ಒದಗಿಸಲಾಗಿದೆ. ಸುಮಾರು 1.2 ಲಕ್ಷ ಕೃಷಿ ಹೊಂಡಗಳನ್ನು ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ರೈತರಿಗಾಗಿ ನಿರ್ಮಿಸಲಾಗಿದೆ. ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಬೃಹತ್ ಮೊತ್ತದ ಸಾಲ ವಿತರಣೆ ಮಾಡಲಾಗಿದೆ.
- ನಮ್ಮ ಸರ್ಕಾರವು ರೈತರಿಗೆ ಮತ್ತು ಸ್ತ್ರೀ ಶಕ್ತಿ ಸಂಘಗಳಿಗೆ 3 ಲಕ್ಷಗಳವರೆಗೆ ಬಡ್ಡಿರಹಿತ ಸಾಲವನ್ನು ಒದಗಿಸಿದೆ. 22,27,506 ರೈತರು ಪಡೆದುಕೊಂಡಿದ್ದ ರೂ.8165 ಕೋಟಿಗಳಷ್ಟು ಬೆಳೆ ಸಾಲದಲ್ಲಿ ರೂ.50,000 ಗಳಷ್ಟು ಪ್ರತಿ ರೈತರಿಗೆ 20 ಜೂನ್ 2017 ರ ವರೆಗೆ ಮನ್ನಾ ಮಾಡಲಾಗಿದೆ.
- ನೀರಾವರಿಯು ರಾಜ್ಯ ಸರ್ಕಾರದ ಆದ್ಯ ಪ್ರಾಮುಖ್ಯತೆಯಾಗಿದೆ. ಸರ್ಕಾರವು ಬೃಹತ್ ಮತ್ತು ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳಿಗಾಗಿ ರೂ.50,000 ಕೋಟಿಗಳಷ್ಟನ್ನು ನಿಗಧಿಪಡಿಸಿದೆ, ಇದರಿಂದ ರಾಜ್ಯದಾದ್ಯಂತ ನೀರಾವರಿ ಸಾಮರ್ಥ್ಯವು ಕಳೆದ ನಾಲ್ಕು ವರ್ಷಗಳಲ್ಲಿ 6.40,900 ಎಕರೆಗಳಿಗೆ ವಿಸ್ತರಿಸಿದೆ.
- ಕರ್ನಾಟಕದ ಪಶು ಸಂಗೋಪನೆ ಮತ್ತು ಜಾನುವಾರುಗಳ ಕ್ಷೇತ್ರವು ಗ್ರಾಮೀಣ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವಹಿಸುತ್ತಲಿದೆ.
- ರಾಜ್ಯದಲ್ಲಿ 161 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿದ್ದು ಇವು ಕೃಷಿ ಉತ್ಪನ್ನಗಳ ಮಾರುಕಟ್ಟೆಯನ್ನು ನಿಯಂತ್ರಿಸಿ ಸಹಾಯ ಮಾಡುತ್ತಿವೆ.
- ಕೃಷಿ ಮಾರುಕಟ್ಟೆ ಸುಧಾರಣೆಗಾಗಿ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಹುಬ್ಬಳ್ಳಿಯಲ್ಲಿ 2015 ರಲ್ಲಿ ಏರ್ಪಡಿಸಲಾಗಿತ್ತು
- ಕರ್ನಾಟಕ ಹಾಲು ಫೆಡರೇಷನ್ ಒಕ್ಕೂಟ ರಾಜ್ಯದ ಗ್ರಾಮೀಣ ಹಾಲು ಉತ್ಪಾದಕರಿಗೆ ಪರಿಹಾರಾತ್ಮಕ ಧಾರಣೆಗಳನ್ನು ನೀಡುವ ಜವಾಬ್ದಾರಿಯನ್ನು ಹೊಂದಿದೆ ಮತ್ತು ಗ್ರಾಹಕರಿಗೆ ಶುದ್ಧ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪೂರೈಸುವ ಜವಾಬ್ದಾರಿಯನ್ನು ಹೊಂದಿದೆ. ರಾಜ್ಯ ಸರ್ಕಾರವು ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಗೆ ರೂ.5/ರಂತೆ ಸಬ್ಸಿಡಿಯನ್ನು ನೀಡುತ್ತಿದೆ.
- ತೋಟಗಾರಿಕೆ ವಲಯವು ನಮ್ಮ ರಾಜ್ಯದ ಒಂದು ಪ್ರಮುಖ ಆರ್ಥಿಕ ಭಾಗವಾಗಿ ಹೊರಹೊಮ್ಮಿದೆ.
- ರಾಜ್ಯದಲ್ಲಿ ರೇಷ್ಮೆ ಉದ್ಯೋಗ ಸೃಷ್ಟಿಸುವ ಒಂದು ಪ್ರಮುಖವಾದ ಕ್ಷೇತ್ರವಾಗಿದೆ ಸರ್ಕಾರವು ರೈತರಿಗೆ ಸಬ್ಸಿಡಿ ಮತ್ತು ಇತರೆ ಮೂಲಸೌಕರ್ಯಗಳ ಸೌಲಭ್ಯಗಳನ್ನು ಆಧುನಿಕ ರೇಷ್ಮೆ ಕೈಗಾರಿಕೆಗೆ ನೀಡುತ್ತಿದೆ.
- ಇಡೀ ಕೃಷಿ ಕ್ಷೇತ್ರಕ್ಕೆ ಉಚಿತ ವಿದ್ಯುತ್ ಪೂರೈಕೆ ಮಾಡಲಾಗುತ್ತಿದ್ದು ಸಬ್ಸಿಡಿಯ ಮೂಲಕ ಒಳ್ಳೆಯದನ್ನು ಮಾಡಲಾಗುತ್ತಿದೆ ರೈತರಿಗೆ ಉತ್ತೇಜನ ನೀಡಲಾಗುತ್ತಿದೆ. ಸೌರ ವಿದ್ಯುತ್‌ಗೆ ದೊಡ್ಡದಾದ ಹಚ್ಚಿನ ಪ್ರೋತ್ಸಾಹ ನೀಡಿದ್ದು ತನ್ನ ಸೌರ ಶಕ್ತಿ ನೀತಿಗಳನ್ನು ಅನುಷ್ಠಾನಗೊಳಿಸಿದೆ.

## ಕರ್ನಾಟಕದ ಕೃಷಿ ಕಾರಿಡಾರ್‌ಗಳ ಸೃಷ್ಟಿ

ಕರ್ನಾಟಕದಲ್ಲಿ ಹತ್ತು ವಿವಿಧ ಕೃಷಿ – ಹವಾಮಾನ ವಲಯಗಳಿವೆ ಮತ್ತು ಸಮೃದ್ಧವಾದ ನೈಸರ್ಗಿಕವಾದ ಅಕವಾಶಗಳಿದ್ದು ಕೃಷಿಯಲ್ಲಿ ಮತ್ತು ಸಂಬಂಧಿತ ವಲಯಗಳಲ್ಲಿ ಅತಿ ಹೆಚ್ಚು ಬೆಳವಣಿಗೆ ಸಾಧಿಸಲು ಹೇರಳವಾದ ಅವಕಾಶಗಳಿವೆ. ನಮ್ಮ ಸರ್ಕಾರವು ಯಾವಾಗಲೂ ಆಧುನಿಕ ತಂತ್ರಜ್ಞಾನ, ಮತ್ತು ಆಂತರಿಕ ಹಾಗು ಅಂತರರಾಷ್ಟೀಯ ಮಾರುಕಟ್ಟೆಗಳ ಬೆಳೆಯುತ್ತಿರುವ ಬೇಡಿಕೆಗಳನ್ನು ಬಳಸಿಕೊಳ್ಳುವ ತಂತ್ರಗಳನ್ನು ಅಭಿವೃದ್ಧಿಪಡಿಸುವ ಹಾಗೂ ಅನುಕೂಲತೆಗಳನ್ನು ಬಳಸಿಕೊಳ್ಳುವತ್ತ ಮುಂದಡಿಯಿಟ್ಟಿದೆ. ನಮ್ಮ ಸರ್ಕಾರವು ಕರ್ನಾಟಕದಲ್ಲಿ ಕೃಷಿ ಕಾರಿಡಾರ್‌ಗಳ ಅಭಿವೃದ್ಧಿಯ ಮೂಲಕ ಸುಸ್ಥಿರ ಕೃಷಿ ವಹಿವಾಟನ್ನು ಅಭಿವೃದ್ಧಿಪಡಿಸುವ ಯೋಜನೆಗಳನ್ನು ಮುಂದುವರಿಸುತ್ತದೆ. ಇದರಲ್ಲಿ ಕೃಷಿ ಮತ್ತು ಸಂಬಂಧಿತ ವಲಯಗಳ ಉತ್ಪಾದನೆ, ಮೂಲಭೂತ ಸೌಲಭ್ಯಗಳು, ಮತ್ತು ಕೈಗಾರಿಕಾ ಭಾಗಗಳನ್ನು ಸಮಗ್ರ ರೀತಿಯಲ್ಲಿ ಒಳಗೊಂಡಿದೆ.

**ಈ ಕಾರಿಡಾರ್ ಕೆಳಕಂಡವುಗಳ ಸುಧಾರಣೆಗಾಗಿ ಆದ್ಯತೆ ನೀಡಿವೆ:**

- ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸುವುದು, ಉತ್ಪಾದನಾ ವೆಚ್ಚ ಕಡಿಮೆ ಮಾಡುವುದು, ತ್ಯಾಜ್ಯ ಕಡಿಮೆ ಮಾಡುವುದು, ಮೌಲ್ಯವಧನೆ ಮಾಡುವುದರ ಮೂಲಕ ಉತ್ಪಾದನೆ ಮತ್ತು ಉತ್ಪಾದಕತೆಯನ್ನ ಉತ್ತಮಪಡಿಸುವತ್ತ ಗಮನ ಹರಿಸುತ್ತದೆ. ಇತರೆ ಮಾನಗಳೆಂದರೆ ದರ ನಿಯಂತ್ರಣ, ಉತ್ತಮ ಕೃಷಿ ತಾಂತ್ರಿಕತೆಗಳ ಬಳಕೆ, ಜೈವಿಕವಾಗಿ ಸುಧಾರಿತ ತಳಿಗಳು, ಸೂಕ್ಷ್ಮ ಪ್ರಸರಣ, ಸೂಕ್ಷ್ಮ ನೀರಾವರಿ/ಗೊಬ್ಬರ, ಸಮಗ್ರ ಪೌಷ್ಟಿಕತೆ ನಿರ್ವಹಣೆ, ಸಾವಯವ ಕೃಷಿ, ಸಮಗ್ರ ಕೀಟ ನಿರ್ವಹಣೆ, ಸುರಕ್ಷಿತ ಉಳುಮೆ/ಹಸಿರು ಮನೆ ತಂತ್ರಜ್ಞಾನ, ಕೊಯ್ಲು ನಂತರ ನಿರ್ವಹಣೆ, ಆಹಾರ ಸಂಸ್ಕರಣೆ ತಂತ್ರಜ್ಞಾನದ ಕಲೆಯನ್ನು ಅಳವಡಿಕೆ ಮಾಡಿಕೊಳ್ಳುವುದು, ರಫ್ತು ಮಾರುಕಟ್ಟೆಗಳಲ್ಲಿ ಅತಿ ಹೆಚ್ಚು ಮೌಲ್ಯವರ್ಧನೆಯ ಮೇಲೆ ಗಮನ ಹರಿಸುವುದು ಇತ್ಯಾದಿ. ಇದು ಚಾಮರಾಜನಗರದಿಂದ ಕೊಲ್ಲಾಪುರದವರೆಗಿನ ಪ್ರದೇಶವನ್ನು ಒಳಗೊಳ್ಳುತ್ತದೆ ಅಲ್ಲದೆ ಉತ್ತಮವಾದ ನದಿ ನೀರಿನ ಬಳಕೆ ಮಾಡಿಕೊಂಡು ಕರ್ನಾಟಕದಲ್ಲಿ ಜಾರಿಯಲ್ಲಿರುವ ಆರ್ಥಿಕ ವಲಯಕ್ಕೆ ಪ್ರಗತಿಯಲ್ಲಿರುವ ಕರ್ನಾಟಕದ 10 ಜಿಲ್ಲೆಗಳು ಸೇರುತ್ತವೆ.

ಕೃಷಿ ವಲಯದಲ್ಲಿ ಈ ಕೆಳಗಿನ ಮೂಲಸೌಕರ್ಯಗಳಿರುತ್ತವೆ:

- ಪ್ಯಾಕೇಜಿಂಗ್ ಘಟಕಗಳು
- ಸಂಸ್ಕರಣಾ ಘಟಕಗಳು
- ಸಂರಕ್ಷಣೆ
- ಗೋದಾಮು
- ಶೈತ್ಯಾಗಾರ
- ವಿದ್ಯುತ್ ಸಂಪನ್ಮೂಲ
- ಮಣ್ಣು/ಬೆಳೆ ಆರೋಗ್ಯ ವಿಶ್ಲೇಷಣೆ
- ಉಪಗ್ರಹ ಚಿತ್ರಗಳು
- ಡ್ರೋಣ್ ಆಧಾರಿತ ಸಮೀಕ್ಷೆ
- ನೀರು ಪೋಲಾಗುವುದನ್ನು ತಡೆಯುವುದು
- ಪಶು ಸಂಗೋಪನಾ ವಿಭಾಗದಲ್ಲಿ ರೋಗ ಪತ್ತೆ ಮಾಡುವುದು
- ಮೌಲ್ಯವರ್ಧನೆ ತರಬೇತಿ ಮತ್ತು ಸಂಸ್ಕರಣೆ ಘಟಕ

**ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ತಂತ್ರ**

ನಮ್ಮ ಸರ್ಕಾರವು

- ರೈತರ ಆದಾಯವನ್ನು ದ್ವಿಗುಣಗೊಳಿಸುತ್ತದೆ.
- ರೈತರಿಗೆ, ಕೃಷಿ–ಕಾರ್ಮಿಕರಿಗೆ ಮತ್ತು ಕೃಷಿ ಅವಲಂಬಿತರಿಗೆ ಮೂಲ ಜೀವನಾದಾರ ಒದಗಿಸಲು ಶಾಸನಾತ್ಮಕ ರೈತ ಆದಾಯ ಸಮಿತಿಯನ್ನು ರಚಿಸುವುದು.
- ನೈಸರ್ಗಿಕ ವಿಪತ್ತುಗಳಿಂದ ಬೆಳೆ ನಷ್ಟ ಉಂಟಾಗಿದ್ದಾಗ ಜಿಲ್ಲಾ ಮಟ್ಟದಲ್ಲಿ ಅನ್ನದಾತ ನಿಧಿಯ ಮೂಲಕ ರೈತರಿಗೆ ಆರ್ಥಿಕ ಪರಿಹಾರವನ್ನು ನೀಡುವುದು.
- ಜೂನ್ 1, 2018 ರಿಂದ ಹಾರ್ಟಿಕಲ್ಚರ್ ಮತ್ತು ಪಶುಸಂಗೋಪನೆ ವಲಯಕ್ಕೆ 24 * 7 ವಿದ್ಯುಚ್ಛಕ್ತಿಯನ್ನು ಪೂರೈಸುವುದು
- ಸರ್ಕಾರವು ಪ್ರತಿ ಉತ್ಪನ್ನಕ್ಕೂ ತನ್ನದೇ ಆದ ಮುದ್ರಾಂಕವನ್ನು ನೀಡುವುದು. ಮಾಡುವುದು, ಉತ್ಪನ್ನಗಳನ್ನು ರಾಜ್ಯದ ಹೊರಗೆ ಪ್ರೋತ್ಸಾಹಿಸುವುದರಿಂದ ಅವರ ಉತ್ಪನ್ನಗಳಿಗೆ ಉತ್ತಮ ಮೌಲ್ಯ ದೊರೆತು ರೈತರಿಗೆ ಸಹಾಯಕವಾಗುತ್ತದೆ. ಉದಾ. ಅಮುಲ್, ವರಾನ, ಹಿಮಾಚಲ್/ಕಾಶ್ಮೀರಿ ಸೇಬು ಇತ್ಯಾದಿಗಳು.
- ವಿಶೇಷವಾದ ರೇಷ್ಮೆ ನೂಲುವವರ ಫೆಡರೇಷನ್ ಸ್ಥಾಪನೆ ಮಾಡಿ ಪೂರೈಕೆಯನ್ನು ಉತ್ತೇಜಿಸುವುದು, ವಹಿವಾಟು ಮತ್ತು ಮಾರುಕಟ್ಟೆಯ ಸಹಾಯ ಮಾಡುವುದು.
- ಸೋನಾ ಮಸ್ಸೂರಿ ಅಕ್ಕಿ ಸಂಶೋಧನಾ ಕೇಂದ್ರವನ್ನು ರಾಯಚೂರಿನಲ್ಲಿ ಸ್ಥಾಪಿಸುವುದು ಮತ್ತು ಮಾರುಕಟ್ಟೆ ಕೇಂದ್ರವನ್ನು ಕೊಪ್ಪಳ, ಗಂಗಾವತಿ, ಮತ್ತು ಕುಷ್ಟಗಿಗಳಲ್ಲಿ ಸ್ಥಾಪನೆ ಮಾಡುವುದು.
- ರಾಯಚೂರಿನಲ್ಲ ಹತ್ತಿ ರಫ್ತು ಮತ್ತು ಸಂಶೋಧನೆ ಮತ್ತು ಮಾರುಕಟ್ಟೆ ಕೇಂದ್ರವನ್ನು ಸ್ಥಾಪಿಸಿ ರಫ್ತು ತಳಿಯ ಹತ್ತಿ ಮಾರಾಟವನ್ನು ಪ್ರೋತ್ಸಾಹಿಸುವುದು.
- ರೈತರ ಉತ್ಪನ್ನಗಳನ್ನು ಮಾರುವ, ತಯಾರಿಸುವ,

ಆವಿಷ್ಕರಿಸುವ ಕೈಗಾರಿಕೆಗಳಿಗೆ ಶೇ. 100ರಷ್ಟು ತೆರಿಗೆ ಸಬ್ಸಿಡಿಯನ್ನು ನೀಡಲಾಗುತ್ತದೆ.

- ಸಿರಿಧಾನ್ಯ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವುದು.

## ತೋಟಗಾರಿಕೆ ವಲಯ

ನಮ್ಮ ಸರ್ಕಾರವು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಿದೆ

- ಕೃಷಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು PPP ಸಹಭಾಗಿತ್ವವನ್ನು ಪ್ರೋತ್ಸಾಹಿಸುವುದು, ಅವುಗಳೆಂದರೆ ಕೃಷಿ ಮಾರುಕಟ್ಟೆಗಳು, ಗೋದಾಮುಗಳು, ಶೈತ್ಯಾಗಾರಗಳು, ಮತ್ತು ನೀರಾವರಿ ವಿತರಣೆ ಮತ್ತು ಸೇವೆಗಳ ವಿಸ್ತರಣೆ.
- ಹಾರ್ಟಿಕಲ್ಚರ್ ಮತ್ತು ಫ್ಲೋರಿಕಲ್ಚರ್ (ಹಣ್ಣು ಮತ್ತು ಹೂ ಬೇಸಾಯ) ಉತ್ತೇಜಿಸಲು ಬೆಂಗಳೂರು ಮತ್ತು ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ವಿಶೇಷ ಕಾರ್ಗೋ ಟರ್ಮಿನಲ್ ಗಳನ್ನು ಸ್ಥಾಪಿಸುವುದು.

## ಪಶುಸಂಗೋಪನಾ ವಲಯ

- ಹೈನು ಉತ್ಪಾದನೆ ಹಾಗು ಮಾರುಕಟ್ಟೆಗೆ ಅಗತ್ಯವಿರುವ ಬೆಂಬಲ ನೀಡುವುದರ ಮೂಲಕ ಹೈನು ರೈತರ ಆದಾಯವನ್ನು ದ್ವಿಗುಣಗೊಳಿಸುವುದು
- ಕೃಷಿ ಮಾರುಕಟ್ಟೆಗೆ ಪ್ರೋತ್ಸಾಹ ನೀಡಲು, ನಾವು ಎರಡು ಮೀನು ಕೃಷಿ ಸಂಸ್ಕರಣಾ ಘಟಕಗಳನ್ನು ಪ್ರತಿ ಕರಾವಳಿ ಜಿಲ್ಲೆಗಳಲ್ಲಿ ಸ್ಥಾಪಿಸಲಿದ್ದೇವೆ ( ಉತ್ತರ ಕನ್ನಡ, ದಕ್ಷಿಣ ಕನ್ನಡ, ಮತ್ತು ಉಡುಪಿ)

## ರೇಷ್ಮೆ ವಲಯ

- ರೇಷ್ಮೆ ನೂಲುಗಾರರ ಆದಾಯವನ್ನು ದ್ವಿಗುಣಗೊಳಿಸುವುದು.
- ರೇಷ್ಮೆ ಸ್ಥಿರತೆ ನಿಧಿ ಎಂಬ ಹೊಸ ನಿಧಿಯನ್ನು ಸ್ಥಾಪಿಸುವುದು ಇದರಿಂದ ರೈತರಿಗೆ ಬೆಂಬಲ ದೊರೆಯುತ್ತದೆ - ಇದು ರೈತರ ಸುಸ್ಥಿರ ಆದಾಯಕ್ಕೆ ಉತ್ತೇಜನ ನೀಡುತ್ತದೆ.

## ಕಾಫಿ ತೋಟಗಳು

- ಸರ್ಕಾರವು ಅರೇಬಿಕಾ ಕಾಂಡಕೊರಕ ಸಮಸ್ಯೆಗೆ ಪರಿಹಾರ ಹುಡುಕಲು ವಿಶೇಷ ಮಾನದಂಡಗಳನ್ನು ತೆಗೆದುಕೊಳ್ಳಲಿದೆ. ಕಾಫಿ ಮಂಡಳಿಯು ಬಿಳಿಯ ಕಾಂಡಕೊರಕದ ಸಂಶೋಧನೆಯನ್ನು ಭಾರತೀಯ ಮತ್ತು ವಿದೇಶೀ ಖಾಸಗೀ ಸಂಘಟನೆಗಳ ಸಹಯೋಗದೊಂದಿಗೆ ಸಂಶೋಧನೆಯನ್ನು ತೀವ್ರಗೊಳಿಸುವುದು.
- ಕಾಫಿತೋಟದ ಕಾರ್ಮಿಕರ ಮಕ್ಕಳಿಗೆ ಮತ್ತು ಸಣ್ಣ ಕಾಫಿ ಬೆಳೆಗಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ ಯೋಜನೆ.
- ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಕಾಫಿಗೆ ಬ್ರಾ ್ಯಂಡ್ ಅನ್ನು ಕಲ್ಪಿಸಿಕೊಡುವುದು
- ದೇಶದಲ್ಲಿ ಅತಿ ಹೆಚ್ಚು ಕಾಫಿ ಉತ್ಪಾದಕ ಜಿಲ್ಲೆಯಾದ ಕೊಡಗಿನಲ್ಲಿ ಮತ್ತು ಚಿಕ್ಕಮಂಗಳೂರಿನಲ್ಲಿ (40%) ಕಾಫಿಯ ಕಲಾತ್ಮಕ ಮತ್ತು ಸಂಶೋಧನಾ ಕೇಂದ್ರಗಳನ್ನು ಸ್ಥಾಪನೆಮಾಡುವುದು.

## ಕಾಳುಮೆಣಸು

ನಮ್ಮ ಸರ್ಕಾರವು

- ಕೊಡಗಿನಲ್ಲಿ ಮತ್ತು ಚಿಕ್ಕಮಂಗಳೂರಿನಲ್ಲಿ ಕಾಳು ಮೆಣಸಿನ ಸಂಸ್ಕರಣೆ ಘಟಕವನ್ನು ಮುಂದುವರಿಸುವುದು ಹಾಗೂ ವಿಸ್ತರಣೆ ಮಾಡುವುದು.
- ಕಾಳು ಮೆಣಸಿಗೆ ಎಪಿಎಂಸಿ ಸೆಸ್ ಅನ್ನು ತೆಗೆದುಹಾಕಿ ದರವನ್ನು ಹೆಚ್ಚಿಸಲು ಪ್ರೋತ್ಸಾಹಿಸುವುದು ಮತ್ತು ಕಾಳು ಮೆಣಸು ಬೆಳೆಗಾರರಿಗೆ ಉತ್ಪಾದನೆಯನ್ನು ಹೆಚ್ಚಿಸಲು ನೆರವಾಗುವುದು ಮತ್ತು ಉತ್ತಮ ಮಾರಾಟದ ಅವಕಾಶ ಕಲ್ಪಿಸಿಕೊಡುವುದು.

## ಹೊಸ ಸಾವಯವ ಕೃಷಿ ಇಲಾಖೆ

- ಕೃಷಿ ಸಚಿವಾಲಯದ ಅಡಿಯಲ್ಲಿ ಹೊಸ ಸಾವಯವ ಕೃಷಿ ಇಲಾಖೆಯನ್ನು ರಚನೆ ಮಾಡುವುದರಿಂದ ನಾವು 100% ರಷ್ಟು ಕೀಟನಾಶಕ ರಹಿತ ಕರ್ನಾಟಕದ ಭರವಸೆಯತ್ತ ಕಾರ್ಯನಿರ್ವಹಣೆ ಮಾಡಬಹುದು.

ಶಿಕ್ಷಣ

# ಪ್ರಗತಿಪರ ಭವಿಷ್ಯಕ್ಕಾಗಿ ರೋಮಾಂಚಕ ನಾಯಕರನ್ನು ರಚಿಸುವುದು

ಕಾಂಗ್ರೆಸ್ ಸರ್ಕಾರವು ಸರ್ವರೀತಿಯಲ್ಲೂ ಶ್ರೇಷ್ಠವಾದ ಆಧುನಿಕವಾದ  ನ್ಯಾಯಯುತವಾದ, ಶೈಕ್ಷಣಿಕ ವ್ಯವಸ್ಥೆಯನ್ನು ಕಟ್ಟಲು ಬದ್ಧವಾಗಿದೆ. ಎಲ್ಲವನ್ನು ಒಳಗೊಳ್ಳುವ ಮತ್ತು ಭವಿಷ್ಯದ ದೃಷ್ಟಿಕೋನವಿರುವ ಶೈಕ್ಷಣಿಕ ಸಂಸ್ಥೆಗಳು ಉನ್ನತ ಕಾರ್ಯನಿರ್ವಹಣೆಗೆ ಮತ್ತು ಜೀವನದಲ್ಲಿ ಉತ್ತಮ ಅವಕಾಶಗಳನ್ನು ಪಡೆಯಲು ವಿದ್ಯಾರ್ಥಿಗಳನ್ನು ತಯಾರು ಮಾಡಬಲ್ಲ ಸಬಲೀಕೃತ ಶಿಕ್ಷಕರನ್ನು ತಯಾರುಮಾಡುವುದು ಅದರಿಂದಾಗಿ ಭವಿಷ್ಯದ ಪ್ರಜೆಗಳು ರಾಜ್ಯದ ಸಾಮಾಜಿಕ ಅಭಿವೃದ್ಧಿಗೆ ಮತ್ತು ಪ್ರಗತಿಗೆ ಪರಿಣಾಮಕಾರಿ ಕೊಡುಗೆಯನ್ನು ನೀಡಲಬಲ್ಲವರಾಗುತ್ತಾರೆ.

ನಮ್ಮ ಸರ್ಕಾರವು ಭಾರತದ ಶೈಕ್ಷಣಿಕ ಅಭಿವೃದ್ಧಿ ಸೂಚ್ಯಂದಲ್ಲಿ (ಇಡಿಐ) 0.661 ಅಂಕಗಳೊಂದಿಗೆ ಭಾರತದ ಸರಾಸರಿಗಿಂತ ಹೆಚ್ಚಾಗಿದ್ದು, ಕರ್ನಾಟಕವನ್ನು ಐದನೇ ಸ್ಥಾನಕ್ಕೆ ತೆಗೆದುಕೊಂಡು ಹೋಗಿದೆ. ಕಾಂಗ್ರೆಸ್ ಯಶಸ್ವಿಯಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯಿದೆಯನ್ನು ಅನುಷ್ಠಾನಗೊಳಿಸಿದ್ದು 6 ರಿಂದ 14 ನೇ ವಯಸ್ಸಿನ 1 ರಿಂದ 8 ನೇ ತರಗತಿಯವರೆಗಿನ  ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣದ ಸೌಲಭ್ಯವನ್ನು ನೀಡಿದೆ. ನಮ್ಮ ಪಕ್ಷವು ಐದು ವರ್ಷಗಳ ಅವಧಿಯಲ್ಲಿ ಐದು ಕಂದಾಯ ವಿಭಾಗಗಳಿಗೂ ಶಾಲೆಗಳನ್ನು ನ್ಯಾಯಯುತವಾಗಿ ಹಂಚಿಕೆ ಮಾಡಿದೆ. ನಮ್ಮ ಪಕ್ಷವು ಕರ್ನಾಟಕವನ್ನು ಪರಿಣಾಮಕಾರೀ ಸಾಕ್ಷರತೆ ದರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಣೆ ಮಾಡಿದ ರಾಜ್ಯವನ್ನಾಗಿಸಿದೆ. ಅದು ಈಗ ಶೇಕಡಾ 82.47 ಆಗಿದ್ದು  ಮಹಿಳೆಯರು ಶೇಕಡಾ 68.08 ರಷ್ಟು ಇದ್ದಾರೆ. ನಮ್ಮ ಪಕ್ಷದ ಪ್ರಯತ್ನದಿಂದ ಕರ್ನಾಟಕದ ಶೈಕ್ಷಣಿಕ ವ್ಯವಸ್ಥೆಯು ಹೆಚ್ಚು ಸಮರ್ಥವಾಗಿರುವುದು ರಾಜ್ಯದಲ್ಲಿ ನಮ್ಮ ವಿದ್ಯಾರ್ಥಿಗಳ ಸರಾಸರಿ ಕಾರ್ಯಕ್ಷಮತೆಯು ಇಂಗ್ಲೀಷ್, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಲ್ಲಿ ರಾಷ್ಟ್ರೀಯ ಸರಾಸರಿಗಿಂತ ಗಣನೀಯವಾಗಿ ಹೆಚ್ಚಾಗಿದೆ (ಮೂಲ: ರಾಷ್ಟ್ರೀಯ ಸಾಧನಾ ಸಮೀಕ್ಷೆ).

## ನಮ್ಮ ಪ್ರಮುಖ ಸಾಧನೆಗಳು

- ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.
- ಸರ್ಕಾರವು ವೈದ್ಯಕೀಯ, ಇಂಜಿನಿಯರಿಂಗ್, ಪಾಲಿಟೆಕ್ನಿಕ್, ಸ್ನಾತಕೋತ್ತರ ಕೋರ್ಸ್‌ಗಳನ್ನು ಪಡೆಯುತ್ತಿರುವ 1.5 ಲಕ್ಷ ವಿದ್ಯಾರ್ಥಿಗಳನ್ನು ಐಟಿ ಆಧಾರಿತ ಶಿಕ್ಷಣದತ್ತ ಸೆಳೆಯಲು ಉಚಿತ ಲ್ಯಾಪ್ ಟಾಪ್‌ಗಳನ್ನು ಒದಗಿಸುತ್ತಿದೆ.
- ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಉನ್ನತ ಶಿಕ್ಷಣವನ್ನು ಉತ್ತೇಜಿಸಲು ರಾಯಚೂರಿನಲ್ಲಿ ಹೊಸ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುತ್ತಿದೆ.
- ಬೆಂಗಳೂರು  ವಿಶ್ವವಿದ್ಯಾಲಯವನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದು – ಉತ್ತರ, ದಕ್ಷಿಣ, ಮತ್ತು ಸೆಂಟ್ರಲ್ ಯೂನಿವರ್ಸಿಟಿಗಳನ್ನಾಗಿ ಮಾಡಲಾಗಿದೆ.
- ಡಾ.ಬಿ.ಆರ್. ಅಂಬೇಡ್ಕರ್ ಆರ್ಥಿಕ ವಾಣಿಜ್ಯಶಾಸ್ತ್ರ ಶಾಲೆಯ (ಸ್ಕೂಲ್ ಆಫ್ ಎಕನಾಮಿಕ್ಸ್)ನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ.
- ರಾಜ್ಯ ಸರ್ಕಾರವು ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಆರ್ಥಿಕ ಕಲ್ಯಾಣಕ್ಕಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ವಿದೇಶೀ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಅಧ್ಯಯನ ಮಾಡುವಂತಹ ವಿದ್ಯಾರ್ಥಿಗಳಿಗೆ ಧನ ಸಹಾಯ ನೀಡಲಾಗುತ್ತಿದೆ. ಅದರ ಗರಿಷ್ಟ ಮೊತ್ತ ಒಂದು ವರ್ಷಕ್ಕೆ ರೂ.10 ಲಕ್ಷಗಳಾಗಿವೆ
- ಹಿಂದುಳಿದ (ಒಬಿಸಿ) ವಿದ್ಯಾರ್ಥಿಗಳಿಗೆ ಅವರು ಪ್ರೌಢಶಾಲಾ ನಂತರದ ಶಿಕ್ಷಣವನ್ನು ವ್ಯವಸ್ಥಿತವಾಗಿ ಪಡೆದುಕೊಳ್ಳಲು ನಾವು 90,998 ಹೊಸ ಹಾಸ್ಟೆಲ್ ಗಳನ್ನು ನಿರ್ಮಿಸಿದ್ದೇವೆ
- ಪದವಿ ಶಿಕ್ಷಣ ಇಲಾಖೆಯು 2,034 ಸಹಾಯಕ ಪ್ರೊಫೆಸರ್ ಹುದ್ದೆಗೆ ಆಯ್ಕೆ ಮಾಡಿದ್ದು ಕೆಇಎ ಮೂಲಕ ಖಾಲಿ ಹುದ್ದೆಗಳನ್ನು ತುಂಬಲಾಗಿದೆ.
- ನಾವು ಪ್ರತಿ ವರ್ಷ ಪರಿಶಿಷ್ಟ ಜಾತಿ ಮತ್ತು ವರ್ಗ (ಎಸ್‌ಸಿ, ಎಸ್‌ಟಿ) ಮತ್ತು ಹಿಂದುಳಿದ ವರ್ಗದ (ಒಬಿಸಿ) ವಿದ್ಯಾರ್ಥಿಗಳಿಗೆ ಪ್ರವಾಸೋದ್ಯಮ ಇಲಾಖೆಯ ಸಹಯೋಗದೊಂದಿಗೆ ಶೈಕ್ಷಣಿಕ ಪ್ರವಾಸವನ್ನು ಏರ್ಪಡಿಸುತ್ತಿದ್ದೇವೆ.
- ವಿದ್ಯಾಸಿರಿ ಯೋಜನೆಯಲ್ಲಿ, ನಾವು ಬಡ ಒಬಿಸಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ಹಣಕಾಸು ನೆರವನ್ನು ನೀಡಿದ್ದೇವೆ (ರೂ.1,500) ಇದರಲ್ಲಿ ಶೇಕಡಾ 106 ರಷ್ಟು ಸಾಧನೆ ಮಾಡಲಾಗಿದೆ.

- ರಾಜ್ಯ ಸಚಿವ ಸಂಪುಟವು ಇಂಜಿನಿಯರಿಂಗ್, ವೈದ್ಯಕೀಯ, ಪಾಲಿಟೆಕ್ನಿಕ್, ಮತ್ತು ಮೊದಲನೆ ಪ್ರಥಮ ದರ್ಜೆ ಕಾಲೇಜುಗಳ ಸುಮಾರು 1.5 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್ ಟಾಪನ್ನು ವಿತರಿಸಿದ್ದೇವೆ ಮತ್ತು 1.19 ಲಕ್ಷ ವಿದ್ಯಾರ್ಥಿನಿಯರಿಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಉಚಿತ ಶಿಕ್ಷಣಕ್ಕೆ ಸಹಾಯ ಮಾಡಿದ್ದೇವೆ.

## ಶಾಲಾ ಶಿಕ್ಷಣ (ತರಗತಿ 1–12)

- ಕರ್ನಾಟಕದ ಪ್ರತಿಯೊಂದು ಮಗುವಿಗೆ ತರಗತಿ 1 ರಿಂದ ಪ್ರಾರಂಭಿಸಿ 12 ವರ್ಷಗಳವರೆಗೆ ಉತ್ತಮ ಗುಣಮಟ್ಟದ ಶಿಕ್ಷಣದ ಖಾತರಿ ನೀಡಲಾಗಿದೆ. ನಮ್ಮ ಸರ್ಕಾರವು ಸರ್ಕಾರಿ ಶಾಲೆಗಳಲ್ಲಿ 12ನೇ ತರಗತಿವರೆಗೆ ಉಚಿತ ಶಿಕ್ಷಣವನ್ನು ಒದಗಿಸುವ ಹೊಣೆಗಾರಿಕೆಯನ್ನು ಹೊಂದಿದೆ.
- ಶಾಲೆಯಿಂದ ಹೊರ ಉಳಿದ ಮಕ್ಕಳು ತಮ್ಮ ಶಿಕ್ಷಣವನ್ನು ಮುಂದುವರಿಸುವುದಕ್ಕಾಗಿ ವಸತಿಯುತ ಶಾಲೆಗಳ ಸೌಲಭ್ಯ ಕಲ್ಪಿಸುವುದು.
- ಶಿಕ್ಷಣದ ಗುರಿಯೆಂದರೆ ಕಲಿಕೆಯ ಫಲಿತಾಂಶಗಳನ್ನು ಸಾಧಿಸುವುದು. ನಿರ್ಧಿಷ್ಟ ಕಲಿಕೆಯ ಫಲಿತಾಂಶಗಳ ಪರಿಣಿತಿ, ಶಿಕ್ಷಣೋಪಾಯಗಳ ಅನುಷ್ಠಾನ, ಕಲಿಕೆಯ ಫಲಿತಾಂಶಗಳನ್ನು ಅಳೆಯುವುದನ್ನು ಅಭಿವೃದ್ಧಿಪಡಿಸಬೇಕಾದ ಅಗತ್ಯವಿದೆ.
- ಖಾಲಿ ಇರುವ ಶಿಕ್ಷಕರ ಹುದ್ದೆ (ಸರ್ಕಾರಿ ಕಾಲೇಜು ಬೋಧಕರನ್ನು ಒಳಗೊಂಡಂತೆ)ಗಳನ್ನು ಭರ್ತಿ ಮಾಡುವುದು ಮತ್ತು ಶಿಕ್ಷಕರಿಗೆ ತರಬೇತಿ ನೀಡಲು ನಿರಂತರವಾಗಿ ಕ್ರ್ಯಾಷ್ ಕೋರ್ಸ್ ಪರಿಚಯಿಸುವುದು
- ನಾವು ಪಠ್ಯಪುಸ್ತಕ ರಚನೆ ಪ್ರಾಧಿಕಾರವನ್ನು ರಚನೆ ಮಾಡುತ್ತೇವೆ.
- ಖಾಸಗಿ ಸಂಸ್ಥೆಗಳಿಗೆ ಸ್ವಾಯತ್ತತೆ ನೀಡುವುದು ಹಾಗು ಈ ಸಂಸ್ಥೆಗಳು ನೊಂದಣಿ ಶುಲ್ಕ, ಸಿಬ್ಬಂದಿ ವಿದ್ಯಾರ್ಹತೆ, ಮೂಲಸೌಕರ್ಯ ಮಾಹಿತಿಯನ್ನು ವೆಬ್‌ಸೈಟಿನಲ್ಲಿ ಪ್ರಕಟಿಸುವುದನ್ನು ಕಡ್ಡಾಯಗೊಳಿಸುವುದು ಆರ್.ಟ್.ಇ ಕೆಳಗೆ ಆಯ್ಕೆಯಾಗಿರುವ ಬಡ ಮಕ್ಕಳ ಶೈಕ್ಷಣಿಕ ವೆಚ್ಚವನ್ನು ನೇರ ನಗದು ವರ್ಗಾವಣೆ ಮೂಲಕ ಖಾಸಗಿ ಸಂಸ್ಥೆಗಳಿಗೆ ರವಾನಿಸುವುದು

## ಉನ್ನತ ಶಿಕ್ಷಣ

- ನಾವು ವೃತ್ತಿ ತರಬೇತಿ ವಿಶ್ವವಿದ್ಯಾಲಯವನ್ನು ಕೌಶಲ್ಯಾಭಿವೃದ್ಧಿಗಾಗಿ ರಚನೆ ಮಾಡುತ್ತೇವೆ.
- ಪ್ರವೇಶಾತಿ, ಪರೀಕ್ಷೆಗಳು ಮತ್ತು ಪಠ್ಯಾಂತರಗಳ ಎಲ್ಲಾ ಆಡಳಿತಾತ್ಮಕ ಚಟುವಟಿಕೆಗಳನ್ನು ಮುಂದಿನ ಎರಡು ವರ್ಷಗಳಲ್ಲಿ ಸ್ವಯಂಚಾಲಿತಗೊಳಿಸುತ್ತದೆ.

## ಶಿಕ್ಷಕರ ಸಂಶೋಧನೆ ಮತ್ತು ಆವಿಷ್ಕಾರಗಳ ಕಾರ್ಯಕ್ಷಮತೆಯ ಮೌಲ್ಯಮಾಪನ ಮತ್ತು ವೃತ್ತಿ ಅಭಿವೃದ್ಧಿ.

- ಒಂದು ಹೊಸ ಕರ್ನಾಟಕ ವಿಜ್ಞಾನ, ತಂತ್ರಜ್ಞಾನ, ಮಾನವಶಾಸ್ತ್ರ ಮತ್ತು ಸಮಾಜ ವಿಜ್ಞಾನ ಫೌಂಡೇಷನ್ (ಕೆಎಸ್‌ಟಿಹೆಚ್‌ಎಸ್‌ಎಫ್)ನ್ನು ಈ ಎಲ್ಲಾ ವಿಷಯಗಳಲ್ಲಿ ಸಂಶೋಧನೆಗಳನ್ನು ಮಾಡಲು ಸ್ಥಾಪನೆ ಮಾಡಲಾಗುವುದು.

## ತಂತ್ರಜ್ಞಾನ ಏಕೀಕರಣ

- ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಅಂತರ್ಜಾಲ ಸಂಪರ್ಕ ಮತ್ತು ಇತರೆ ತಾಂತ್ರಿಕ ಮೂಲಭೂತ ಸೌಲಭ್ಯಗಳನ್ನು ಉತ್ತಮಪಡಿಸಲಾಗುವುದು.

## ಶಾಲಾ ಶೈಕ್ಷಣಿಕ ವ್ಯವಸ್ಥೆಯ ಆಡಳಿತ ಮತ್ತು ನಿರ್ವಹಣೆಗಳನ್ನು ಬಲಗೊಳಿಸುವುದು

- ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಮೂಲಭೂತ ಸೌಕರ್ಯಗಳನ್ನು ಎಲ್ಲಾ ಸರ್ಕಾರಿ ಶಾಲೆಗಳಿಗೆ ಒದಗಿಸುವುದು
- ಎಲ್ಲಾ ಶೈಕ್ಷಣಿಕ ಸಂಸ್ಥೆಗಳ ಆದಾಯ ಮತ್ತು ವೆಚ್ಚಕ್ಕೆ ಸಂಬಂಧಿಸಿದ ಉತ್ತಮವಾದ ಹಣಕಾಸು ಪಾರದರ್ಶಕತೆಯನ್ನು ಖಚಿತಪಡಿಸಲು ಸೂಕ್ತವಾದ ಕಾನೂನುಗಳನ್ನು ರಚಿಸುತ್ತೇವೆ.
- ಕರ್ನಾಟಕವು ಉದ್ಯಮದ ಅಗತ್ಯಗಳನ್ನು ಪೂರೈಸುವಂತಹ ವ್ಯಾಪಕ ಶ್ರೇಣಿಯ ಕೌಶಲ್ಯ ಕಾರ್ಯಕ್ರಮಗಳನ್ನು ಒದಗಿಸಲು ಬಲವಾದ ಒಂದು ಚೌಕಟ್ಟನ್ನು ನಿರ್ಮಿಸುವ ದೃಷ್ಟಿಕೋನವನ್ನು ಹೊಂದಿದೆ – ಕೌಶಲ್ಯ ಅಂತರ ಮತ್ತು ಕರ್ನಾಟಕ ಕೌಶಲ್ಯಾಭಿವೃದ್ಧಿ ಯೋಜನೆಗಳ ಮೇಲಿನ ವರದಿಯಂತೆ ಮಾರ್ಗದರ್ಶನಗಳನ್ನು ಒದಗಿಸುತ್ತದೆ ಮತ್ತು ಇಂತಹ ಚೌಕಟ್ಟನ್ನು ನಿರ್ಮಿಸುವ ನೀತಿಗಳನ್ನು ಶಿಫಾರಸು ಮಾಡುತ್ತದೆ. ಕರ್ನಾಟಕವು ಈಗಾಗಲೇ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸ್ಥಾಪಿತವಾಗಿದೆ. ಆದ್ದರಿಂದ ಕೌಶಲ್ಯಾಭಿವೃದ್ಧಿ ಯೋಜನೆಗಳನ್ನು ಮುಂದುವರಿಸಲು ಅದು

ನೈಸರ್ಗಿಕವಾಗಿ ಬಲವಾದ ಔಪಚಾರಿಕ ಕ್ಷೇತ್ರವನ್ನು ಹೊಂದಿದೆ.

- ವೃತ್ತಿಪರ ಶಿಕ್ಷಣವನ್ನು ಶಾಲೆಗಳಲ್ಲಿ ಪ್ರೌಢಶಾಲಾ ಹಂತದಲ್ಲಿ ಪ್ರಾರಂಭಿಸಲಾಗುತ್ತದೆ ಏಕೆಂದರೆ ಆ ವಯಸ್ಸಿನಲ್ಲಿ ಮಕ್ಕಳಿಗೆ ಯಾವುದರಲ್ಲಿ ಆಸಕ್ತಿ ಇದೆ ಯಾವುದರಲ್ಲಿ ಇಲ್ಲ ಎಂಬುದನ್ನು ಗುರುತಿಸುವಷ್ಟು ಸಮರ್ಥರಾಗಿರುತ್ತಾರೆ.
- ಕರ್ನಾಟಕದ ಯಾವುದಾದರು ವಿಶ್ವವಿದ್ಯಾಲಯದಲ್ಲಿ ಅಥವಾ ಕೇಂದ್ರೀಯ ಕನಿಷ್ಠ ವಿಶ್ವವಿದ್ಯಾಲಯಗಳು ಕನಿಷ್ಠ 10 ವರ್ಷಗಳ ಕಾಲ ಪ್ರೊಫೆಸರ್ ವೃತ್ತಿಯ ಅನುಭವ ಹೊಂದಿರುವವರನ್ನು ಕಲಪತಿ ಸ್ಥಾನಕ್ಕೆ ನೇಮಕ ಮಾಡುವುದು.
- ವಿಶ್ವ ದರ್ಜೆ ವಿಶ್ವವಿದ್ಯಾಲಯಗಳ ಮಟ್ಟಕ್ಕೆ ಕರ್ನಾಟಕದ 5 ವಿಶ್ವವಿದ್ಯಾಲಯಗಳನ್ನು ಕೊಂಡೊಯುವುದು.
- ಉದ್ಯೋಗ ಕೇಂದ್ರಗಳ ಸ್ಥಾಪನೆ
  - ರಾಜ್ಯ ಕೌಶಲ್ಯ ಇಲಾಖೆ
  - ಕಾರ್ಪೋರೇಟ್ ಚಾಂಪಿಯನ್‌ಷಿಪ್ ಕಾರ್ಯಕ್ರಮಗಳು
  - ರಾಜ್ಯ ಕಲಿಕಾ ಸಮಯದ ಕಾರ್ಯಕ್ರಮಗಳು
  - ರಾಜ್ಯ ಮಟ್ಟದ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು

## ಕ್ರೀಡಾ ಆರ್ಥಿಕತೆ

- ಕರ್ನಾಟಕದಲ್ಲಿ ಕ್ರೀಡಾ ಪಾಲ್ಗೊಳ್ಳುವಿಕೆಯನ್ನು ಹಾಗು ಕ್ರೀಡಾಪಟುತ್ವವನ್ನು ಉತ್ತೇಜಿಸಲು ಜ್ಞಾನಾಧಾರಿತ, ತಂತ್ರಜ್ಞಾನಾಧಾರಿತ, ಪಾರದರ್ಶಕ, ವ್ಯವಸ್ಥೆಯನ್ನು ಕ್ರೀಡಾ ಕ್ಷೇತ್ರದಲ್ಲಿ ಒದಗಿಸಿ ಕೊಡುವುದು ಮುಖ್ಯ ಧೇಯವಾಗಿದೆ.
- ನಾವು ದೇಶೀಯ ಆಟಗಳಾದ ಕಬಡ್ಡಿ, ಖೋ ಖೋ ಇತ್ಯಾದಿಗಳಿಗೆ ವಸತಿ ಸೌಲಭ್ಯಗಳೊಂದಿಗೆ ಕ್ರೀಡಾ ಅಕಾಡೆಮಿಗಳನ್ನು ಪ್ರಾರಂಭಿಸುತ್ತೇವೆ.
- ಕರ್ನಾಟಕದ ಯಾವುದೇ ಕ್ರೀಡಾಪಟುವು ಒಲಿಂಪಿಕ್ಸ್‌ನಲ್ಲಿ ಪದಕವನ್ನು ಗಳಿಸಿದರೆ ಅವರಿಗೆ ರೂ. 1 ಕೋಟಿಗಳ ನಗದು ಬಹುಮಾನವನ್ನು ಮತ್ತು ಇತರೆ ಅಂತರ್-ರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಗೆದ್ದರೆ ನಗದು ಬಹುಮಾನವನ್ನು ನೀಡಲಾಗುತ್ತದೆ.
- ಬೋಧನಾ ಸೌಲಭ್ಯಗಳೊಂದಿಗೆ ಎಲ್ಲಾ ತಾಲ್ಲೋಕುಗಳಲ್ಲಿ ಕ್ರೀಡಾ ಕೇಂದ್ರಗಳನ್ನು ಪ್ರಾರಂಭಿಸಲು ಯೋಜನೆಗಳನ್ನು ಪ್ರಾರಂಭಿಸಲಾಗುತ್ತದೆ.
- ಬೆಂಗಳೂರಿನಲ್ಲಿ ಕನಿಷ್ಟ 10 ಅಂತರ್‌ರಾಷ್ಟ್ರೀಯಮಟ್ಟದ ಕ್ರೀಡಾಂಗಣಗಳನ್ನು ನಿರ್ಮಿಸಿ ಅಂತರ್‌ರಾಷ್ಟ್ರೀಯ, ಕ್ರೀಡಾ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಲಾಗುವುದು.
- ಮೈಸೂರಿನಲ್ಲಿ ಕ್ರೀಡಾ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು.
- ಮಕ್ಕಳಿಗೆ ಕ್ರೀಡಾ ಸಂಸ್ಕೃತಿಯನ್ನು ಹೆಚ್ಚಿಸಲು ಕ್ರೀಡಾ ಮತ್ತು ಯೋಗಾವನ್ನು ಶಾಲೆಯಲ್ಲಿ ಖಡ್ಡಾಯ ವಿಷಯವಾಗಿ ಇಡುವುದು.
- ಯುವ ಚೈತನ್ಯ ಯೋಜನೆಯನ್ನು ಇನ್ನೂ ವಿಸ್ತರಿಸಿ ಒಂದು ಲಕ್ಷ ಯುವಕ ಮಂಡಳಿಗಳನ್ನು ಒಳಗೊಳ್ಳುವಂತೆ ಮಾಡಲಾಗುವುದು.
- ಕನಿಷ್ಟ ಯಾವುದಾದರೂ ಒಂದು ರಾಷ್ಟ್ರೀಯ ಸ್ಪರ್ಧೆಯನ್ನು ರಾಜ್ಯದಲ್ಲಿ ಪ್ರತಿ ವರ್ಷವೂ ಏರ್ಪಡಿಸುವುದು ಮತ್ತು ಕನಿಷ್ಟ ಒಬಿದು ಅಂತರ್‌ರಾಷ್ಟ್ರೀಯ ಸ್ಪರ್ಧೆಯನ್ನು ಪ್ರತಿ 4 ವರ್ಷಗಳಿಗೊಮ್ಮೆ ಏರ್ಪಡಿಸುವುದು.

## ಶಾಸ್ತ್ರೀಯ ಭಾಷೆ ಮತ್ತು ಕನ್ನಡ ಸಂಸ್ಕೃತಿ

- ಕನ್ನಡ ಭಾಷೆಯ ಭವ್ಯತೆ, ಶ್ರೀಮಂತಿಕೆಯನ್ನು ರಾಜ್ಯದಾದ್ಯಂತ ಪಸರಿಸುವ ಮೂಲಕ ಪ್ರತಿ ಪ್ರಜೆಯೂ ಕನ್ನಡ ಕಲಿಯುವಂತೆ, ಗೌರವಿಸುವಂತೆ ಪ್ರೇರಣೆಯನ್ನು ನೀಡುವುದು
- ನಾವು ಗ್ರಾಮೀಣ ಸಾಂಸ್ಕೃತಿಕ ಕೇಂದ್ರಗಳನ್ನು ಸ್ಥಾಪಿಸಿ, ಶಾಸ್ತ್ರೀಯ ನೃತ್ಯ/ ಜನಪದ ನೃತ್ಯ ಮತ್ತು ಹಾಡುಗಳು/ ಜಾನಪದ ಇತ್ಯಾದಿಗಳನ್ನು ಬೋಧಿಸುತ್ತೇವೆ.
- ನಮ್ಮ ಸರ್ಕಾರವು ಸಾಹಿತ್ಯ ಭಾಷಾ ಪ್ರಾಧಿಕಾರವನ್ನು ರಚನೆ ಮಾಡಲಿದೆ.
- ನಮ್ಮ ಸರ್ಕಾರವು ಗದಗದಲ್ಲಿ ಕಾಲಾತ್ಮಕ ರಾಷ್ಟ್ರೀಯ ರಂಗಮಂದಿರವನ್ನು ನಿರ್ಮಿಸಲಿದೆ ಇದು ಕಲೆ, ಸಾಹಿತ್ಯ, ಸಂಗೀತ, ಮತ್ತು ಕಾವ್ಯಗಳನ್ನು ಪ್ರೋತ್ಸಾಹಿಸಲಿದೆ. ಇದು ಆದಿ ಕವಿ ಪಂಪ, ಕುಮಾರ ವ್ಯಾಸ, ನಯಸೇನ, ದುರ್ಗಸಿಂಹ, ಸಂಗೀತಗಾರನಾದ ದೀನಸೇನನಂತಹ ಅಗ್ರಮಾನ್ಯರಿಗೆ ಒಂದು ಗೌರವವಾಗಿದೆ. ರಂಗ ಕಲಾವಿದರಾದ ಗರುಡ ಸದಾಶಿವ, ಹೆಚ್ .ಹೆಚ್. ಹೂಗಾರ್, ಚಾಮರಸ, ಮಲ್ಲಿಕಾರ್ಜುನ ಮನ್ಸೂರ್, ಪುಟ್ಟರಾಜ ಗವಾಯಿಗಳು, ಪಂಚಮುಖಿ ಗವಾಯಿ, ಪುರಂದರ ಗವಾಯಿ, ಗಂಗೂಬಾಯಿ ಹಾನಗಲ್ ಇವರು ಈ ಪ್ರದೇಶದಿಂದ (ಲಕ್ಕುಂಡಿ, ಗದಗ, ಅಣ್ಣಿಗೇರಿ, ಲಕ್ಷ್ಮೇಶ್ವರ) ಬಂದವರಾಗಿದ್ದಾರೆ.
- ಕರ್ನಾಟಕ ಏಕೀಕರಣದ ಹೋರಾಟದ ದಂತಕಥೆಗಳಾದವರನ್ನ ಗೌರವಿಸಲು, 1924 ರ ಕಾಂಗ್ರೆಸ್ ಅಧಿವೇಶನದ ನೆನಪಿಗಾಗಿ ನಾವು ಬೆಳಗಾವಿಯಲ್ಲಿ ಸ್ವಾತಂತ್ರ್ಯ ಸ್ಮಾರಕವನ್ನು ಮತ್ತು ಥೀಮ್ ಪಾರ್ಕ್‌ನ್ನು ನಿರ್ಮಿಸಿದ್ದೇವೆ ಈ ಅಧಿವೇಶನ ಒಂದರಲ್ಲೇ ಮಹಾತ್ಮ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದುದು.
- ನಾವು ದಾ.ರಾ.ಬೇಂದ್ರೆ, ಪ್ರೊ.ಆರ್.ಸಿ.ಹಿರೇಮಠ,

ಎನ್.ಕೆ.ಕುಲಕರ್ಣಿ, ಮತ್ತು ಜೀವಂತ ದಂತಕಥೆ ಡಾ.ಪಾಟೀಲ್ ಪುಟ್ಟಪ್ಪ, ಜಿ.ಪಿ.ಅಮೂರ, ಗಿರಡ್ಡಿ ಗೋವಿಂದರಾಜು ಇವರ ಸ್ಮರಣಾರ್ಥವಾಗಿ ಒಂದು ಲೇಖಕರ ವೇದಿಕೆಯನ್ನು ಸ್ಥಾಪಿಸಲಿದ್ದೇವೆ.

- ನಾವು ಕನ್ನಡ ಭಾಷೆಯನ್ನು ರಾಜ್ಯದಾದ್ಯಂತ ಪ್ರೋತ್ಸಾಹಿಸಲು ಮತ್ತು ಎಲ್ಲಾ ನಾಗರೀಕರು ಕಲಿಯುವ, ಗೌರವಿಸುವ, ಮತ್ತು ಕನ್ನಡದ ಸಮೃದ್ಧಿಯನ್ನು ಶ್ಲಾಘಿಸುವ ಒಂದು ಹೊಂದಾಣಿಕೆಯ ವಾತಾವರಣವನ್ನುಂಟು ಮಾಡಲು ಬದ್ಧರಾಗಿದ್ದೇವೆ.
- ನಮ್ಮ ಸರ್ಕಾರವು ವಸ್ತುಪ್ರದರ್ಶನ ಪ್ರಾಧಿಕಾರದೊಂದಿಗೆ ಬೆಳಗಾವಿಯಲ್ಲಿ ಥೀಮ್ ಮತ್ತು ಸ್ವಾತಂತ್ರ್ಯ ಉದ್ಯಾನವನ್ನು ಅಭಿವೃದ್ಧಿಪಡಿಸಲಿದೆ. ಇದು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಮತ್ತು ಕರ್ನಾಟಕ ಏಕೀಕರಣದ ಹೋರಾಟಗಳನ್ನು ಪ್ರದರ್ಶಿಸಲಿದೆ. ಆಲೂರು ವೆಂಕಟರಾವ್, ಹುಲಿಯಗೌಡ, ನಾರಾಯಣರಾವ್ ಇತ್ಯಾದಿ.

ಶಕ್ತಿ

# ವಿದ್ಯುತ್ ಪ್ರಗತಿ

ಕಾಂಗ್ರೆಸ್ ತನ್ನ ಗುರಿಯಾದ ಎಲ್ಲರಿಗೂ ಗುಣಾತ್ಮಕ ಜೀವನಕ್ಕಾಗಿ ಸುಧಾರಿತ ಗುಣಮಟ್ಟದ ಸಾಕಾಗುವಷ್ಟು ಶುದ್ಧ, ನಂಬಿಕಾರ್ಹ ಮತ್ತು ಸುಸ್ಥಿರ ವಿದ್ಯುತ್ ಒದಗಿಸಲು ಬದ್ಧವಾಗಿದೆ. ಕಾಂಗ್ರೆಸ್‌ನ ಸೇವೆಯಿಂದಾಗಿ ಕರ್ನಾಟಕವು ವಿದ್ಯುತ್ ಕ್ಷೇತ್ರದಲ್ಲಿ ಅದ್ಭುತವಾದ ಬೆಳವಣಿಗೆಯನ್ನು ಸಾಧಿಸಲು ಸಾಧ್ಯವಾಗಿದೆ. ನಾವು ಕೃಷಿ ಕ್ಷೇತ್ರ, ಕೈಗಾರಿಕಾ ಕ್ಷೇತ್ರ, ಮತ್ತು ಸೇವಾ ಕ್ಷೇತ್ರಗಳ ವಿದ್ಯುತ್ ಅಗತ್ಯಗಳನ್ನು ಪೂರೈಸುವ ಖಾತರಿ ನೀಡಿದ್ದೇವೆ. ಕರ್ನಾಟಕದ ಸ್ಥಾಪಿತ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು 2012 ರ 13,394 ಮೆಗಾವ್ಯಾಟ್‌ಗಳಿಂದ 2017 ರ ಸೆಪ್ಟಂಬರ್‌ವರೆಗೆ 21,492 ಮೆಗಾವ್ಯಾಟ್‌ಗಳಿಗೆ ಹೆಚ್ಚಳವಾಗಿದೆ.

ನಮ್ಮ ಪಕ್ಷದಿಂದ ಅನೇಕ ಮುಂಚೂಣಿ ಯೋಜನೆ ಮತ್ತು ಉಪಕ್ರಮಗಳನ್ನು ತೆಗೆದುಕೊಳ್ಳಲಾಗಿದ್ದು, 31 ಮಾರ್ಚ್ 2017 ರವರೆಗೆ ಕರ್ನಾಟಕವು ಸಮೃದ್ಧವಾದ ನವೀಕರಸಿಬಹುದಾದ ಇಂಧನ (ಆರ್.ಇ.) ವನ್ನು ಸಮರ್ಥವಾಗಿ ಬಳಕೆ ಮಾಡಿಕೊಂಡಿದ್ದು ಅದರ ಸ್ಥಾಪಿತ ಉತ್ಪಾದನಾ ಸಾಮರ್ಥ್ಯ ಶೇಕಡಾ 36 ರಷ್ಟಾಗಿದೆ ಅಲ್ಲದೆ ಒಟ್ಟು ವಿದ್ಯುತ್ ಉತ್ಪಾದನೆಯ ಶೇಕಡಾ 18 ರಷ್ಟು ನವೀಕರಿಸಬಹುದಾದ ಇಂಧನದಿಂದಾಗಿದೆ – ಇದು ನವೀಕರಿಸಬಹುದಾದ ಶಕ್ತಿಮೂಲಗಳಿಂದ ಉತ್ಪಾದಿಸಬಹುದಾದ ವಿದ್ಯುತ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ. ರಾಜ್ಯದಲ್ಲಿರುವ ಸ್ವಾಯತ್ತ ವಿದ್ಯುತ್ ಉತ್ಪಾದನಾ ಸ್ಥಾಪಿತ ಸಾಮರ್ಥ್ಯವು ಸಿ.ಎ.ಜಿ.ಆರ್ ನ ಶೇಕಡಾ 13 2012 ಮತ್ತು 2017 ನಡುವೆ ಹೆಚ್ಚಾಗಿದೆ.

## ನಮ್ಮ ಪ್ರಮುಖ ಸಾಧನೆಗಳು

- ರಾಜ್ಯ ಸರ್ಕಾರವು ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸಲು ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅನೇಕ ಉಪಕ್ರಮಗಳನ್ನು ತೆಗೆದುಕೊಂಡಿದೆ. ನಮ್ಮ ಪಕ್ಷವು ತನ್ನ ಪರಿಸರವನ್ನು ರಕ್ಷಿಸಲು ಬದ್ಧವಾಗಿದ್ದು ಶುದ್ಧವಾದ ವಿದ್ಯುತ್ ಬಳಕೆ ಮಾಡುತ್ತಿದೆ, ಸರ್ಕಾರವು ನವೀಕರಿಸಬಹುದಾದ ವಿದ್ಯುತ್‌ಗೆ ಶೇಕಡಾ 50 ರಷ್ಟು ಬದಲಾಗಲಿದೆ (ಸೌರವಿದ್ಯುತ್, ಗಾಳಿ ಜಿಯೋಥರ್ಮಲ್, ಹೈಡ್ರೋಎಲೆಕ್ಟ್ರಿಕಲ್, ಜೈವಿಕ ತ್ಯಾಜ್ಯ ಇತ್ಯಾದಿ). ನಾವು ಎಲ್ಲರಿಗೂ ಸಾಕಷ್ಟು ಶುದ್ಧ, ನಂಬಿಕಾರ್ಹವಾದ ಮತ್ತು ಸುಸ್ತಿರವಾದ 100% ವಿದ್ಯುತ್ ನೀಡುವ ಭರವಸೆ ನೀಡುತ್ತೇವೆ.
- ತುಮಕೂರು ಜಿಲ್ಲೆಯ ಪವಗಡ ತಾಲೂಕಿನ 2,300 ರೈತರು ವಿಶ್ವದ ಅತಿದೊಡ್ಡ ಸೌರಶಕ್ತಿ ಉದ್ಯಾನವನ್ನು ಸೃಷ್ಟಿಸಲು ನೆರವಾದರು.

ನಮ್ಮ ಪಕ್ಷವು ತನ್ನ ಪರಿಸರವನ್ನು ರಕ್ಷಿಸಲು ಬದ್ಧವಾಗಿದ್ದು ಶುದ್ಧವಾದ ವಿದ್ಯುತ್ ಬಳಕೆ ಮಾಡುತ್ತಿದೆ, ಸರ್ಕಾರವು ನವೀಕರಿಸಬಹುದಾದ ವಿದ್ಯುತ್‌ಗೆ ಶೇಕಡಾ 50 ರಷ್ಟು ಬದಲಾಗಲಿದೆ (ಸೌರವಿದ್ಯುತ್, ಗಾಳಿ ಜಿಯೋಥರ್ಮಲ್, ಹೈಡ್ರೋಎಲೆಕ್ಟ್ರಿಕಲ್, ಜೈವಿಕ ತ್ಯಾಜ್ಯ ಇತ್ಯಾದಿ). ನಾವು ಎಲ್ಲರಿಗೂ ಸಾಕಷ್ಟು ಶುದ್ಧ, ನಂಬಿಕಾರ್ಹವಾದ ಮತ್ತು ಸುಸ್ತಿರವಾದ 100% ವಿದ್ಯುತ್ ನೀಡುವ ಭರವಸೆ ನೀಡುತ್ತೇವೆ.

- ಕುಟುಂಬಗಳ ಸಂಪೂರ್ಣ ವಿದ್ಯುದೀಕರಣವನ್ನು ಖಚಿತಪಡಿಸುತ್ತೇವೆ ಇಷ್ಟೇ ಅಲ್ಲದೆ :
  - ವಿದ್ಯುತ್‌ನ ಅಗತ್ಯವಿರುವ ನಿಖರವಾದ ಮನೆಗಳನ್ನು ಲೆಕ್ಕ ತೆಗೆದುಕೊಳ್ಳುವುದು
  - ಜಿಲ್ಲಾ ಮಟ್ಟದ ಉತ್ಪಾದಕತೆ ಮತ್ತು ಸಾಮಾಜಿಕ ಹೊರೆಗಳ ಲೆಕ್ಕ ತೆಗೆದುಕೊಳ್ಳುವುದು
  - ವಿದ್ಯುತ್ ಘಟಕಗಳ ಸಬಲೀಕರಣ ಮತ್ತು ಜಾಲವನ್ನು ಬಲಗೊಳಿಸುವಿಕೆಯನ್ನು ಹೆಚ್ಚಿಸುವುದು.
  - ತಲಾ ಬಳಕೆಯನ್ನು 3,000 ಕಿ.ವ್ಯಾಟ್ ಹೆಚ್ಚಿಸುವುದು
- ಎಲ್ಲಾ ಅಂತಿಮ ಬಳಕೆದಾರರಿಗೆ ಶುದ್ಧ ಶಕ್ತಿ ಮೂಲಗಳನ್ನು ಅಳವಡಿಸುವುದು ಮತ್ತು ಅವು :
  - ರಾಜ್ಯಕ್ಕೆ ಹೆಚ್ಚಿನ ಆರ್‌ಪಿಓಗಳನ್ನು ಸ್ಥಾಪನೆ ಮಾಡುವುದು.
  - ಸರ್ಕಾರಿ ಕಟ್ಟಡಗಳಲ್ಲಿ ಆರ್‌ಟಿಪಿವಿ ಅಳವಡಿಕೆಯನ್ನು ಕಡ್ಡಾಯಗೊಳಿಸುವುದು.
  - ಸೌರ ವಿದ್ಯುತ್‌ನ ಕೃಷಿ ಫೀಡರ್‌ಗಳ ಕಾರ್ಯಸಾಧ್ಯತೆಗಳನ್ನು ವಿಶ್ಲೇಷಣೆ

ಮಾಡುವುದು.

- ಪಂಪಿಂಗ್ ಗೆ ಡಿಜಿ ಸೆಟ್ ಬದಲಿಗೆ ಆರ್‌ಇ–ಅಂತರ್ಗತ ಸಂಗ್ರಹಣಾ ಆಯ್ಕೆಯನ್ನು ಬಳಸಿಕೊಳ್ಳುವುದು.
- ಇವಿಗಳಿಗೆ ಚಾರ್ಜಿಂಗ್ ಮೂಲಸೌಕರ್ಯಗಳ ಮತ್ತು ವ್ಯವಹಾರಿಕ ಮಾದರಿಗಳ ಮೌಲ್ಯಮಾಪನ ಮಾಡುವುದು.
- ಡಬ್ಲ್ಯೂಟಿಇ ಉತ್ಪಾದನೆಗೆ ತ್ಯಾಜ್ಯ  ಉತ್ಪಾದನಾ ಸಮರ್ಥತೆಯನ್ನು (ಅಂದಾಜಿಸುವುದು) ಲೆಕ್ಕಹಾಕುವುದು.

- ಕೈಗಾರಿಕೆ, ವಸತಿ ಮತ್ತು ವಾಣಿಜ್ಯ ಕಟ್ಟಡಗಳಿಗೆ ಮತ್ತು ಕೃಷಿ ಕ್ಷೇತ್ರಕ್ಕೆ ಸುಧಾರಿತ ವಿದ್ಯುತ್ ಪೂರೈಕೆಯ ಭರವಸೆ.
- ವಿತರಣೆಯಾದ ನವೀಕರಿಸಬಹುದಾದ ವಿದ್ಯುತ್ (ಡಿಆರ್‌ಇ) ಮತ್ತು ವಿದ್ಯುತ್ ಪೂರೈಕೆಯ ಆರ್‌ಇ, ಇಇ,ಗಳ ತಡರಹಿ ಏಕೀಕರಣಕ್ಕಾಗಿ ಗ್ರಿಡ್ ಯೋಜನೆಯನ್ನು ಸುಧಾರಿಸುವುದು
- ಬಳಕೆಗಳಿಂದ ಆರೋಗ್ಯಪೂರ್ಣ ಆರ್ಥಿಕತೆಯನ್ನು ಸುಧಾರಣೆ ಮಾಡುವುದು.
    - ಎಲ್ಲಾ ಕ್ಷೇತ್ರಗಳಲ್ಲೂ ಬಳಕೆಗೆ 100% ಮೀಟರ್ ಅಳವಡಿಕೆಯನ್ನು ಖಚಿತಪಡಿಸಿಕೊಳ್ಳುವುದು.
    - ರಿಯಾಯಿತಿ ವಿತರಣೆಗಳಿಗಾಗಿ ನೇರ ಲಾಭದ ವರ್ಗಾವಣೆ ಯೋಜನೆಯನ್ನು ಬಳಸಿಕೊಳ್ಳುವುದು.
    - ಅಂತಿಮ ಬಳಕೆದಾರರ ಮೇಲ್ವಿಚಾರಣೆಗಾಗಿ ಕಣ್ಗಾವಲು ಕೋಶವನ್ನು ಸ್ಥಾಪನೆ ಮಾಡುವುದು.
- ಎಲ್ಲಾ ಜಿಲ್ಲೆಗಳಲ್ಲೂ ವಿದ್ಯುತ್ ಮತ್ತು ಸಂಬಂಧಿಸಿದ ಸೇವೆಗಳಲ್ಲಿ ಉದ್ಯೋಗಾವಕಾಶಗಳನ್ನು ಉತ್ತೇಜಿಸುವುದು.
- ಇಂಧನ ದಕ್ಷತಾ ಶಾಖೆಯಲ್ಲಿ 5 ಸ್ಟಾರ್ ಮತ್ತು ಅತ್ಯುತ್ತಮ ಸಾಮರ್ಥ್ಯದ ದರವಿರುವ ಸಲಕರಣೆಗಳನ್ನು ಉತ್ಪಾದಿಸುವುನ್ನು ಪ್ರೋತ್ಸಾಹಿಸುವುದು.
- ಇವಿ, ಚಾರ್ಜಿಂಗ್ ಮೂಲಸೌಕರ್ಯ ಮತ್ತು ಬ್ಯಾಟರಿ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವುದು.
- ಶಾಲೆ ಮತ್ತು ಕಾಲೇಜುಗಳ ಪಠ್ಯಕ್ರಮದಲ್ಲಿ ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿದ ವಿಷಯಗಳನ್ನು ಅಳವಡಿಸುವುದು.
- ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಮತ್ತು ಸಂಬಂಧಿಸಿದ ಸೇವೆಗಳ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸುವುದು.
- ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ತರಬೇತಿ ಕಾರ್ಯನಿರ್ವಹಣೆ ಮತ್ತು ನಿರ್ವಹಣಾ (ಓ ಮತ್ತು ಎಮ್) ಸೇವೆಗಳಲ್ಲಿ ಸಾಮರ್ಥ್ಯವರ್ಧನೆಯ ಮೇಲೆ ಗಮನ ಹರಿಸುವುದು.

ಆಡಳಿತ

# ಮಹಾನ್ ಪ್ರಗತಿಗೆ ಉತ್ತಮ ಆಡಳಿತ

ನಮ್ಮ ಸರ್ಕಾರದ ಆಡಳಿತಾವಧಿಯಲ್ಲಿ ನಮ್ಮ ಕರ್ನಾಟಕ ಎಚಿಬುದನ್ನು ಘೋಷಿಸಿರುವುದರಿಂದ ಉತ್ತಮ ಕಾರ್ಯನಿರ್ವಹಣೆ ಮಾಡಿದ ರಾಜ್ಯಗಳಲ್ಲಿ ಒಂದಾಗಿದೆ, ಮತ್ತು ನ್ಯಾಯಯುತ ಅಭಿವೃದ್ಧಿ ಪ್ರಕ್ರಿಯೆಗಳ ಆಧಾರಿತವಾದ ಉಪಕ್ರಮಗಳ ನೀತಿಗಳಿಂದ ಸಮರ್ಥನೀಯ ಪ್ರಚಾರ ಪಡೆದುಕೊಂಡಿದೆ. ಆಡಳತ ಪ್ರಕ್ರಿಯೆಗಳಲ್ಲಿ ಮುಂಚೂಣಿಯಲ್ಲಿದೆ ಹಾಗೂ ವಿನ್ಯಾಸಯುಕ್ತ ಆಡಳತ ಕ್ರಮಗಳು ಈಗಾಗಲೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಿಂದ ರಾಜ್ಯದಲ್ಲಿ ಚಲಾವಣೆಯಲ್ಲಿವೆ. ನಮ್ಮ ಪಕ್ಷವು ಪರಿಸರವನ್ನು ಬದಲಾಯಿಸಲು ಗಮನ ಹರಿಸಿದೆ, ಸಮಸ್ಯೆಗಳನ್ನು ಎದುರಿಸಲು, ಮತ್ತು ನೀತಿಗಳ ವ್ಯವಸ್ಥೆಯನ್ನು ಸದೃಢಗೊಳಸಲು ಮತ್ತು ಭಾಗೀದಾರರನ್ನು ಸಮರ್ಥ ಮೇಲ್ದರ್ಜೆಗೇರಿಸುವುದು ಮತ್ತು ಸೇವೆಗಳನ್ನು ವಿಸ್ತರಿಸುವುದು ಮತ್ತು ನಾಗರೀಕ ಕೇಂದ್ರಿತವಾದ ಸೇವೆಗಳನ್ನು ನೀಡುವ ವ್ಯವಸ್ಥೆಯು ಆಡಳತ ವ್ಯವಸ್ಥೆಯ ಹೊಸ ಒತ್ತುಕೊಡುವಿಕೆಯನ್ನು ಪ್ರತಿನಿಧಿಸುತ್ತದೆ. ಕಾಂಗ್ರೆಸ್ ಕರ್ನಾಟಕದಲ್ಲಿ ಉತ್ತಮ ಆಡಳತಾತ್ಮಕ ನೀತಿಗಳನ್ನು ಸ್ಥಾಪಿಸುವುದರಲ್ಲಿ ಯಶಸ್ವಿಯಾಗಿದೆ. ಸಾರ್ವಜನಿಕ ವ್ಯವಹಾರ ಕೇಂದ್ರ (ಪಿಎಸಿ) ಸಾರ್ವಜನಿಕ ವ್ಯವಹಾರಗಳ ಸೂಚಿ (ಪಿಎಐ)ಯ 2017 ರ ಅಧ್ಯಯನವು ನಮ್ಮ ಪಕ್ಷದ ಸಾಧನೆಯನ್ನು ದಾಖಲಿಸಿದೆ – ಕರ್ನಾಟಕವು ಪಾರದರ್ಶಕತೆ ಮತ್ತು ಉತ್ತರದಾಯಿತ್ವದಲ್ಲಿ ಒಟ್ಟಾರೆ 4 ರಲ್ಲಿ 2 ನೇ ದರ್ಜೆಯನ್ನು ಪಡೆದುಕೊಂಡಿದೆ.

## ನಮ್ಮ ಪ್ರಮುಖ ಸಾಧನೆಗಳು

- ಉತ್ತಮ ಆಡಳತ ಮತ್ತು ಬೆಳವಣಿಗೆ ಆಧಾರದ ಸಾಮಾಜಿಕ ನ್ಯಾಯ, ಜ್ಯಾತ್ಯಾತೀತ ಮೌಲ್ಯಗಳು ಮತ್ತು ಪ್ರಜಾತಾಂತ್ರಿಕವಾದ, ಎಲ್ಲರಿಗೂ ಸಮಾನ ಅವಕಾಶಗಳೆಂಬ ನೀತಿಗಳಿಂದ ನವಕರ್ನಾಟಕವನ್ನು ನಿರ್ಮಿಸಿದೆ. ಸರ್ಕಾರವು ಸಮಾಜದ ಎಲ್ಲಾ ವರ್ಗದವರ ಕಲ್ಯಾಣಕ್ಕಾಗಿ ಅವಿರತ ಶ್ರಮಿಸುತ್ತಿದೆ.
- ಶ್ರೀ ಸಿದ್ದರಾಮಯ್ಯನವರು ಮುಖ್ಯ ಮಂತ್ರಿಗಳಾಗಿ ಕರ್ನಾಟಕವು ತನ್ನದೇ ಅಭಿವೃದ್ಧಿ ಮಾದರಿಯನ್ನು ರಚಿಸಿರುವುದನ್ನು ಖಾತರಿಗೊಳಸಿದ್ದಾರೆ.
- 2013–2017 ರ ವರೆಗಿನ ಕರ್ನಾಟಕ ಮುಂಗಡ ಪತ್ರದಲ್ಲಿ ಬೆಳವಣಿಗೆ ಆಧಾರಿತ ರಾಜ್ಯವಾಗಿರುವುದು ಕಂಡುಬಂದಿದೆ.
- ಕರ್ನಾಟಕದ ರಾಜ್ಯ ತಲಾ ಆದಾಯ (ಎನ್ ಎಸ್ ಡಿ ಪಿ) 2016–17 ರಲ್ಲಿ ಅಂದಾಜು ರೂ. 1,59,893 ಆಗಿದೆ. 2016–17 ರಲ್ಲಿ ರಾಷ್ಟ್ರೀಯ ತಲಾ ಆದಾಯವು ರೂ. 1,03,007 ಗಳನ್ನು ಮುಟ್ಟುವ ಅಚಿದಾಜಿದೆ.
- ಕರ್ನಾಟಕದ ಹಣಕಾಸು ಸ್ಥಿತಿಯು ಬಲಿಷ್ಟ ಮತ್ತು ಸ್ಥಿರವಾಗಿದೆ. ರಾಜ್ಯದ ಹಣಕಾಸು ಏಕೀಕರಿಸುವ ಪ್ರಯತ್ನಗಳು ಮುಂದುವರಿದಿದ್ದು ಕರ್ನಾಟಕ ಹಣಕಾಸು ಜವಾಬ್ದಾರಿ ಕಾಯಿದೆ 2002ರೊಳಗಿನ ನಿಗಧಿತ ಮಿತಿಯೊಳಗೆ ಎಲ್ಲಾ ಹಣಕಾಸು ಸೂಚಕಗಳಲ್ಲಿ ಪರಿಣಾಮಕಾರಿಯಾಗಿರಲಿವೆ.
- ಕರ್ನಾಟಕದ ವೆಬ್‌ಸೈಟ್ ಪ್ರತಿಬಿಂಬದ ಪ್ರಾರಂಭದಿಂದ ರಾಜ್ಯದಾದ್ಯಂತ ಜನರು ಅಭಿವೃದ್ಧಿಯ ಪ್ರಗತಿಯನ್ನು ಪರೀಕ್ಷಿಸಬಹುದು.
- ಮುಂಚೂಣಿ ಕಾರ್ಯಕ್ರಮಗಳಾದ ಕೃಷಿ ಭಾಗ್ಯ, ವಸತಿ ಯೋಜನೆಗಳು, ವಿದ್ಯಾಸಿರಿ, ಅನ್ನಭಾಗ್ಯ, ಶುದ್ಧ ಕುಡಿಯುವ ನೀರು ಯೋಜನೆಗಳು, ನರೇಗಾ ಕಾರ್ಯಕ್ರಮಗಳು, ಪಶು ಭಾಗ್ಯ ಯೋಜನೆಗಳು, ಕ್ಷೀರ ಭಾಗ್ಯ ಯೋಜನೆಗಳು, ಮೈತ್ರಿ, ಮನಸ್ವಿನಿ.
- 

**ನಮ್ಮ ಸರ್ಕಾರದ ಪ್ರಮುಖ ಗಮನೀಯ ಕ್ಷೇತ್ರಗಳೆಂದರೆ:**

ಎ. ಭ್ರಷ್ಟಾಚಾರವನ್ನು ಕಡಿಮೆ ಮಾಡುವುದು.

ಬಿ. ಸೇವೆಗಳನ್ನು ನೀಡುವುದನ್ನು ಮತ್ತಷ್ಟು ಸುಧಾರಿಸುವ ಕಾಯಿದೆ (ಸಕಾಲ).

- ಸಿ. ನೈಸರ್ಗಿಕ ಸಂಪನ್ಮೂಲಗಳ ಹಂಚಿಕೆಗೆ ಸಂಬಂಧಿಸಿದಂತೆ ಇ–ಆಡಳತ ಯಾಂತ್ರಿಕತೆಗಳನ್ನು ಬಳಸಿಕೊಳ್ಳುವುದು.
  - ಹರಾಜು (ಸ್ಪೆಕ್ಟ್ರಂ, ಕಬ್ಬಿಣದ ಅದಿರು/ಗಣಿಗಳು)
  - ಸಂಪನ್ಮೂಲಗಳ ತರ್ಕಬದ್ಧ ಹಂಚಿಕೆ– ಸಾಮರ್ಥ್ಯದ ಹೆಚ್ಚಳ–ನೀರು, ವಿದ್ಯುತ್

ಇ. ಪಾರದರ್ಶಕ ಸರ್ಕಾರಿ ನಿರ್ಮಾಣ ಪ್ರಕ್ರಿಯೆ

- ಹೊರಗುತ್ತಿಗೆ ವಿನ್ಯಾಸ–ಉದಾಹರಣೆಗೆ ಕೊಂಕಣ್ ರೈಲ್ವೇ

- ವ್ಯಾಪ್ತಿಯ ಮಿತಿಯಲ್ಲಿ ಬದಲಾವಣೆ ಮತ್ತು ಹೆಚ್ಚಿನ ಪಾವತಿ ಅವಕಾಶಗಳು–ಉದಾ. ಕೆಪಿಸಿಎಲ್

ಎಫ್. ತಾಂತ್ರಿಕ ಆಯ್ಕೆಗಳನ್ನು ಹೆಚ್ಚಿಸುವುದು.

- ಸಂಚಾರೀ ಆಡಳಿತದ ಮೇಲೆ ಗಮನಹರಿಸುವುದು
- ದೊಡ್ಡ ಅಂಕಿಅಂಶ ವಿಶ್ಲೇಷಣೆಗಳನ್ನು ಬಳಸಿಕೊಳ್ಳುವುದು
- ಕೃತಕ ಬೌದ್ಧಿಕತೆ/ಯಾಂತ್ರಿಕ ಕಲಿಕೆಯ ಬಳಕೆ

ಜಿ. ಬೃಹತ್ ಅಂಕಿ ಅಂಶ ವಿಶ್ಲೇಷಣೆ ಕೃತಕ ಬೌದ್ಧಿಕತೆ (ಬುದ್ಧಿಮತ್ತೆ)

- ಯಾಂತ್ರಿಕ ಕಲಿಕೆಯ ವೇದಿಕೆಗಳು
- ಮಾತು, ದೃಷ್ಟಿ ಮತ್ತು ಧ್ವನಿ ಗ್ರಹಣಕ್ಕಾಗಿ ಗುಪ್ತಚರ ಕ್ರಮಾವಳಿಗಳು
- ಡೇಟಾ ಸಂಗ್ರಹಣೆ, ನಿರ್ವಹಣೆ ಮತ್ತು ಸ್ವಯಂಚಾಲನೆಗಾಗಿ ತಾಂತ್ರಿಕತೆಗಳನ್ನು ಬೆಂಬಲಿಸುವುದು

ಐ. ನಾಗರೀಕ ಹಕ್ಕುಗಳ ಸಂಘಗಳ ಸ್ಥಾಪನೆ

ಸಂವಿಧಾನಕ್ಕೆ ನಮ್ಮ ಬದ್ಧತೆಯನ್ನು ನವೀಕರಿಸಲು ಮತ್ತು ನಾಗರೀಕರಲ್ಲಿ ತಿಳುವಳಿಕೆಯನ್ನು ಹೆಚ್ಚಿಸಲು ಸಂವಿಧಾನವು ನಾಗರೀಕ ಹಕ್ಕುಗಳನ್ನು ಖಾತರಿ ಪಡಿಸಿದೆ. ನಾವು ಪ್ರತಿ ನಗರದಲ್ಲಿ ಸಾಂವಿಧಾನಿಕ ತಿಳುವಳಿಕೆ ಮತ್ತು ನಾಗರೀಕ ಹಕ್ಕುಗಳನ್ನು ಸಂಘಗಳನ್ನು ಸ್ಥಾಪಿಸಿದ್ದೇವೆ.

- ನಾಗರೀಕ ಹಕ್ಕುಗಳ ಗುಂಪುಗಳು ಸಂವಿಧಾನದ ಮೇಲಿನ ಚರ್ಚೆಗಳು, ಅದರ ಇತಿಹಾಸ, ಮಾತುಗಳ ಮೂಲಕ ಅದರ ಖಾತರಿ, ಚಲನಚಿತ್ರಗಳು, ಚರ್ಚೆಗಳು, ಗುಂಪು ಚಟುವಟಿಕೆಗಳು ಇತ್ಯಾದಿಗಳು.
- ನಾಗರೀಕ ಹಕ್ಕುಗಳ ಗುಂಪುಗಳು ಕಾನೂನಿಡಿಯಲ್ಲಿ ನಾಗರೀಕರ ಹಕ್ಕುಗಳು, ಸ್ಥಳೀಯವಾಗಿ ಮತ್ತು ರಾಷ್ಟ್ರೀಯವಾಗಿ ತರಬೇತಿ ನೀಡುತ್ತವೆ. ಆರ್ ಟಿ ಐ, ಆರ್ ಟಿ ಇ, ಎಮ್ ಎನ್ ಆರ್ ಇ ಜಿ ಎ ಇತ್ಯಾದಿಗಳು.
- ನಾಗರೀಕ ಹಕ್ಕುಗಳ ಗುಂಪನ್ನು ಎಮ್ಎನ್ಸಿಗಳಲ್ಲಿ, ಅಪಾರ್ಟ್‌ಮೆಂಟ್ ಸಂಕೀರ್ಣಗಳಲ್ಲಿ, ಬಸ್ತಿಗಳಲ್ಲಿ, ಗ್ರಾಮ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸ್ಥಾಪಿಸಲಾಗುತ್ತದೆ.
- ತರಬೇತಿ ಪಡೆದ ಸ್ವಯಂಸೇವಕರು ಇದನ್ನು ಸ್ಥಾಪಿಸಲು ಮತ್ತು ನ್ಯಾಯದ ತತ್ವಗಳನ್ನು, ಸ್ವಾತಂತ್ರ್ಯ, ಸಮಾನತೆ, ಮತ್ತು ಭ್ರಾತೃತ್ವಗಳನ್ನು ಕಾರ್ಯಕ್ರಮಗಳಲ್ಲಿ ಎತ್ತಿಹಿಡಿಯುವುದನ್ನು ಖಚಿತಪಡಿಸಲು ಸಹಾಯಕರ ಪಾತ್ರವನ್ನು ನಿರ್ವಹಿಸುತ್ತಾರೆ.

**ಏಕಗವಾಕ್ಷಿ ಯೋಜನೆ ನೀಡುವಿಕೆ**

ನಮ್ಮ ಪಕ್ಷವು ಈಗಾಗಲೇ ಕರ್ನಾಟಕದಲ್ಲಿ ವ್ಯವಹಾರಗಳನ್ನು ಸುಲಭವಾಗಿ ಮಾಡಲು, ಅನೇಕ ಆಡಳಿತಕ್ರಮಗಳ ಅಭಿವೃದ್ಧಿಪಡಿಸಲು ಕಾಂಗ್ರೆಸ್ ಏಕಗವಾಕ್ಷಿ ಅನುಮೋದನಾ ಯೋಜನೆಯನ್ನು ಬಲಗೊಳಿಸುತ್ತದೆ. ಇದಕ್ಕಾಗಿ ಅನುಮೋದನೆ/ಮಂಜೂರಾತಿ ಅಧಿಕಾರವನ್ನು ಸಂಬಂಧಿಸಿದ ಇಲಾಖೆಯ ಅಧ್ಯಕ್ಷರಗಳು ಕಾಯಿದೆ ಮತ್ತು ನಿಯಮಗಳಂತೆ ಮಾಡಬಹುದಾಗಿದೆ, ಕೈಗಾರಿಕಾಭಿವೃದ್ಧಿಗೆ ಕರ್ನಾಟಕ ಉದ್ಯೋಗ ಮಿತ್ರ ಮತ್ತು ಆಯುಕ್ತರು ರಾಜ್ಯ ಮಟ್ಟದಲ್ಲಿ ಏಕಗವಾಕ್ಷಿ ನೀಡಿಕೆ ಸಮಿತಿಗಳು (ಎಸ್‌ಹೆಚ್‌ಎಲ್‌ಸಿಸಿ/ ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ) ಪಂಜಾಬ್ ಹೂಡಿಕೆಯ ಬ್ಯೂರೋ, ಪ್ರೋಮೋಷನಲ್ ಮಾಡೆಲ್ (ಉತ್ತೇಜಕ ಮಾದರಿಗಳು)ನ ವಿವರಗಳನ್ನು ಈಕೆಳಗೆ ನೀಡಲಾಗಿದೆ.

**ಸಾಂಸ್ಥಿಕ ಸಬಲೀಕರಣ**

- ಎಲ್ಲಾ ಇಲಾಕೆಗಳ ಒಗ್ಗೂಡಿಸುವಿಕೆಯಿಂದ ಕಾರ್ಯದರ್ಶಿಗಳ ಸಮಿತಿಯನ್ನು ಸ್ಥಾಪಿಸುವುದು.
- ಆಡಳಿತವನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಎಲ್ಲಾ ಇಲಾಖೆಗಳಲ್ಲೂ ಶ್ರೇಣೀಕರಣ ಮತ್ತು ನೇಮಕಾತಿ ಕಾನೂನುಗಳನ್ನು ನವೀಕರಿಸುವುದು
- ಪರಿಣಾಮಕಾರೀ ಸಾಂಸ್ಥಿಕ ಸಂಘಟನಾ ನೀತಿಗಳಾದ ಆಡಳಿತ ಬದಲಾವಣೆ, ಕಾರ್ಯನಿರ್ವಹಣಾ ಕಾರ್ಯಗಳ ಮೇಲೆ ಗಮನ ಹರಿಸಿ ಸಂಸ್ಥೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಕೆಲಸವನ್ನು ಮಾಡಿಸಿಕೊಳ್ಳುವುದು.
- ಉದ್ದೇಶಿತ ಡಿಪಿಎಆರ್/ಡಿಎಆರ್‌ಪಿಜಿಯ ಪ್ರಸ್ತಾವಿತ ಸರ್ಕಾರಿ (ವಿನ್ಯಾಸ) ವಾಸ್ತುಶಿಲ್ಪ ಪ್ರಕ್ರಿಯಾ ವ್ಯವಸ್ಥೆಯನ್ನು (ಜಿಪಿಎಎಫ್) ಸೇರ್ಪಡೆ ಮಾಡುವುದು.
- ಬೆಳೆಯುತ್ತಿರುವ ಕ್ಷೇತ್ರಗಳಾದ ವಿಶ್ಲೇಷಕರು, ತಂತ್ರಜ್ಞರು, ಯೋಜನಾಗಾರರು, ಯೋಜನಾ ನಿರ್ವಾಹಕರು, ಸಂಧಾನಕಾರರು, ಪ್ರವರ್ತಕರು ಸ್ಪರ್ಧಾತ್ಮಕ ಬೆಳವಣಿಗೆಗೆ ಅನುಕೂಲ ಮಾಡಿಕೊಡಲು  ಕಡ್ಡಾಯವಾಗಿರುತ್ತಾರೆ. ಇವುಗಳನ್ನು ನವೀಕರಿಸಿ ಇಲಾಖೆಯ ಸಾಮರ್ಥ್ಯವನ್ನು ಹೆಚ್ಚಿಸುವುದು.
- ಒಗ್ಗೂಡುವಿಕೆ ಆಧಾರದ ಯೋಜನೆಯನ್ನು ಸಾಂಸ್ಥೀಕರಣಗೊಳಿಸಿ (ಸಿಲೊಸ) ಇಲಾಖೆ ಕಾರ್ಯನಿರ್ವಹಣೆಗೆ ನೀತಿಯನ್ನು ಪ್ರಾರಂಭಿಸುವುದರ ಮೂಲಕ ಮತ್ತು ಸಮಸ್ಯೆಗಳು/ಚಟುವಟಿಕೆಗಳು ವ್ಯಾಪಕವಾದ ಪರಿಣಾಮವನ್ನು ಹೊಂದಿರುವುದರಿಂದ ಒಗ್ಗೂಡುವಿಕೆಯನ್ನು  ನಿಲ್ಲಿಸುವುದು.
- ಉತ್ತಮ ತಾಂತ್ರಿಕತೆಯನ್ನು ಹೆಚ್ಚಿಸಿ ಇ–ಆಡಳಿತದಲ್ಲಿ ಮತ್ತಷ್ಟು ಉಪಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ದೇಶದಲ್ಲಿ ಉತ್ತಮ ದರ್ಜೆಯನ್ನು ಎತ್ತಿಹಿಡಿಯುವುದನ್ನು ಮುಂದುವರಿಸುವುದು.
- ಅಂತಿಮ ಹಂತದವರೆಗೆ ವಿಕೇಂದ್ರೀಕರಣವನ್ನು ಖಚಿತಪಡಿಸುವುದು
- ಸಾಮರ್ಥ್ಯವರ್ಧನೆಗೆ ಅನುಕೂಲ ಮಾಡಿಕೊಡುವುದು
- ರಾಜ್ಯ, ಜಿಲ್ಲೆ ಮತ್ತು ತಾಲ್ಲೋಕು ಮಟ್ಟಗಳಲ್ಲಿ ಸಾಮರ್ಥ್ಯವರ್ಧನೆ ನಿರ್ವಹಣಾ ಕೋಶಗಳನ್ನು ಸ್ಥಾಪಿಸುವುದು

- ಎಲ್ಲಾ ನಾಗರೀಕರಿಗೆ ಐಇಸಿ ಕಾರ್ಯಕ್ರಮಗಳು
- ಅಧಿಕಾರಿಗಳಿಗೆ ನಿಯಮಾವಳಿಗಳು/ಇಲಾಖೆ/ಗ್ರಾಹಕ ಕೇಂದ್ರಿತ ಆಡಳಿತದ ಬಗ್ಗೆ ಕಡ್ಡಾಯ ತರಬೇತಿ ನೀಡುವುದು
- ಜಿಲ್ಲಾ ಮಟ್ಟದಲ್ಲಿ ಜನಸ್ಪಂದನಾ ಕಛೇರಿಗಳನ್ನು ತೆರೆಯುವುದು ಮತ್ತು ಜಿಲ್ಲಾ ಮತ್ತು ಉಪ ಜಿಲ್ಲಾ ಆಡಳಿತದಲ್ಲಿ ಭಾಗವಹಿಸುವವರಿಗೆ ಪ್ರೋತ್ಸಾಹವನ್ನು ನೀಡುವುದು.
- ಎಲ್ಲಾ ಇಲಾಖೆಗಳಲ್ಲೂ ಸಾಮರ್ಥ್ಯವರ್ಧನೆಗೆ ಶೇಕಡಾವಾರು ಹಣ ನಿಗಧಿಪಡಿಸುವುದನ್ನು ಕಡ್ಡಾಯಗೊಳಿಸುವುದು.
- ಪದೋನ್ನತಿಗೆ ಮುಂಚೆ, ಸಿಬ್ಬಂದಿವರ್ಗದವರಿಗೆ ಕನಿಷ್ಟ 3 ವರ್ಷಗಳಿಗೊಮ್ಮೆ ಕಾರ್ಯ ನಿರ್ವಹಣಾ ಕೌಶಲ್ಯಗಳನ್ನು ನವೀಕರಿಸಲು ತರಬೇತಿಯನ್ನು ಕಡ್ಡಾಯಗೊಳಿಸುವುದು.
- ಪ್ರತಿ ಮೂರು ವರ್ಷಗಳಿಗೊಮ್ಮೆ ಚೈತನ್ಯದಾಯಕ ತರಬೇತಿಯನ್ನು ಕೊಡುವುದು. ಸಾಮರ್ಥ್ಯವರ್ಧನೆ ಕೇಂದ್ರಗಳು ಇಲಾಖಾವಾರು ಪಠ್ಯಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಚೈತನ್ಯದಾಯಕ ತರಬೇತಿಗಳಿಗಾಗಿ ವೇಳಾಪಟ್ಟಿಯನ್ನು ತಯಾರಿಸುವುದು.

#### ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಸಾಧಿಸುವುದು

- ಆವಿಷ್ಕಾರ ಮತ್ತು ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವ ಉಪಕ್ರಮಗಳು
- ಸಹಭಾಗಿತ್ವ ಮತ್ತು ಸಹಯೋಗದ ಆಡಳಿತ
- ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಅಳೆಯಬಹುದಾದ ಮತ್ತು ಕಾರ್ಯಸಾಧ್ಯತೆಯ ಕ್ರಿಯಾಶೀಲ ಚಾರ್ಟ್‌ಗಳು, ಸುಮೋಟೋ ಪ್ರದರ್ಶನಗಳು, ನಾಗರೀಕ ಸನ್ನದುಗಳನ್ನು ಉಪಯೋಗಿಸುವುದು
- ಆರ್‌ಟಿಐನ ಪೂರ್ಣ ಅನುಷ್ಠಾನ
- ಮೂರನೇ ವ್ಯಕ್ತಿಯಿಂದ (ನಾಗರೀಗ ಸಮಾಜ/ಎನ್‌ಜಿಓಗಳು) ನಾಗರೀಕ ಸನ್ನದನ್ನು ವಾರ್ಷಿಕವಾಗಿ ಮೇಲ್ವಿಚಾರಣೆ ಮಾಡುವುದು.
- ಹೆಚ್ಚಿನ ಸೇವೆಗಳಿಗಾಗಿ ಸಕಾಲದಡಿಯಲ್ಲಿ ಸಮಯಾಧಾರಿತ ಸೇವೆಗಳನ್ನು ಖಚಿತಪಡಿಸುವುದು.

#### ಸಂಪೂರ್ಣ ಗಣಕೀಕರಣ

- ಸುಲಭವಾಗಿ ಸೇವೆಗಳನ್ನು ನೀಡಲು ಎಲ್ಲಾ ಇಲಾಖೆಗಳಿಗೂ ಒಂದೇ ರೀತಿಯ ಡಾಟಾ ಬೇಸ್
- ಕಂಪ್ಯೂಟರ್ ಸಾಕ್ಷರತೆಗಾಗಿ ಗ್ರಾಮ ಪಂಚಾಯಿತಿಯಲ್ಲಿ ಡಿಜಿಟಲ್ ಗ್ರಂಥಾಲಯ/ಸೈಬರ್ ಕೆಫೆ
- ಎಲ್ಲಾ ಸರ್ಕಾರಿ ಇಲಾಖೆಗಳನ್ನು ಗಣಕೀಕರಣಗೊಳಿಸುವುದು.
- ವಿವಿಧ ಇಲಾಖೆಗಳಿಂದ ಸಂಗ್ರಹಿಸಲಾಗುವ ಡೇಟಾ (ಅಂಕಿಅಂಶ)ಗಳ ಪುಸ್ತಕಗಳನ್ನು ಸುರಕ್ಷಿತವಾಗಿ ಆರ್ಪಿಕರಣ ಮಾಡುವುದನ್ನು ಖಚಿತಪಡಿಸುವುದು.
- ಎಲ್ಲಾ ಎಮ್ ಸೇವೆಗಳನ್ನು ಸಕ್ರಿಯಗೊಳಿಸುವುದು.
- ಎಲ್ಲಾ ಸರ್ಕಾರಿ ಸೇವೆಗಳನ್ನು ಸಕಾಲದ ಮೂಲಕ ನೀಡುವುದು.
- ಕುಂದುಕೊರತೆಗಳನ್ನು ಪರಿಹಾರವನ್ನು ಮೌಲ್ಯಮಾಪನ/ಪರಿಶೀಲನೆ ಮಾಡಲು ಮೇಲ್ಮನವಿ ಪ್ರಾಧಿಕಾರವನ್ನು ರಚಿಸುವುದು.
- ಸಾರ್ವಜನಿಕ ಕುಂದು ಕೊರತೆಗಳಿಗಾಗಿ ಬೃಹತ್ ಕಾಲ್ ಸೆಂಟರ್ ಸ್ಥಾಪಿಸುವುದು.

#### ತಿಳುವಳಿಕೆ ಮೂಡಿಸುವುದು ಮತ್ತು ನಾಗರೀಕರ ಭಾಗವಹಿಸುವಿಕೆ

- ಎಲ್ಲಾ ಸರ್ಕಾರೀ ಯೋಜನೆಗಳು ಮತ್ತು ಅವುಗಳನ್ನು ಪಡೆದುಕೊಳ್ಳುವ ಮಾರ್ಗಗಳ ವ್ಯಾಪಕ ಪ್ರಚಾರ ಮತ್ತು ಪ್ರದರ್ಶನ.
- ಸರ್ಕಾರಿ ಸೇವೆಗಳ ಬಗ್ಗೆ ನಾಗರಿಕರಿಗೆ ತಿಳುವಳಿಕೆ ಮೂಡಿಸಲು ಸ್ಥಳೀಯ ಗುಂಪುಗಳು ಮತ್ತು ಎನ್‌ಜಿಓಗಳನ್ನು ಬಳಸಿಕೊಳ್ಳುವುದು.
- ಮಾಹಿತಿಗಳ ಗಣಕರೂಪದಲ್ಲಿ ದೊರೆಯುವಂತೆ ಮಾಡಲು ಗ್ರಾಮಪಂಚಾಯಿತಿ ಮಟ್ಟದಲ್ಲಿ ನಾಗರೀಕ ಸೇವಾ ಕಿಯೋಸ್ಕ್‌ಗಳನ್ನು ಅಭಿವೃದ್ಧಿಪಡಿಸುವುದು.
- ನಾಗರೀಕರು ಪ್ರಕ್ರಿಯೆಗಳು ಹೇಗೆ, ಯಾರಿಗೆ ಮತ್ತು ಏನು ಎಂಬುದನ್ನು ಗುರುತಿಸಲು ಸಹಾಯ ಮಾಡಲು ಹೆಲ್ಪ್ ಡೆಸ್ಕ್‌ಗಳ ರಚನೆ
- ಸಾರ್ವಜನಿಕರಿಂದ ಇಲಾಖೆಗಳ ಬಗ್ಗೆ ಪ್ರತಿಕ್ರಿಯೆಗಳು/ಟೀಕೆ ಟಿಪ್ಪಣಿಗಳನ್ನು ಸಾರ್ವಜನಿಕ ವಿಷಯಗಳನ್ನು ಹಂಚಿಕೊಳ್ಳುವುದು ದಾಖಲಿಸುವುದು ಮತ್ತು ಸಂಗ್ರಹಣೆ ಮಾಡುವುದು.
- ಇಲಾಖೆಯ ತೀರ್ಮಾನಗಳನ್ನು ತಾರ್ಕಿಕ /ಸಮರ್ಥನೀಯ/ ಆಯ್ಕೆಯನ್ನಾಗಿ ಮಾಡುವುದು.
- ನಾಗರೀಕ ಸಮಾಜ/ನಾಗರೀಕರು/ನಿರ್ಣಾಯಕ ವಿಷಯಗಳಲ್ಲಿ ಭಾಗವಹಿಸುವವರು/ತೀರ್ಮಾನಗಳನ್ನು ಮಾಡುವಾಗ ಶಾಸನ ಪೂರ್ವ/ನೀತಿ ಪೂರ್ವ ಸಮಾಲೋಚನೆ ಮಾಡುವ ಅಭ್ಯಾಸವನ್ನು ಪ್ರೋತ್ಸಾಹಿಸುವುದು.
- ಎಲ್ಲಾ ಪಂಚಾಯಿತಿಗಳು, ತಾಲೂಕು ಮತ್ತು ಜಿಲ್ಲೆಗಳಗಳಲ್ಲಿ ನಾಗರೀಕ ಸೌಹಾರ್ದ ಸಮಿತಿಯನ್ನು ಸ್ಥಾಪಿಸಿ ಶಾಂತಿ ಮತ್ತು ಸಹಬಾಳ್ವೆಯನ್ನು ಪ್ರೋತ್ಸಾಹಿಸುವುದು. ಸಂಪರ್ಕಗಳನ್ನು ಜೀವಂತವಾಗಿರಿಸಲು, ಮೇಲಿನ ಸಮಿತಿಯ ಸದಸ್ಯರು ತಮ್ಮ ಸ್ಥಳದ ಸ್ವಚ್ಛತಾ ಅಭಿಯಾನದಲ್ಲಿ ವಾರಕ್ಕೊಮ್ಮೆ ಭಾಗವಹಿಸುವುದು, ಸ್ಥಳೀಯ ನಾಗರೀಕರು ಸ್ವಯಂಪ್ರೇರಿತವಾಗಿ ಭಾಗವಹಿಸುವಂತೆ ಮಾಡುವುದು.

ಆರೋಗ್ಯ

# ಆರೋಗ್ಯಕರ ರಾಜ್ಯ ಆರೋಗ್ಯಕರ ಪ್ರಗತಿ

ಕಾಂಗ್ರೆಸ್ ತನ್ನ ಜನರಿಗೆ ಸಾರ್ವತ್ರಿಕ ಆರೋಗ್ಯ ರಕ್ಷಣೆಯನ್ನು ನ್ಯಾಯಯುತ, ಸುಲಭ ಲಭ್ಯತೆ, ಗುಣಮಟ್ಟದ ಮೂಲಕ ಮತ್ತು ಉತ್ತಮ ಆಡಳಿತವಿರುವ ಆರೋಗ್ಯ ವ್ಯವಸ್ಥೆಯನ್ನು ಆರೋಗ್ಯಪೂರ್ಣ ಕರ್ನಾಟಕಕ್ಕೆ ಕೊಡುವುದರಲ್ಲಿ ನಂಬಿಕೆ ಇಟ್ಟಿದೆ.

ನಮ್ಮ ಸರ್ಕಾರವು ಕರ್ನಾಟಕದಲ್ಲಿ ಆರೋಗ್ಯ ಮತ್ತು ಪೌಷ್ಟಿಕತೆ, ಪೋಲಿಯೋ ಮುಕ್ತ, ಶಿಶುಮರಣ ಪ್ರಮಾಣದಲ್ಲಿ ಇಳಿಕೆ ಮತ್ತು ರಕ್ತ ಹೀನತೆಯ ಪ್ರಕರಣಗಳನ್ನು ತಡೆಯುವಂತಹ ಕ್ಷೇತ್ರದಲ್ಲಿ ಮಹತ್ ಸಾಧನೆಯನ್ನು ಮಾಡಿದೆ. ಗರ್ಭಿಣಿ ತಾಯಂದಿರನ್ನು ತಲುಪಲು ಮತ್ತು ಪ್ರಸವ ಮರಣಗಳನ್ನು ತಗ್ಗಿಸಲು ಅನೇಕ ರಾಜ್ಯ ಮಟ್ಟದ ಉಪಕ್ರಮಗಳಾದ ಮಡಿಲು, ಪ್ರಸೂತಿ ಆರೈಕೆಗಳಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿದೆ. ನಮ್ಮ ನಾಯಕತ್ವದಲ್ಲಿ ರಾಜ್ಯ ಆರೋಗ್ಯ ನೀತಿ ಮತ್ತು ಉಪಶಮನಕಾರಿ ಆರೈಕೆಗಳ ನೀತಿಯನ್ನು ಅಂತರ್ಗತ ಮಾಡಿರುವುದರಲ್ಲಿ ಕರ್ನಾಟಕವು ದೇಶದ ಕೆಲವೇ ರಾಜ್ಯಗಳಲ್ಲಿ ಒಂದಾಗಿದೆ. ಕಾಂಗ್ರೆಸ್ ಸಾರ್ವತ್ರಿಕ ಅರೋಗ್ಯ ಕವಚವನ್ನು "ಆರೋಗ್ಯ ಕರ್ನಾಟಕ" ದಡಿಯಲ್ಲ ಘೋಷಣೆ ಮಾಡುವ ಪ್ರಯತ್ನ ಮಾಡಿ ಕರ್ನಾಟಕವನ್ನು ಮತ್ತೊಮ್ಮೆ ದೇಶದಲ್ಲಿ ಮೊದಲನೆ ರಾಜ್ಯವನ್ನಾಗಿ ಮಾಡಿ ಕರ್ನಾಟಕದ ಜನರಿಗಾಗಿ ಸಮರ್ಪಿಸಿದೆ. ಇದರೊಂದಿಗೆ ನಮ್ಮ ಪಕ್ಷವು ಕರ್ನಾಟಕದ ಜನರನ್ನು ದುರ್ಬಲತೆಯಿಂದ ಮೇಲೆತ್ತಿ ಅವರ ಸಮಗ್ರ ಆರೋಗ್ಯವನ್ನು ಖಾತರಿಪಡಿಸುವ ಮತ್ತು ಕರ್ನಾಟಕದ ಜನರ ಹಿತರಕ್ಷಣೆ ಮಾಡುವುದಕ್ಕೆ ಹೆಮ್ಮೆಯೆನಿಸುತ್ತಿದೆ.

ನಮ್ಮ ಸರ್ಕಾರವು ರಾಜ್ಯ ಪೌಷ್ಠಿಕತೆ ಅಭಿಯಾನವನ್ನು ಪ್ರಾರಂಭಿಸಿ ಪೌಷ್ಟಿಕತೆಯ ಸಮಸ್ಯೆಗಳನ್ನು ನಿವಾರಿಸಿದೆ. ನಾವು ಆರೋಗ್ಯ ಸೇವೆಗಳನ್ನು ನೀಡುವವರೊಂದಿಗಿನ ಸಹಯೋಗದೊಂದಿಗೆ ಒಟ್ಟಾಗಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್ಎಎಸ್ಟಿ) ಪ್ರಾರಂಭಿಸಿ ದ್ವಿತೀಯ ಮತ್ತು ತೃತೀಯ ಸೇವೆಗಳನ್ನು ನೀಡಲಿದ್ದೇವೆ. ಇದರಿಂದ ನಾಗರೀಕರು ಎದುರಿಸಬೇಕಾಗಿದ್ದ ಅತಿ ಹೆಚ್ಚು ಖರ್ಚುಗಳನ್ನು (ಒಒಪಿಇ) ನಿಭಾಯಿಸಬಹುದಾಗಿದೆ.

## ನಮ್ಮ ಪ್ರಮುಖ ಸಾಧನೆಗಳು

- ಸರ್ವರಿಗೂ ಆರೋಗ್ಯ ಕಲ್ಪಿಸುವ ಸಾರ್ವತ್ರಿಕ ಆರೋಗ್ಯ ಕಾರ್ಯಕ್ರಮವಾದ ಆರೋಗ್ಯ ಕರ್ನಾಟಕ ಯೋಜನೆ ಜಾರಿಗೊಳಿಸಿದ ಮೊದಲ ರಾಜ್ಯ ಕರ್ನಾಟಕ.
- ದೇಶದಲ್ಲಿ ಮೊದಲ ಬಾರಿಗೆ ಖಾಸಗೀ ವೈದ್ಯಕೀಯ ಎಸ್ಟಾಬ್ಲಿಷ್‌ಮೆಂಟ್ ವಿಧೇಯಕವನ್ನು ಮಂಡಿಸಿದ ರಾಜ್ಯವಾಗಿದೆ, ಉದಾ,. ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳು (ತಿದ್ದುಪಡಿ) ಮಸೂದೆ 2017.
- ನಮ್ಮ ಸರ್ಕಾರದ ಸುವರ್ಣ ಅರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಹಿರಿಯ ನಾಗರಿಕರಿಗೆ ಮತ್ತು ಬಿಪಿಎಲ್ ಕುಟುಂಬದವರಿಗೆ ಉಚಿತ ಮತ್ತು ಗುಣಮಟ್ಟದ ವೈದ್ಯಕೀಯ ರಕ್ಷಣೆಯನ್ನು ನೀಡುತ್ತದೆ.
- ಮುಖ್ಯ ಮಂತ್ರಿಗಳ ಹರೀಶ್ ಸಾಂತ್ವನ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು ಯಾವುದೇ ಅಪಘಾತದ ಫಲಾನುಭವಿಗಳು ರೂ.25,00/ ವರೆಗೆ ದೇಶದಾದ್ಯಂತ ಉಚಿತ ಸೇವೆಗಳನ್ನು ಪಡೆದುಕೊಳ್ಳಬಹುದು. ಇವುಗಳಲ್ಲಿ ಸರಣಿಯಲ್ಲಿರುವ ಆಸ್ಪತ್ರೆಗಳೂ ಸೇರುತ್ತವೆ.
- ಸುಮಾರು 711 ಆರೋಗ್ಯ ಕವಚ ಆಂಬ್ಯುಲೆನ್ಸ್ ಗಳು ಸುಮರು 25 ಕಿ.ಮೀ.ವ್ಯಾಪ್ತಿಯನ್ನು ಹೊಂದಿವೆ ಮತ್ತು 827 ರಾಜ್ಯ ಆಂಬ್ಯುಲೆನ್ಸ್ ಗಳನ್ನು ಆರೋಗ್ಯ ಕವಚದ ಅಡಿಯಲ್ಲಿ ತರಲಾಗಿದೆ. ತುರ್ತು ಸೇವೆಯ 108 ಸೇವೆಗಳನ್ನು 10-12 ಕಿ.ಮೀ.ವ್ಯಾಪ್ತಿಯಲ್ಲಿ ನೀಡಲಾಗುತ್ತದೆ.
- ಸರ್ಕಾರವು ಸುಮಾರು 10 ಲಕ್ಷ ಗರ್ಭಿಣಿ ಮಹಿಳೆಯರಿಗೆ ಮಾತೃಪೂರ್ಣ ಯೋಜನೆಯೊಂದಿಗೆ ಆಹಾರ ಒದಗಿಸುತ್ತಿದೆ ಮತ್ತು ರಾಜ್ಯದಾದ್ಯಂತ ಮಹಿಳೆಯರಿಗೆ ಪೌಷ್ಟಿಕಾಂಶಯುಕ್ತ ಊಟದೊಂದಿಗೆ ಹಾಲನ್ನು ಒದಗಿಸುತ್ತಿದೆ.
- ರಾಜ್ಯ ಸರ್ಕಾರದಿಂದ ನಡೆಸಲಾಗುವ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ಕ್ಷೀರ ಭಾಗ್ಯ ಯೋಜನೆಯಲ್ಲಿ ರಾಜ್ಯದ 1 ಕೋಟಿ ವಿದ್ಯಾರ್ಥಿಗಳಿಗೆ ವಾರದಲ್ಲಿ 5 ದಿನ ಹಾಲು ಮತ್ತು ಕರ್ನಾಟಕದ ಅಂಗನವಾಡಿ ಕೇಂದ್ರಗಳ 60 ಲಕ್ಷ ಮಕ್ಕಳಿಗೆ ಮೊಟ್ಟೆಗಳನ್ನು ಕೊಡಲಾಗುತ್ತಿದೆ .
- ಆರೋಗ್ಯ ಭಾಗ್ಯ ಯೋಜನೆಯು ಸಾಮಾನ್ಯ ಜನರ ಆಶೋತ್ತರಗಳಿಗೆ ಒಂದು ವರವಾಗಿದೆ. ಇಂತಹ ಯೋಜನೆಗಳು ಸುಮಾರು 1.3 ಕೋಟಿ ಕುಟುಂಬಗಳನ್ನು ಒಳಗೊಳ್ಳಲಿದ್ದು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ಕೆಲವು ಆಯ್ದ ಖಾಸಗೀ ಆಸ್ಪತ್ರೆಗಳಲ್ಲಿ ನಗದು ರಹಿತ ಚಿಕಿತ್ಸೆಯನ್ನು ಒದಗಿಸುತ್ತದೆ.

ಕೈಗಾರಿಕಾಭಿವೃದ್ಧಿ

# ಪ್ರಗತಿಪರ ರಾಜ್ಯಕ್ಕಾಗಿ ಉತ್ಪಾದಕ ಉದ್ಯಮ

ನಾವು ಒಳಗೊಳ್ಳುವ, ಸುಸ್ಥಿರ ಮತ್ತು ಸಮತೋಲಿತ ಕೈಗಾರಿಕಾ ಅಭಿವೃದ್ಧಿಯಿಂದ ಬಹಳಷ್ಟು ಸಂಖ್ಯೆಯ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದರ ಮೂಲಕ ಸಮೃದ್ಧ ಕರ್ನಾಟಕವನ್ನು ಕಟ್ಟುತ್ತೇವೆ.

ನಮ್ಮ ಸರ್ಕಾರವು ಕರ್ನಾಟಕವನ್ನು ಭಾರತದ ಐಟಿ ಕೇಂದ್ರವನ್ನಾಗಿ ಎತ್ತರಕ್ಕೇರಿಸಿದೆ ಮತ್ತು ವಿಶ್ವದ ನಾಲ್ಕನೇ ತಾಂತ್ರಜ್ಞಾನ ಕೇಂದ್ರವನ್ನಾಗಿಸಿದೆ. ನಮ್ಮ ಸರ್ಕಾರವು ಕರ್ನಾಟಕ ರಾಜ್ಯ ಕೈಗಾರಿಕಾ ನೀತಿ 2014–19 ನ್ನು ಪ್ರಾರಂಭಿಸಿದ್ದು ಕನಿಷ್ಠ ಶೇಕಡಾ 20–30ರಷ್ಟು ಕನಿಷ್ಠ ಹಂಚಬಲ್ಲ ಭೂಮಿಯನ್ನು ಕೈಗಾರಿಕಾ ಅಭಿವೃದ್ಧಿಗೆ ಎಸ್‌ಎಮ್‌ಇಗಳಿಗೆ ನೀಡಲಿದೆ. 2014–17 ರ ಅವಧಿಯಲ್ಲಿ, 1,823 ಯೋಜನೆಗಳಿಗೆ ರಾಜ್ಯದ ಮಟ್ಟದ ಏಕ ಗವಾಕ್ಷಿ ನೀಡಿಕೆ ಸಮಿತಿ/ರಾಜ್ಯ ಉನ್ನತ ಮಟ್ಟದ ನೀಡಿಕೆ ಸಮಿತಿಯಿಂದ ಅನುಮೋದನೆ ನೀಡಿದೆ ಇದರ ಹೂಡಿಕೆ ರೂ. 3.34 ಲಕ್ಷ ಕೋಟಿಗಳಾಗಿವೆ, ಇದರಿಂದ 8.98 ಲಕ್ಷ ಜನರಿಗೆ ಉದ್ಯೋಗ ಸೃಷ್ಟಿಯಾಗಲಿದೆ. ನಮ್ಮಿಂದ 2014–17 ರಿಂದ ಪ್ರಾರಂಭವಾದ ಉಪಕ್ರಮಗಳು ಮತ್ತು ಯೋಜನೆಗಳಿಂದಾಗಿ ಬೃಹತ್ ಕೈಗಾರಿಕಾ ವಲಯದಲ್ಲಿ 1.89 ಲಕ್ಷ ಉದ್ಯೋಗಗಳು ಸೃಷ್ಟಿಯಾಗಿವೆ ಮತ್ತು 12.30 ಲಕ್ಷ ಉದ್ಯೋಗಗಳು ಎಮ್‌ಎಸ್‌ಎಮ್‌ಇ ವಲಯದಲ್ಲಿ ಸೃಷ್ಟಿಯಾಗಿವೆ. ಅಂದರೆ, ಒಟ್ಟಾರೆಯಾಗಿ 14.19 ಲಕ್ಷ ಉದ್ಯೋಗಗಳು ನಮ್ಮ ಸರ್ಕಾರದ ನಾಯಕತ್ವದಡಿಯಲ್ಲಿ ಸೃಷ್ಟಿಯಾಗಿವೆ. ಕರ್ನಾಟಕದಲ್ಲಿ ನಮ್ಮ ಸರ್ಕಾರವು ಕಾರ್ಮಿಕ ಬಾಹುಳ್ಯದ ಕ್ಷೇತ್ರಗಳಾದ ಉತ್ಪಾದನೆ, ಮೊಬೈಲ್ ಫೋನ್, ಟ್ಯಾಬ್ಲೆಟ್, ವಿದ್ಯುನ್ಮಾನ ಬಿಡಿಭಾಗಗಳು, ಮತ್ತು ಜೋಡಣೆ ಇತ್ಯಾದಿಗಳು,. ಅಲ್ಲದೆ ಉತ್ಪಾದನಾ ಕ್ಷೇತ್ರದಲ್ಲೂ ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗಿವೆ.

### ಸರ್ಕಾರವು ಕೈಗೆತ್ತಿಕೊಳ್ಳಲಿರುವ ಪ್ರಮುಖ ಕ್ಷೇತ್ರಗಳ ಉಪಕ್ರಮಗಳು:

- ಕರ್ನಾಟಕ ಸೌಕರ್ಯ ಕಾಯಿದೆ, 2002 ರಡಿಯಲ್ಲಿ ಏಕ ಗವಾಕ್ಷಿ ಅನುಮೋದನೆ ನೀಡಿಕೆಯ ಮೂಲಕ ಆನ್ ಲೈನ್ ಪೋರ್ಟಲ್ (www.ebizKarnataka.gov.in), ಇದರಲ್ಲಿ 15 ಸಂಬಂಧಪಟ್ಟ ಇಲಾಖೆಗಳ ನೋಂದಣಿ ಮತ್ತು ಅನುಮೋದನೆಗಳನ್ನು ನೀಡಲಾಗಿದೆ.
- ವಿವರಣಾತ್ಮಕ ಮಾಹಿತಿ ವಿಜಾರ್ಡ್ ಕೈಗಾರಿಕಾ ಉದ್ಯಮವನ್ನು ಸ್ಥಾಪಿಸಲು ಹೂಡಿಕೆದಾರರಿಗೆ ಮೂಲಸೌಲಭ್ಯಗಳು, ನೋಂದಣಿ, ಅನುಮೋದನೆ ಇತ್ಯಾದಿಗಳ,, ಏಕ ಗವಾಕ್ಷಿ ಪೋರ್ಟಲ್ ಮೇಲಿನ ಪೂರ್ಣ ಮಾಹಿತಿಗಳ ಮಾರ್ಗಸೂಚಿಯನ್ನು ಒದಗಿಸುತ್ತದೆ.
- 'ಹೂಡಿಕೆ ಕರ್ನಾಟಕ ಫೋರಂ' ನ್ನು ಆರ್ಥಿಕ ಅಭಿವೃದ್ಧಿ ಬೋರ್ಡ್ ಸಿಂಗಪೂರ್ ಇವರ ಸಹಯೋಗದೊಂದಿಗೆ ಸ್ಥಾಪಿಸಿ ಬ್ರಾಂಡ್ ಕರ್ನಾಟಕ ವನ್ನು ಪ್ರೋತ್ಸಾಹಿಸುವುದು ಜಾಗತಿಕವಾಗಿ ರಾಜ್ಯಕ್ಕೆ ಹೂಡಿಕೆಯನ್ನು ಆಹ್ವಾನಿಸುವುದು.

### ಪ್ರಮುಖ ವಲಯಗಳು :

- ನಾವು ಬಂಡವಾಳ ಹೂಡಿಕೆ ಮತ್ತು ಕಾರ್ಯನಿರ್ವಾಹಕ ಬಂಡವಾಳಗಳೆರಡಕ್ಕೂ ಸಾಕಷ್ಟು ಹಣಕಾಸನ್ನು ಒದಗಿಸುತ್ತೇವೆ. ಅದೇ ರೀತಿ ಬ್ಯಾಂಕಿನಿಂದ/ಎನ್‌ಬಿಎಫ್‌ಸಿಗಳಲ್ಲಿ ಇತ್ತೀಚೆಗೆ ಸಾಲ ಲಭ್ಯತೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ, ಇನ್ನೂಕೂಡ ಗ್ರಾಮಾಂತರ ಮತ್ತು ಅರೆ–ಪಟ್ಟಣ ಪ್ರದೇಶಗಳಲ್ಲಿ ಸಾಲಗಳನ್ನು ಪಡೆದುಕೊಳ್ಳುವ ಪ್ರಕ್ರಿಯೆ ತೊಡಗಿನದ್ದಾಗಿದೆ. ಪ್ರಮುಖ ವಿಷಯಗಳಲ್ಲಿ ಎಮ್‌ಎಸ್‌ಎಮ್‌ಇಗಳನ್ನು ಕೊಡಬಹುದಾದ ಆಧಾರಗಳ ಕೊರತೆಯಿದ್ದು ಕೆಂಪುಪಟ್ಟಿಯಿಂದಾಗಿ ಸಾಲಕ್ಕಾಗಿ ಭದ್ರತೆಯಲ್ಲಿರುವ ವೆಚ್ಚಗಳು ಸೇರ್ಪಡೆಯಾಗಿವೆ.
- **ಮಾರುಕಟ್ಟೆ** : ಅನೇಕ ಎಮ್‌ಎಸ್‌ಎಮ್‌ಇಗಳು ಸಣ್ಣ ಪ್ರಮಾಣದಲ್ಲಿ ಸ್ಥಳೀಯವಾಗಿ ಕಾರ್ಯನಿರ್ವಹಿಸುತ್ತಿವೆ. ಅವುಗಳು ದೂರದ ಮಾರುಕಟ್ಟೆಯನ್ನು ಪ್ರವೇಶಿಸುವುದು ಕಷ್ಟವಾಗಿದೆ. ನಾವು ಅವರ ಉತ್ಪನ್ನಗಳನ್ನು ಒಗ್ಗೂಡಿಸಿ ಅದನ್ನು ಬ್ರಾಂಡ್ ಮಾಡಿ ದೊಡ್ಡದಾಗಿ ದೂರದ ಮಾರುಕಟ್ಟೆಯಲ್ಲಿ ಉತ್ತಮ ಮೌಲ್ಯಗಳಿಗಾಗಿ ಮಾರಾಟ ಮಾಡುತ್ತೇವೆ.
- ವಿಮೆ : ಎಮ್‌ಎಸ್‌ಎಮ್ ಇಗಳು ಹೆಚ್ಚಿನದಾಗಿ ಒಬ್ಬ ವ್ಯಕ್ತಿಯನ್ನು ಅವಲಂಬಿಸಿರುತ್ತವೆ. ಪ್ರಮುಖ ವ್ಯಕ್ತಿಗಳಿಗೆ ಅಪಘಾತಗಳಾದಾಗ ಅಥವಾ ಆರೋಗ್ಯ ಸಮಸ್ಯೆಗಳುಂಟಾದಾಗ ವ್ಯವಹಾರ ಮತ್ತು ಆದಾಯಗಳಿಗೆ ಅಡ್ಡಿಯಾಗುತ್ತದೆ. ನಾವು ಇದನ್ನು ಸೂಕ್ತವಾದ ವಿಮಾ ಉತ್ಪನ್ನಗಳ ಮೂಲಕ ತಗ್ಗಿಸುತ್ತೇವೆ. ಅವು ಕೆಲವು ವೇಳೆ

ವ್ಯವಹಾರಗಳಿಂದ ಹೊರಹೋಗುತ್ತವೆ ಏಕೆಂದರೆ ಪ್ರಮುಖ ವ್ಯಕ್ತಿಯ ಅಪಾಯವಾಗಿ ಕುಟುಂಬವು ಜೀವನೋಪಾಯಗಳನ್ನು ಕಳೆದುಕೊಳ್ಳುತ್ತವೆ.

- ನಾವು ಜಾಗತಿಕ ಒಇಎಮ್‌ಎಸ್‌ಗಳನ್ನು ಗಮನಾರ್ಹ ಅಭಿವೃದ್ಧಿಯ ಶ್ರೇಣಿ-1 ಮತ್ತು ಶ್ರೇಣಿ-2ರ ಪೂರಕಗಳ ಗುಂಪಿಗೆ ಸೇರ್ಪಡೆಯನ್ನು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದ್ದೇವೆ.
- ನಮ್ಮ ಸರ್ಕಾರವು ಕಾಗದ ರಹಿತ ಅನುಮೋದನೆಗಳ ಉಪಕ್ರಮದತ್ತ ಮುಂದುವರಿಯುತ್ತೇವೆ ಮತ್ತು ಪುನರಾವರ್ತಿತ ಸಲ್ಲಿಕೆಯ ಆನ್ ಲೈನ್ ಪ್ರಕ್ರಿಯೆಗಳಿಲ್ಲದೆ ಮತ್ತು ಇಲಾಖೆಗಳ ಉಲ್ಲೇಖಗಳು, ಮತ್ತು ನಿಗಧಿತ ಸಮಯದೊಳಗೆ ಸಾಲ ಹಿಂತಿರುಗಿಸದಿದ್ದಲ್ಲಿ ಪಾವತಿಸಬೇಕಾದ ದಂಡಗಳು ಮತ್ತು ಸರ್ಕಾರಿ ಇಲಾಕೆಗಳ ಕನಿಷ್ಠ ಮಧ್ಯಪ್ರವೇಶಾತಿಯನ್ನು ನಿರ್ವಹಣೆ ಮಾಡುತ್ತದೆ.
- ನಾವು ಜವಳಿ ಕ್ಷೇತ್ರದಲ್ಲಿ ಆರ್ ಮತ್ತು ಡಿ ಯನ್ನು ಹೆಚ್ಚಿಸಿ ಹೊಸ ತಂತ್ರವನ್ನು ರಚಿಸಿ ಕ್ಷೇತ್ರಕ್ಕೆ ಮೌಲ್ಯವನ್ನು ಸೇರ್ಪಡೆ ಮಾಡುತ್ತೇವೆ.
- ನಮ್ಮ ಸರ್ಕಾರವು ಎಮ್‌ಎಸ್‌ಎಮ್‌ಇ ಅಭಿವೃದ್ಧಿ ಕೇಂದ್ರಗಳನ್ನು ರಾಜ್ಯಾದ್ಯಂತ ಸ್ಥಾಪಿಸಿ ಎಮ್‌ಎಸ್‌ಎಮ್‌ಇಯ ಕೇಂದ್ರೀಕರಣವಿರುತ್ತದೆ. ತಾತ್ವಿಕವಾಗಿ ಇದು ಜಂಟಿ ವಲಯವಾಗಿದ್ದು ಮತ್ತು ಸರ್ಕಾರವು ಸಹಕಾರಿಯಾಗಿರುತ್ತದೆ. ಆದರೆ ಈ ಅಭಿವೃದ್ಧಿ ಕೇಂದ್ರಗಳ ನೈಜ ಕಾರ್ಯಗಳು ಎಮ್‌ಎಸ್‌ಎಮ್‌ಇಗಳ ಸದಸ್ಯರು, ಸರ್ಕಾರಿ ಪ್ರತಿನಿಧಿಗಳು, ಸ್ಥಳೀಯ ಬ್ಯಾಂಕ್/ಎನ್‌ಬಿಎಫ್‌ಸಿಗಳು, ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾರುಕಟ್ಟೆ ವಹಿವಾಟುದಾರರು, ವೃತ್ತಿಪರ ಸಿಇಒಗಳಿಂದ ನಿರ್ವಹಿಸಲ್ಪಡುವ ಕಾರ್ಯನಿರ್ವಾಹಕ ಸಮಿತಿಯಲ್ಲಿರುತ್ತಾರೆ.
- ಎಮ್‌ಎಸ್‌ಎಮ್‌ಇ ಅಭಿವೃದ್ಧಿ ಕೇಂದ್ರಗಳು ಉತ್ಪನ್ನಗಳ ಬೃಹತ್ ಮಾರುಕಟ್ಟೆಗಳಲ್ಲಿ(ಸೂಪರ್ ಮಾರ್ಕೆಟ್, ಸಂಸ್ಕರಣೆ, ಗ್ರಾಹಕರು ಇತ್ಯಾದಿಗಳು) ಎಮ್‌ಎಸ್‌ಎಮ್‌ಇಗಳು ನಡುವಿನ ಸಂಪರ್ಕವಾಗಿ ಕೆಲಸ ಮಾಡುತ್ತವೆ.
- ಉತ್ಪನ್ನಗಳನ್ನು ಬ್ರಾಂಡ್ ಮಾಡುವುದು, ಕಾರ್ಮಿಕರ ತರಬೇತಿಗಾಗಿ ಕೌಶಲ್ಯಗಳ ಸಂಸ್ಕರಣೆ. ಮಾರುಕಟ್ಟೆ ಬೇಡಿಕೆಯ ಆಧಾರದ ಮೇಲೆ ಬದಲಾಗುತ್ತಿರುವ ಉತ್ಪನ್ನಗಳು ಇತ್ಯಾದಿಗಳನ್ನು ಎಮ್‌ಎಸ್‌ಎಮ್‌ಇ ಕೇಂದ್ರಗಳ ಮೂಲಕ ಸೌಲಭ್ಯ ಒದಗಿಸಿಕೊಡುವುದು.
- 2014-19 ಕರ್ನಾಟಕ ಕೈಗಾರಿಕಾ ನೀತಿಯತ್ತ ತೆಗೆದುಕೊಂಡು ಹೋಗುವುದು
- ನಾವು ಕಡಿಮೆ ವೆಚ್ಚದ ಉತ್ಪಾದನೆಯನ್ನು ಪ್ರೋತ್ಸಾಹಿಸುವುದು ಮತ್ತು ಉದ್ಯೋಗ ಸೃಷ್ಟಿಸುವುದು.
- ಉದ್ಯೋಗ ಸೃಷ್ಟಿಸುವ ಕೈಗಾರಿಕೆಗಳಿಗೆ ಪ್ರೋತ್ಸಾಹಿಸುವುದು ಮತ್ತು ಬಹುಮಾನ ಕೊಡುವುದು
- ನಾವು ಎಲ್ಲಾ ವಿಭಾಗಗಳಲ್ಲಿ ಹೆಚ್ಚು ಕೌಶಲ್ಯಯುತ ತರಬೇತಿ ಕೇಂದ್ರಗಳನ್ನು ಸ್ಥಾಪಿಸುತ್ತೇವೆ- ಇದು ವಿದ್ಯಾರ್ಥಿಗಳನ್ನು ಕೃತಕ ಬೌದ್ಧಿಕತೆ, ರೋಬಾಟಿಕ್ಸ್, ಡೇಟಾ ಅನಾಲಿಟಿಕ್ಸ್, ಮತ್ತು ಕೈಗಾರಿಕೆಗಳಿಗಾಗಿಇತ್ತೀಚಿನ ಕೌಶಲ್ಯ ಅಗತ್ಯಗಳನ್ನು ಒದಗಿಸುವುದು.
- ಐಟಿಐಗಳನ್ನು ಉನ್ನತ ದರ್ಜೆಗೇರಿಸಲಾಗುವುದು ಮತ್ತು ಕೈಗಾರಿಕೆಗಳ ಅಗತ್ಯಕ್ಕತೆ ತಕ್ಕಂತೆ ಮೇಲ್ದರ್ಜೆಗೇರಿಸುವುದು.
- ಐಟಿಐಗಳನ್ನು ಕೈಗಾರಿಕೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವುದು ಮತ್ತು ಕ್ಷೇತ್ರವಾರು ಕೌಶಲ್ಯ ತರಬೇತಿಯನ್ನು ಹೊಂದುವುದು
- ಪ್ರತಿ ಜಿಲ್ಲೆಗಳಲ್ಲು ಕೌಶಲ್ಯ ಕೇಂದ್ರಗಳನ್ನು ಹೊಂದುವುದು, ಸ್ಥಳೀಯ ಕೈಗಾರಿಕೆಗಳೊಂದಿಗೆ ಜೋಡಣೆಗೊಳ್ಳುವುದು- ಸ್ಥಳೀಯ ಕೈಗಾರಿಕೆ ಮತ್ತು ಬೇಡಿಕೆಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಕೌಶಲ್ಯದ ಅಗತ್ಯಗಳಿಗೆ ತರಬೇತಿ ನೀಡುವುದು.

### ಐಡಿ ಕೈಗಾರಿಕೆಗಳು

- ಬೆಂಗಳೂರಿನಲ್ಲಿ ಪೇಟೆಂಟ್ ಕಛೇರಿಯನ್ನು ಸ್ಥಾಪಿಸುವುದು
- ಅಂತರಾಷ್ಟ್ರೀಯ ಪೇಟೆಂಟ್ ಇರುವ ಕಂಪನಿಗಳಿಗೆ ಪ್ರೋತ್ಸಾಹ- " ಸ್ಟಾರ್ಟಪ್ ಸಬ್ಸಿಡಿ " ಇರಲಿದ್ದು ಇದರಿಂದ ಕಂಪನಿಯು ತಕ್ಷಣವೇ ಉತ್ಪಾದನೆಯನ್ನು ಪ್ರಾರಂಭಿಸಬಹುದು ಅದು ಸುಮಾರು ರೂ.25 ಲಕ್ಷ ಅನುದಾನಗಳೊಂದಿಗೆ ರೂ. 1 ಕೋಟಿಯನ್ನು ಒಳಗೊಂಡಿರುತ್ತದೆ ಮತ್ತು @ 6% ರಂತೆ ಸುಮಾರು ರೂ. 75 ಲಕ್ಷಗಳ ಸಾಫ್ಟ್ ಸಾಲವಿರುತ್ತದೆ.
- ನಾವು ಇಎಸ್‌ಡಿಎಮ್ ಪಾರ್ಕ್‌ನ್ನು ರಚಿಸುತ್ತೇವೆ; - ಕರ್ನಾಟಕವು ಉತ್ಪಾದನಾ ಮೂಲವನ್ನು ಹೊಂದಿದೆ. ಒಂದು ಉತ್ಪಾದನಾ ಕೇಂದ್ರವನ್ನು ಇಎಸ್‌ಡಿಎಮ್ ಕಂಪನಿಗಳಿಗಾಗಿ ರಚಿಸಲಾಗುವುದು.. ಭೂಮಿಯು ಎಕರೆಗೆ ರೂ.30 ಲಭ್ಯವಿದೆ.
- ಲೀಸ್ ಪ್ರತಿಯಾಗಿ ಪೂರ್ಣ ಮಾರಾಟ : ಕರ್ನಾಟಕ ಸರ್ಕಾರವು ಕೈಗಾರಿಕೆಗಳಿಗೆ 99 ವರ್ಷಗಳವರೆಗೆ ಭೂಮಿಯನ್ನು ಗುತ್ತಿಗೆಗೆ ಕೊಡಬಹುದಾಗಿದೆ. 10 ಎಕರೆಗಳವರೆಗೆ ಭೂಮಿಗೆ ವಿನಾಯಿತಿ ದೊರೆಯಲಿದ್ದು ಅವರಿಗೆ ಮಾರಾಟ ಒಪ್ಪಂದ ಮಾಡಿಕೊಡಲಾಗುತ್ತದೆ ( ಅಥವಾ 3 ವರ್ಷಗಳಲ್ಲಿ ಉತ್ಪಾದನೆಯನ್ನು ಪ್ರಾರಂಭಿಸುವ ಕಂಪನಿಗಳು).
- ಸದ್ಯದಲ್ಲಿ ಬಿಪಿಒಗಳು ಕಾಲ್ ಸೆಂಟರ್‌ಗಳಲ್ಲಿ ಮಹಿಳೆಯರಿಗೆ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ. ಅನೇಕ ವ್ಯವಹಾರಗಳಿದ್ದು ಅವುಗಳೆಂದರೆ ವಿವಿಧ ಪಾಳಿಗಳಲ್ಲಿ ಕೆಲಸ ಮಾಡುವ ಮಹಿಳಾ ಉದ್ಯೋಗಿಗಳನ್ನು ಹೊಂದಿರುವ ಐಟಿ/ ವಿದ್ಯುನ್ಮಾನ ಉತ್ಪಾದನಾ ಕೈಗಾರಿಕೆಗಳು ಮತ್ತು ಅದೇ ಕ್ಷೇತ್ರದಲ್ಲಿರುವ ಬಿಪಿಒ ಮತ್ತು

ಕಾಲ್ ಸೆಂಟರ್‌ಗಳು ಮತ್ತು ಇತರೆ ಉತ್ಪಾದನಾ ಕೈಗಾರಿಕೆಗಳು ಇವೆ.

- ನಾವು ಸೌರ ವಿದ್ಯುತ್ ಬಳಕೆಗೆ/ ಸೌರ ವಿದ್ಯುತ್ ಕೊಳ್ಳಲು ಪ್ರೋತ್ಸಾಹ ನೀಡುತ್ತೇವೆ.
- ನಾವು ಹಾರ್ಡ್‌ವೇರ್ ಪಾರ್ಕ್‌ಗಳ ರಚನೆ– ಸಿಡ್ಲಘಟ್ಟ– ಚಿಕ್ಕಬಳ್ಳಾಪುರ
- ನಾವು ದೇವನಹಳ್ಳಿಯಲ್ಲಿ ಐಟಿ ಪಾರ್ಕ್ ರಚನೆ ಮಾಡುತ್ತೇವೆ.
- ನಾವು ದೇವನಹಳ್ಳಿಯನ್ನು ವಿಮಾನ ನಿಲ್ದಾಣದ ಕೇಂದ್ರವನ್ನಾಗಿಸಲು ಹೆಚ್ಚಿನ ಪ್ರೋತ್ಸಾಹ ನೀಡುತ್ತೇವೆ ಮತ್ತು ಅದಕ್ಕೆ ವೇಗವನ್ನು ಕೊಡುತ್ತೇವೆ.
- ಡಿಜಿಟಲ್ ಪ್ರತಿಭೆಯನ್ನು ಹೆಚ್ಚಿಸಲು ಕಾರ್ಯಕ್ರಮಗಳನ್ನು ಏರ್ಪಡಿಸುತ್ತೇವೆ– ವರ್ಗಾವಣೆ ಮಾಡಲು, ಕೃಷಿ, ಆರೋಗ್ಯ ಮತ್ತು ಶಿಕ್ಷಣ, ಇತರೆ ಬೇರೆ ವಲಯಗಳಲ್ಲಿ ಹೂಡಿಕೆ
- ಜೀವ ವಿಜ್ಞಾನಕ್ಕೆ ಪರಿಸರ ವ್ಯವಸ್ಥೆಯನ್ನು ರಚಿಸುತ್ತೇವೆ.
- ಬೆಂಗಳೂರು ಉದ್ಯಶೀಲತಾ ರಾಜಧಾನಿಯಾಗಿ ಒಂದು ಪ್ರದರ್ಶಕ ಸ್ಥಳವಾಗಲಿದೆ.
- ನಾವು ಕೈಗಾರಿಕೆಗಳಲ್ಲಿ ವಿಶ್ವವಿದ್ಯಾಲಯಗಳು ಭಾಗವಹಿಸುವುದನ್ನು ಪ್ರೋತ್ಸಾಹಿಸಲು ಕಾರ್ಯಕ್ರಮಗಳನ್ನು ಪ್ರಾರಂಭಿಸುತ್ತೇವೆ.
- ನಾವು ವಿದ್ಯುತ್ ಚಾಲಿತ ವಾಹನಗಳಿಗಾಗಿ ಪ್ರೋತ್ಸಾಹಿಸುವ ಕೇಂದ್ರಗಳನ್ನು ಮತ್ತು ಸ್ಟಾರ್ಟ್ ಅಪ್‌ಗಳನ್ನು ಪ್ರೋತ್ಸಾಹಿಸುತ್ತೇವೆ.
- ನಾವು ಎಸ್‌ಎಪಿ ಲ್ಯಾಬ್ ಮತ್ತು ಸಂಶೋಧನೆಗಳು ಮತ್ತು ಅಭಿವೃದ್ಧಿ ಕೇಂದ್ರಗಳ ಸ್ಟಾರ್ಟ್ ಅಪ್ ಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುತ್ತೇವೆ.
- ನಾವು ಹುಬ್ಬಳ್ಳಿಯಲ್ಲಿ ಸೆಮಿ ಕಂಡಕ್ಟರ್ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸುತ್ತೇವೆ.
- ನಾವು ನಿಯಂತ್ರಣ ಮುಕ್ತ ತಾಂತ್ರಿಕತೆಯನ್ನು ರಚನೆ ಮಾಡುವ ವಲಯನ್ನು ಶ್ರೇಣಿ–2 ಮತ್ತು ಶ್ರೇಣಿ–3 ನಗರಗಳ ವಲಯಗಳನ್ನು ರಚಿಸುತ್ತೇವೆ.

ಮಾಹಿತಿ ತಂತ್ರಜ್ಞಾನ

# ಭವಿಷ್ಯದ ತಂತ್ರಜ್ಞಾನ. ಪ್ರಗತಿಗಾಗಿ ತಂತ್ರಜ್ಞಾನ

**ನಾವು ಕರ್ನಾಟಕವನ್ನು ಒಂದು ತಂತ್ರಜ್ಞಾನದ ಸುಸ್ಥಿರ ಪ್ರಗತಿಪರ ಸಮಾಜವನ್ನಾಗಿ ಅಭಿವೃದ್ಧಿಪಡಿಸುತ್ತೇವೆ ಮತ್ತು ಅದನ್ನು ರಾಜ್ಯ ಆರ್ಥಿಕತೆಯ ಎಲ್ಲಾ ಕ್ಷೇತ್ರಗಳ ಜಾಗತಿಕ ಆವಿಷ್ಕಾರದ ಕೇಂದ್ರವನ್ನಾಗಿ ಮಾಡುತ್ತೇವೆ, ಮತ್ತು ವಿಶ್ವದ ಆವಿಷ್ಕಾರಗಳ ರಾಜಧಾನಿಯನ್ನಾಗಿ ಮಾಡುತ್ತೇವೆ.**

ರಾಜ್ಯವನ್ನು ದೇಶದ ಐಟಿ ಕೇಂದ್ರಸ್ಥಾನವನ್ನಾಗಿ ಮಾಡಲು ವಿವಿಧ ಯೋಜನೆಗಳು ಪ್ರಾರಂಭವಾಗಿದ್ದು ಅವುಗಳನ್ನು ಕರ್ನಾಟಕ ಸರ್ಕಾರವು ಪ್ರಾರಂಭಿಸಿದೆ ಇದು ಭಾರತರ ಕಂಪ್ಯೂಟರ್ ಸಾಫ್ಟ್‌ವೇರ್/ಪರಿಣಿತಿಗಳಲ್ಲಿ ಶೇಕಡಾ 35 ರಷ್ಟು ಕೊಡುಗೆಯನ್ನು ನೀಡುತ್ತದೆ. ನಾವು ರಾಜ್ಯದಲ್ಲಿ ಬಹಳ ಬಲವಾದ ಸ್ಟಾರ್ಟ್ ಅಪ್ ಪರಿಸರ ವ್ಯವಸ್ಥೆಯನ್ನು ನಿರ್ಮಿಸಿದ್ದೇವೆ ಅಲ್ಲದೆ ಬೆಂಗಳೂರು ಜಾಗತಿಕವಾಗಿ ಉತ್ತಮ ನಗರವೆಂದು ಗುರುತಿಸಲ್ಪಟ್ಟಿದೆ. ಭಾರತವು ಸತತವಾಗಿ ಜಾಗತಿಕ ಆವಿಷ್ಕಾರಗಳ ಕೇಂದ್ರಗಳನ್ನು ಸ್ಥಾಪಿಸಲು ಗಮ್ಯಸ್ಥಳವಾಗಿ ಹೊರಹೊಮ್ಮುತ್ತಿದೆ ಮತ್ತು ಜಾಗತಿಕ ಬಹುರಾಷ್ಟ್ರೀಯ ಕಂಪನಿಗಳು ಆವಿಷ್ಕಾರಿ ಕೇಂದ್ರಗಳನ್ನು ಪ್ರಾರಂಭಿಸಲು ನೋಡುತ್ತಿರುವುದರಿಂದ ನಾವು ಬೆಂಗಳೂರನ್ನು ಅಂತಹ ಆವಿಷ್ಕಾರಿ ಕೇಂದ್ರಗಳನ್ನು ಪ್ರಾರಂಭಿಸು ಐದನೇ ಆದ್ಯತೆಯ ನಗರವಾಗಿಸಲು ಪ್ರಯತ್ನಿಸುತ್ತೇವೆ.

## ನಮ್ಮ ಪ್ರಮುಖ ಸಾಧನೆಗಳು

- ಕರ್ನಾಟಕವು ಭಾರತೀಯ ಮಾಹಿತಿ ತಂತ್ರಜ್ಞಾನ ಕ್ರಾಂತಿಯಲ್ಲಿ ಪ್ರವರ್ತಕ ರಾಜ್ಯವಾಗಿದೆ. ಬೆಂಗಳೂರು ವಿಶ್ವದ 4 ನೇ ಅತ್ಯುತ್ತಮ ತಂತ್ರಜ್ಞಾನ ಕೇಂದ್ರವಾಗಿದೆ.
- ಜಾಗತಿಕ ಜೈವಿಕ ತಂತ್ರಜ್ಞಾನ ಉದ್ಯಮದಲ್ಲಿ ಭಾರತದಲ್ಲಿ ಉದಯವಾಗುತ್ತಿರುವ ರಾಜ್ಯಗಳಲ್ಲಿ ಕರ್ನಾಟಕವು ಪ್ರಮುಖ ಪಾತ್ರವನ್ನು ವಹಿಸುತ್ತಿದೆ.
- ಜಾಗತಿಕ ಮಾರುಕಟ್ಟೆಯಲ್ಲಿ ಕರ್ನಾಟಕವು ಬೌದ್ಧಿಕ ಮಾರುಕಟ್ಟೆಯೆಂಬ ಹೆಗ್ಗಳಿಕೆಯನ್ನು ಹೊಂದಿದೆ ಮತ್ತು ದೇಶದ ತಂತ್ರಜ್ಞಾನ ರಾಜಧಾನಿಯಾಗಿದೆ.
- ಡಿಜಿಟಲ್ ಕ್ರಾಂತಿಗೆ ರಾಜ್ಯವು ಹೆಚ್ಚಿನ ಮನ್ನಣೆ ನೀಡಿದ್ದು ಇಡೀ ವಿಶ್ವದಲ್ಲಿಯೇ ಅತ್ಯಂತ ಡೈನಮಿಕ್ (ಪ್ರಚಲಿತ) ನಗರ ಎಂದು ಹೆಸರುವಾಸಿಯಾಗಿದೆ.
- ಮತ್ತೊಮ್ಮೆ ಕರ್ನಾಟಕವನ್ನು ಅನೇಕ ಮೊದಲುಗಳ ರಾಜ್ಯವನ್ನಾಗಿಸಲು ನಾವು ಕರ್ನಾಟಕ ಸ್ಟಾರ್ಟ್‌ಅಪ್ ಮತ್ತು ನವೋದ್ಯಮ ನೀತಿಯನ್ನು ಜಾರಿಗೆ ತಂದಿದ್ದೇವೆ.
- ಮುಂಚೂಣಿಯಲ್ಲಿರುವ ಜಾಗತಿಕ ನವೋದ್ಯಮ ಗಮ್ಯಸ್ಥಳವೆಂದು ನಮ್ಮಿಂದ ರಚನೆಯಾದ ಕರ್ನಾಟಕದ ಚಿತ್ರಣದಿಂದಾಗಿ ಅನೇಕ ಪ್ರಾರಂಭಿಕ ಕೇಂದ್ರಗಳು ಇಲ್ಲಿ ಪ್ರಾರಂಭವಾಗುತ್ತಿವೆ ಮತ್ತು ಬೆಂಗಳೂರನ್ನು ಜಾಗತಿಕ ನವೋದ್ಯಮದ ಕೇಂದ್ರವನ್ನಾಗಿಸಿವೆ.

## ನಮ್ಮ ಪಕ್ಷದ ಕೈಗೆತ್ತಿಕೊಳ್ಳುವ ಪ್ರಮುಖ ಐಟಿ ಕ್ಷೇತ್ರದ ಉಪಕ್ರಮಗಳು

- ಐಟಿ ಕ್ಷೇತ್ರವನ್ನು ರಾಜ್ಯದ ಜಿಎಸ್‌ಡಿಪಿಗೆ ಶೇಕಾಡ 25 ಕ್ಕಿಂತ ಹೆಚ್ಚು ಮತ್ತು ಭಾರತದ ತಂತ್ರಜ್ಞಾನಕ್ಕೆ ಸಂಬಂಧಿಸಿದ ಒಟ್ಟು ವಹಿವಾಟಿನ ಶೇಕಡಾ 33 ರಷ್ಟು ಕೊಡುಗೆಯನ್ನು ನೀಡಲು ವಿಸ್ತರಣೆ ಮಾಡುತ್ತೇವೆ.

- ಐಟಿಯು ರಾಜ್ಯ ಆರ್ಥಿಕತೆ ಪ್ರಮುಖ ಚಾಲಕ ಶಕ್ತಿಯನ್ನಾಗಿಸಲು ಐಟಿಯ ಕೊಡುಗೆಯನ್ನ ಈಗಿನ 60 ಬಿಲಿಯನ್ ಯುಎಸ್ ಡಾಲರ್‌ನಿಂದ 300 ಬಿಲಿಯನ್ ಯುಎಸ್ ಡಾಲರ್‌ಗೆ ಏರಿಕೆ ಮಾಡುವಂತೆ ಮಾಡುತ್ತೇವೆ.

- 3 ಮಿಲಿಯನ್‌ಗಳಗಿಂತಲೂ ಹೆಚ್ಚು ಮಾಹಿತಿ ತಂತ್ರಜ್ಞಾನದ ಉದ್ಯೋಗಗಳನ್ನು ಪೂರೈಸಲು, ಕೌಶಲ್ಯ ವೃದ್ಧಿಸುವ ಮತ್ತು ಮಾಹಿತಿ ತಂತ್ರಜ್ಞಾನವನ್ನು ಒಳಗೊಂಡಿರುವ ಪಠ್ಯಕ್ರಮಗಳ ಮೂಲಕ ಉನ್ನತ ಮಟ್ಟದ ಐಟಿ ಪ್ರತಿಭಾ ಪೂಲ್ (ಟ್ಯಾಲೆಂಟ್ ಪೂಲ್) ನ್ನು ನಿರ್ಮಿಸುತ್ತೇವೆ.

- ರಾಜ್ಯದಲ್ಲಿ ಪ್ರಾರಂಭಿಕ ಉದ್ಯಮಿಗಳ ಔದ್ಯಮಿಕ ಪರಿಸರ ವ್ಯವಸ್ಥೆಯನ್ನು ಪ್ರಾರಂಭಿಸಿ ದೇಶದಲ್ಲಿ ಅತ್ಯುತ್ತಮವೆನಿಸುವಂತೆ ಪ್ರಾರಂಭಿಕ ಉದ್ಯಮಿಗಳ ಸಂಖ್ಯೆಯನ್ನು 20,000ಕ್ಕೆ ಹೆಚ್ಚಿಸಿ ಅವುಗಳಲ್ಲಿ ಸುಮಾರು 5000ಕ್ಕೆ ಸಾಹಸೋದ್ಯಮ ಬಂಡವಾಳವನ್ನು ಹೂಡಲು ಸಹಾಯ ಮಾಡಿ ಾಜ್ಯವು ಪ್ರಾರಂಭಿಕ ಉದ್ಯಮಿಗಳ ಪ್ರಮುಖ ಜಾಗತಿಕ ಗಮ್ಯಸ್ಥಳವಾಗಲು ಅನುವು ಮಾಡಿಕೊಡುತ್ತೇವೆ.

- ಹೆಚ್ಚು ಕ್ಷಿಪ್ರತೆಯ ಕ್ಷೇತ್ರಗಳಾದ ಯಾಂತ್ರಿಕ ಬೌದ್ಧಿಕತೆ ಮತ್ತು ರೋಬೋಟಿಕ್ಸ್ ; ಆಟೋಮೇಷನ್ ಮತ್ತು ಮೆಷೀನ್ ಕಲಿಕೆ ; ಬೃಹತ್ ಡೇಟಾ ಅನಾಲಿಟಿಕ್ಸ್ ನಂತಹ ತಂತ್ರಜ್ಞಾನ ಕೇಂದ್ರಗಳನ್ನು ನಿರ್ಮಿಸಿ ಸೈಬರ್ ಭದ್ರತೆ ಮತ್ತು ಬ್ಲಾಕ್‌ಚೈನ್ ; ಇಂಟರ್‌ನೆಟ್ ಅಫ್ ಥಿಂಗ್ಸ್ (ಐಒಟಿ) ಮತ್ತು ಮೊಬೈಲ್ ಆಪ್ ಅಭಿವೃದ್ಧಿಯಂತಹ ಎಲ್ಲಾ ಉದಯೋನ್ಮುಖ ತಂತ್ರಜ್ಞಾನಕ್ಕೆ ರಾಜ್ಯವನ್ನು ಒಂದು ಪರೀಕ್ಷಾ ಕೇಂದ್ರವನ್ನಾಗಿಸುತ್ತೇವೆ.

- ಅಂತರಾಷ್ಟ್ರೀಯ ಪೇಟೆಂಟ್ ಹೊಂದಿರುವ ಕಂಪನಿಗಳಿಗೆ ಅನುದಾನ ನೀಡಲು ಬೆಂಗಳೂರಿಲ್ಲಿ ಪೇಟೆಂಟ್ ಕಛೇರಿ ನಿರ್ಮಿಸುವುದು.

- ಕಂಪನಿಗಳು ಉತ್ಪಾದನೆಯನ್ನು ಪ್ರಾರಂಭಿಸಲು ಸುಮಾರು 1 ಕೋಟಿ ಮೊತ್ತದ ಸ್ಟಾರ್ಟ್ ಅಪ್ ಸಬ್ಸಿಡಿಯನ್ನು ನೀಡಲಾಗುವುದು. ಸುಮಾರು 25 ಲಕ್ಷದಷ್ಟು ಸಬ್ಸಿಡಿಯಾಗಿ ಹಾಗು 75 ಲಕ್ಷವನ್ನು ಶೇಕಡ 6ರಷ್ಟು ಬಡ್ಡಿ ದರದಲ್ಲಿ ಸಾಲವಾಗಿ ನೀಡಲಾಗುವುದು.

- ಇಎಸ್‌ಡಿಎಮ್ ಪಾರ್ಕ್‌ಗಳನ್ನು ಸೃಷ್ಠಿಸುವುದು. ಇ ಎಸ್‌ಡಿಎಮ್ ಕಂಪನಿಗಳಿಗೆ ತಯಾರಿಕಾ ಹಬ್‌ಗಳನ್ನು ಸೃಷ್ಠಿಸಿ. ಭೂಮಿಯನ್ನು ಕೈಗೆಟಕುವ ದರಕ್ಕೆ ವಿತರರಿಸುವುದು.

- ಹಾರ್ಡ್‌ವೇರ್ ಪಾರ್ಕ್‌ಗಳನ್ನು ಶಿಡ್ಲಘಟ್ಟ ಮತ್ತು ಚಿಕ್ಕಬಳ್ಳಾಪರದಲ್ಲಿ ನಿರ್ಮಿಸುವುದು.

- ದೇವನಹಳ್ಳಿಯಲ್ಲಿ ಐಟಿ ಪಾರ್ಕ್‌ನನ್ನು ನಿರ್ಮಿಸುವುದು.

- ದೇವಹಳ್ಳಿ ಎರೋಸ್ಪೇಸ್ ಹಬ್ ಸ್ಥಾಪಿಸಲು ಹೆಚ್ಚಿನ ಆದ್ಯತೆ ನೀಡುವುದು.

## ಜೈವಿಕ ತಂತ್ರಜ್ಞಾನ

ಕಾಂಗ್ರೆಸ್ ಜೈವಿಕ ತಂತ್ರಜ್ಞಾನವನ್ನು ಪ್ರೋತ್ಸಾಹಿಸಲು ತೆಗೆದುಕೊಂಡಿರುವ ವಿವಿಧ ಉಪಕ್ರಮಗಳು ಕರ್ನಾಟಕವನ್ನು ಹೆಚ್ಚು ಕ್ರಿಯಾಶೀಲ ರಾಜ್ಯವನ್ನಾಗಿಸಿದೆ.

ನಾವು ಇನ್ನೂ ಮುಂದುವರಿದು ಕರ್ನಾಟಕದಲ್ಲಿ ಜೈವಿಕ ತಂತ್ರಜ್ಞಾನ ಕ್ಷೇತ್ರವನ್ನು ವಿಸ್ತರಿಸಲಿದ್ದೇವೆ ಮತ್ತು ಬೆಳೆಸಲಿದ್ದೇವೆ.

- ಜೈವಿಕ ಉತ್ಪನ್ನಗಳ ಕೊಡುಗೆ ನೀಡಲು, ಸಂಸ್ಕರಿಸಲು ಮತ್ತು ಜೈವಿಕ ಆರ್ಥಿಕತೆಗೆ 2015 ರಲ್ಲಿ ರೂ. 42 ಟ್ರಿಲಿಯನ್‌ಗಳಿಂದ (ಯುಎಸ್‌ಡಿ 6.5 ಬಿಲಿಯನ್) ನಿಂದ ಏರಿಕೆಯಾಗಿ ರೂ. 3.25 ಟ್ರಿಲಿಯನ್ (ಯುಎಸ್‌ಡಿ 50 ಬಿಲಿಯನ್) ಗಳಷ್ಟು ಕರ್ನಾಟಕ ರಾಜ್ಯಕ್ಕೆ ಸೇವೆಗಳನ್ನು ನೀಡುವುದು.

- ಆರಂಭಿಕ ಕಂಪನಿಗಳ ಮತ್ತು (ಇನ್ಕ್ಯೂಬೇಟರ್) ಗಳ ಹೆಚ್ಚಳ

- ಸದೃಢ ಮತ್ತು ವ್ಯಾಪಕವಾದ ಶೈಕ್ಷಣಿಕ – ಕೈಗಾರಿಕಾ ಸಂಪರ್ಕಗಳನ್ನು ಸಾಧಿಸುವುದು.

- ಜೈವಿಕ ತಂತ್ರಜ್ಞಾನ ಉದ್ಯಮದ ಹೆಚ್ಚುತ್ತಿರುವ ಅಗತ್ಯಗಳಿಗೆ ಉತ್ತಮ ತರಬೇತಿ ಹೊಂದಿದ ಮಾನವ ಸಂಪನ್ಮೂಲವನ್ನು ಉತ್ಪಾದಿಸುವುದು.

- ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಹೂಡಿಕೆಯನ್ನು ಹೆಚ್ಚಿಸುವುದು.

- ಸರ್ಕಾರದಿಂದ ಬಿಟಿ ಸಂಸ್ಥೆಗಳನ್ನು ಪ್ರಾರಂಭಿಸಲು ಪ್ರೋತ್ಸಾಹ, ವಿಶೇಷ ಧನ ಸಹಾಯ ಮತ್ತು ಪ್ರೋತ್ಸಾಹಗಳನ್ನು ನೀಡುವುದು.

ಮೂಲಭೂತ ಸೌಕರ್ಯ

# ತ್ವರಿತ ಪ್ರಗತಿಗಾಗಿ ಎಲ್ಲಾ ಸಂಪನ್ಮೂಲಗಳನ್ನು ಒದಗಿಸುವುದು.

ಕಾಂಗ್ರೆಸ್ ಸುರಕ್ಷಿತ, ನಂಬಿಕಾರ್ಹ ಮತ್ತು ಪರಿಸರ ಸುಸ್ಥಿರವಾದ, ಕರ್ನಾಟಕ ರಾಜ್ಯದಾದ್ಯಂತ ಸಮಾಜೋ ಆರ್ಥಿಕ ಅಭಿವೃದ್ಧಿಯ ಹೆಚ್ಚಳವನ್ನು ಸಾಧಿಸುವಂತಹ ಅಂತಿಮ ಹಂತದ ಸಂಪರ್ಕವನ್ನು ಒದಗಿಸುತ್ತೇವೆ.

## ನಮ್ಮ ಪ್ರಮುಖ ಸಾಧನೆಗಳು

- ಸರ್ಕಾರವು ರಸ್ತೆ ಅಭಿವೃದ್ಧಿ, ಗ್ರಾಮೀಣ ರಸ್ತೆಗಳು, ಜಿಲ್ಲಾ ಮುಖ್ಯ ರಸ್ತೆಗಳು, ರಾಜ್ಯ ಹೆದ್ದಾರಿಗಳು, ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೆತ್ತಿಕೊಂಡಿದೆ.
- ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಯು ಮೂರು ಕರಾವಳಿ ಜಿಲ್ಲೆಗಳಲ್ಲಿ ಕಡಲ ಕೊರೆತವನ್ನು ತಡೆಯಲು ಕೊರೆತವಾಗುವ ಸ್ಥಳಗಳಲ್ಲಿ 2000 ಮೀಟರುಗಳಷ್ಟು ಉದ್ದದ ತಡೆಗೋಡೆಯನ್ನು ನಿರ್ಮಿಸಿದೆ.
- ರೈಲುಗಳನ್ನು ಹೆಚ್ಚಿಸುವ ದೃಷ್ಟಿಯಿಂದ ಮತ್ತು ಆನುಷ್ಠಾನದ ಅವಕಾಶಗಳನ್ನು ಹೆಚ್ಚಿಸಲು ರೈಲ್ವೆ ಸಚಿವಾಲಯದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಹೊಸ ರೈಲ್ವೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲು 50:50 ವೆಚ್ಚವನ್ನು ಭರಿಸುವ ಆಧಾರದ ಮೇಲೆ ಒಪ್ಪಿದೆ.
- ಚೆನ್ನೈ- ಬೆಂಗಳೂರು – ಚಿತ್ರದುರ್ಗ ಕೈಗಾರಿಕಾ ಪ್ರಭಾವ ವಲಯ (ಸಿಬಿಸಿಐಸಿ) ಮತ್ತು ಬೆಂಗಳೂರು-ಮುಂಬೈ ಆರ್ಥಿಕ ವಲಯ (ಬಿಎಮ್‌ಇಸಿ) ಗಳನ್ನು ಚುರುಕುಗೊಳಿಸಲಾಗಿದ್ದು ದೆಹಲಿ ಮುಂಬೈ ಕೈಗಾರಿಕಾ ವಲಯ (ಡಿಎಮ್‌ಐಸಿ) ದೊಂದಿಗೆ ಮತ್ತು ಭಾರತ ಸರ್ಕಾರದೊಂದಿಗೆ ಕೈಜೋಡಿಸಲಾಗಿದೆ.
- ಸರ್ಕಾರವು ನೂತನ ಮರಳು ಗಣಿಗಾರಿಕೆ ನೀತಿಯನ್ನು ಅನುಮೋದಿಸಿದೆ.

## ನಮ್ಮ ಪ್ರಮುಖ ಉಪಕ್ರಮಗಳು

- ರಸ್ತೆಗಳ ಪ್ರಾದೇಶಿಕ ಸಂಪರ್ಕವನ್ನು ಮೊದಲು ಪೂರೈಸುತ್ತೇವೆ ಮತ್ತು ಅಂತಿಮ ಹಂತದ ಸಂಪರ್ಕವನ್ನು ಎಲ್ಲಾ ಗ್ರಾಮಗಳಿಗೂ ಕೊಡುತ್ತೇವೆ.
- ರಾಜ್ಯದಲ್ಲಿ ವಿಮಾನ ನಿಲ್ದಾಣಗಳು ಮತ್ತು ಏರ್‌ಸ್ಟ್ರಿಪ್ ಮೂಲಸೌಕರ್ಯಗಳನ್ನು ಅಭಿವೃದ್ಧಿಗೊಳಿಸುತ್ತೇವೆ.
- ರಾಜ್ಯದಾದ್ಯಂತ ಅಂತ್ಯರಹಿತ ವಿತರಣೆ, ಲಭ್ಯತೆ, ವಿವಿಧಮಾದರಿ, ರೈಲ್ವೆ ಸಂಪರ್ಕವನ್ನು ಹೆಚ್ಚಿಸುವುದರಿಂದ ಸಾಗಾಣಿಕೆಯ ಭರವಸೆ ನೀಡುತ್ತೇವೆ.
- ಗುಣಮಟ್ಟದ ಬಂದರು ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುತ್ತೇವೆ ಮತ್ತು ಕರಾವಳಿ ಹಡಗು ಸಾಗಾಣಿಕೆಯನ್ನು ಪ್ರೋತ್ಸಾಹಿಸುತ್ತೇವೆ.
- ರಾಜ್ಯದ ಅಂತರ ವಲಯ ಸಾಮರ್ಥ್ಯವನ್ನು ಹೆಚ್ಚಿಸಲು ರಹದಾರಿ ವಲಯ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸುತ್ತೇವೆ.
- ಮೂಲಸೌಕರ್ಯ ಕ್ಷೇತ್ರದಲ್ಲಿ ಹೂಡಿಕೆಯನ್ನು ಆಕರ್ಷಿಸುತ್ತೇವೆ.
- ರಾಜ್ಯಕ್ಕಾಗಿ ಆಂತರಿಕ ಬಂದರು ಪ್ರಾಧಿಕಾರವನ್ನು ರಚಿಸಿ ಅದನ್ನು ಕಾರ್ಯಗತಗೊಳಿಸುತ್ತೇವೆ.
- ಮಂಗಳೂರು ಮತ್ತು ಹುಬ್ಬಳ್ಳಿಗಳ ನಡುವೆ ವಾಯು ಯಾನ ಸಂಪರ್ಕವನ್ನು ಪ್ರಾರಂಭಿಸುತ್ತೇವೆ.

- ಸ್ಯಾಟಲೈಟ್ ಪಟ್ಟಣಗಳ ಅಭಿವೃದ್ಧಿಗೆ ಉತ್ತೇಜಿಸುವುದು
- ಎಲ್ಲಾ 2 ದರ್ಜೆಯ ನಗರಗಳಿಗೆ ಅನಿಲ ಕೊಳವೆಗಳನ್ನು ಹೊಂದಲು ಮೂಲಸೌಕರ್ಯಗಳನ್ನು ನೀಡುತ್ತೇವೆ.
- ಶಿರಡಿ ಘಾಟ್‌ನಲ್ಲಿ ಟನೆಲ್‌ಗಳನ್ನು ನಿರ್ಮಾಣ ಮಾಡುವ ಮೂಲಕ ಶಾಶ್ವತ ಮೂಲಸೌಕರ್ಯವನ್ನು ಒದಗಿಸುತ್ತದೆ.
- 2ನೇ ಟೈರ್ ನಗರಗಳಾದ ಮೈಸೂರು, ಹುಬ್ಬಳ್ಳಿ, ಧಾರವಾಡ, ವಿಜಯಪುರ, ಕಲ್ಬುರ್ಗಿ, ಮಂಗಳೂರು ನಗರಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗಾಗಿ ಸರ್ಕಾರವು ವಿಶೇಷ ಪ್ಯಾಕೇಜ್ ನೀಡುತ್ತದೆ.
- ಸೀಗಡಿ ಸಕಾಣಿಕೆ, ಮತ್ಸ್ಯೋದ್ಯಮ ಅಭಿವೃದ್ಧಿ ಮತ್ತು ಆಕ್ವಾಕಲ್ಚರ್ ಕ್ಷೇತ್ರಗಳಲ್ಲಿ ಕರ್ನಾಟಕ ಮೊದಲ ಸ್ಥಾನ ಗಳಿಸುವಂತೆ ಮಾಡುವುದು.
- ಮತ್ಸ್ಯ ಕೈಗಾರಿಕೆಗೆ ಅನುಕೂಲವಾಗುವಂತೆ ಸಿಆರ್‌ಜೆಡ್ ನಿಯಮಾವಳಿಗಳನ್ನು ಪರಿಶೀಲಿಸುವಂತೆ ಭಾರತ ಸರ್ಕಾರಕ್ಕೆ ಪ್ರೇರೇಪಿಸುವುದು.
- ಗಣಿಗಾರಿಕೆ ಚಟುವಟಿಕೆಯಿಂದ ಹಾನಿಗೊಳಗಾದ ಜನರಿಗೆ ಮೂಲ ಸೌಕರ್ಯಗಳನ್ನು ಒದಗಿಸುವುದು ಮತ್ತು ಅವರ ಕೌಶಲ್ಯಾಭಿವೃದ್ಧಿಗಾಗಿ ೮೦೦೦ ಕೋಟಿಯನ್ನು ಮೀಸಲಿಡುವುದು.
- ಜೀವನಾಧಾರಕ್ಕಾಗಿ ಒಳನಾಡು ಮೀನುಗಾರಿಕೆ ಮೇಲೆ ಅವಲಂಭಿತರಾದ ಮೀನುಗಾರರಿಗೆ ಅಗತ್ಯ ಮೂಲಸೌಕರ್ಯ, ಹಣಕಾಸು ನೆರವವನ್ನು ನೀಡಲಾಗುವುದು. ಹಾಹು ಸ್ಥಳೀಯ ಮಾರುಕಟ್ಟೆಯಲ್ಲಿ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಉತ್ತಮವಾದ ಮಾರುಕಟ್ಟೆ ವೇದಿಕೆಯನ್ನು ಕಲ್ಪಿಸಿಕೊಡುವುದು.

ನೀರಾವರಿ

# ಮನೆ ಮನೆ-ಹೊಲ ಹೊಲಕ್ಕೆ ನೀರು

(ಪ್ರತಿ ಮನೆ ಮತ್ತು ಹೊಲಗಳಿಗೆ ನೀರು)

ನಮ್ಮ ಸರ್ಕಾರವು ಕೃಷಿ ಮತ್ತು ಸಂಬಂಧಿತ ಸೇವೆಗಳನ್ನು ರಾಜ್ಯದಲ್ಲಿ ಅಭಿವೃದ್ಧಿಪಡಿಸಲು ಬದ್ಧವಾಗಿದೆ. ನಾವು ಹೊಸ ಉಪಕ್ರಮಗಳನ್ನು ಪ್ರಾರಂಭಿಸಲಿದ್ದೇವೆ ಮತ್ತು ನೀರಾವರಿ ಕ್ಷೇತ್ರದಲಿ ಹೊಸ ತಂತ್ರಗಳನ್ನು ಅನುಷ್ಠಾನಗೊಳಿಸಲು ನೀರಾವರಿ ಕಡಿಮೆ ಇರುವ ಅಥವಾ ನೀರಾವರಿ ಇಲ್ಲದ ಪ್ರದೇಶಗಳಿಗೆ ವಿಶೇಷ ಬೆಂಬಲವನ್ನು ನೀಡಲಿದ್ದೇವೆ. ನಮ್ಮ ಸರ್ಕಾರವು :

ನಮ್ಮ ಸರ್ಕಾರವು ಕಾವೇರಿ, ಕೃಷ್ಣ, ಗೋದಾವರಿ, ಭೀಮಾ ಮತ್ತು ಇತರ ಜಲಾಶಯಗಳಿಂದ ಕುಡಿಯುವ ನೀರು ಮತ್ತು ನೀರಾವರಿಗೆ ಗರಿಷ್ಠ ಬಳಕೆ ಮಾಡಿಕೊಳ್ಳಲು ಬದ್ಧವಾಗಿದೆ.

ನಮ್ಮ ಸರ್ಕಾರವು ಮಹದಾಯಿ ನದಿಯ ನೀರಿನ ಸಮರ್ಪಕ ಪಾಲುದಾರಿಕೆಗಾಗಿ ಅದನ್ನು ಪಡೆಯಲು ಅಗತ್ಯವಿರುವ ಹಕ್ಕುಗಳಿಗಾಗಿ ಹೋರಾಟ ನಡೆಸಲಿದೆ.

## ನಮ್ಮ ಪ್ರಮುಖ ಸಾಧನೆಗಳು

ನಮ್ಮ ಸರ್ಕಾರವು ಆಯವ್ಯಯದಲ್ಲಿ 58,393.51 ಕೋಟಿ ಹಣವನ್ನು ನೀರಾವರಿಗೆ ಮೀಸಲಿರಿಸಿ ಫೆಬ್ರವರಿ 2018 ರ ವೇಳೆಗೆ 4,848.33 ಕೋಟಿಯನ್ನು ವಿನಿಯೋಗಿಸಲಾಗಿದೆ ಹಾಗು 6,56,906 ಎಕರೆ ನೀರಾವರಿ ಪ್ರದೇಶವನ್ನು ಸೃಷ್ಟಿಸಲಾಗಿದೆ. ಉಳಿದ ಕೃಷ್ಣ ಮೇಲ್ದಂಡೆ ಯೋಜನೆಯಡಿ ನೀರಾವರಿ ಸೌಲಭ್ಯ ಕಲ್ಪಿಸಲು ಮೂಲಸೌಕರ್ಯ ಕಲ್ಪಿಸಲಾಗಿದೆ.

ಬಿ.ಜೆ.ಪಿಯು 2008-13 ರ ಅವಧಿಯಲ್ಲಿ ವಿನಿಯೋಗಿಸಿದ ಹಣಕ್ಕಿಂತ 27,078.69 ಕೋಟಿ ಹೆಚ್ಚು ಹಣವನ್ನು ನಮ್ಮಸರ್ಕಾರ ವಿನಿಯೋಗಿಸಿದೆ

## ನೀರಾವರಿ ಯೋಜನೆಗಳು:

- ಮುಂಬರುವ 2018-2023 ಅವಧಿಯಲ್ಲಿ (5 ವರ್ಷಗಳಲ್ಲಿ) ನೀರಾವರಿಗಾಗಿ ರೂ. 1,25,000 ಕೋಟಿಗಳನ್ನು ಮೀಸಲಿಡಲಿದೆ.
- ಹುಬ್ಬಳ್ಳಿ, ಧಾರವಾಡ, ಹಾವೇರಿ, ಮತ್ತು ಗದಗಳನ್ನೊಳಗೊಂಡ ಕರ್ನಾಟಕದ ಮಧ್ಯ ಭಾಗಕ್ಕೆ ಕುಡಿಯಲು ಮತ್ತು ಕೃಷಿ ನೀರಾವರಿ ಅಗತ್ಯಗಳಿಗಾಗಿ ನೀರನ್ನೊದಗಿಸುವ ಭರವಸೆ ನೀಡುತ್ತಿದ್ದೇವೆ. ಹೆಚ್ಚುವರಿ ಅಗತ್ಯವನ್ನು ಅಘನಾಶಿನಿ ಮತ್ತು ಬೇಡ್ತಿಗಳನ್ನು ವರದಾ ಆಣೆಕಟ್ಟಿಗೆ ನದಿಗಳ ಜೋಡಣೆಯಿಂದ ಪೂರೈಸಲಿದ್ದೇವೆ.
- ಚಾಲ್ತಿಯಲ್ಲಿರುವ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳಾದ ಕೃಷ್ಣಾ ಮೇಲ್ದಂಡೆ 3ನೇ ಹಂತವು ಮುಕ್ತಾಯಗೊಳ್ಳಲಿದೆ ಮತ್ತು ವಿಸ್ತರಣೆಗೊಳ್ಳಲಿದೆ.
- ಭದ್ರಾ ಮೇಲ್ದಂಡೆ ಯೋಜನೆ ಪೂರ್ಣಗೊಳಿಸುವುದು
- ನ್ಯಾಯಯುತ ಮತ್ತು ಸ್ವೀಕಾರಾರ್ಹ ಪುನರ್ವಸತಿ ಪ್ಯಾಕೇಜನ್ನು ಸೂಕ್ತವಾಗಿ ಮತ್ತು ಪಾರದರ್ಶಕತೆಯಿಂದ ಭೂ ಸ್ವಾಧೀನದಲ್ಲಿ ಅಳವಡಿಸಿಕೊಂಡು ಪುನರ್ವಸತಿ ಕಾಯಿದೆ 2013 ಕೃಷ್ಣಾ ಮೇಲ್ದಂಡೆ 3ನೇ ಹಂತದ ಯೋಜನೆಯ ಪ್ರದೇಶದ ಭಾಧಿತರಿಗೆ ಪರಿಹಾರಗಳನ್ನು ನೀಡಲಾಗುವುದು.
- 130 ಟಿಎಂಸಿ ನೀರನ್ನು ಸಂಗ್ರಹಿಸಿ ಅದನ್ನು ಕೃಷ್ಣಾ ಮೇಲ್ದಂಡೆ 3ನೇ ಹಂತದ ಅಡಿಯಲ್ಲಿ ಬರುವ 9 ಯೋಜನೆಗಳಿಗೆ ಬಳಸಿಕೊಳ್ಳಲಾಗುವುದು.
- ಕೆರೆಗಳನ್ನು ತುಂಬಲು ವಿಶ್ವೇಶ್ವರಯ್ಯ ಅಭಿಯಾನವನ್ನು ಪ್ರಾರಂಭಿಸಲಾಗುವುದು. ಕರ್ನಾಟಕದಾದ್ಯಂತ ಇರುವ ಕೆರೆಗಳನ್ನು ಉಪನದಿಗಳಿಗೆ ಜೋಡಣೆ ಮಾಡಿ ಆಣೆಕಟ್ಟುಗಳಲ್ಲಿ ಲಭ್ಯವಿರುವ ನೀರನ್ನು ಬಳಸಿಕೊಳ್ಳುವುದು.
- ಕಾವೇರಿ 4ನೇ ಹಂತವನ್ನು ಮುಂದುವರಿಸಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ಇತರೆ ಪ್ರದೇಶಗಳಿಗೆ ಕಾವೇರಿ ಅಚ್ಚುಕಟ್ಟನಡಿಯಲ್ಲಿ ಕುಡಿಯುವ ನೀರನ್ನು ಒದಗಿಸಲು ಯೋಜನೆಗಳನ್ನು ಹಾಕಿ ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸಲಾಗುವುದು ಇದರಿಂದ ಸುಮಾರು 75 ಟಿಎಮ್‌ಸಿಯಷ್ಟು ನೀರನ್ನು ಬಳಸಿಕೊಳ್ಳಬಹುದಾಗಿದೆ.

- ಎತ್ತಿನ ಹೊಳೆ ಕುಡಿಯುವ ನೀರಿನ ಯೋಜನೆ
- ಬೆಂಗಳೂರಿನಲ್ಲಿರುವ 192 ಕೆರೆಗಳನ್ನು ಅಭಿಯಾನ ಮಾದರಿ ಕಾರ್ಯಕ್ರಮದ ಮೂಲಕ ಸ್ವಚ್ಛಗೊಳಿಸಿ ಪುನಶ್ಚೇನಗೊಳಿಸುವುದು ಮತ್ತು ಮುಂದಿನ 5 ವರ್ಷಗಳಲ್ಲಿ ಜಲಕ್ರೀಡಾ ಚಟುವಟಿಕೆಗಳ ನೀಲಿ ನಕ್ಷೆಯನ್ನು ತಯಾರಿಸುವುದು.
- ಕನಿಷ್ಟ 2000 ಜನಸಂಖ್ಯೆಯಿರುವ ಗ್ರಾಮಗಳಿಗೆ ಕುಡಿಯುವ ನೀರನ್ನು ನಲ್ಲಿಗಳ ಮೂಲಕ ಪೂರೈಕೆ ಮಾಡುವುದು.
- ತುಂಗಭದ್ರಾ ಅಣೆಕಟ್ಟೆಯಲ್ಲಿ ತುಂಬಿಕೊಂಡಿರುವ ಹೂಳಿನಿಂದಾಗಿರುವ ಸಮಸ್ಯೆಗಳಿಗೆ ಪರಿಹಾರವಾಗಿ ಹೊಸ ಸಂಗ್ರಹಣಾ ಸೌಲಭ್ಯವನ್ನು ಕಲ್ಪಿಸುವುದು.
- ಪಶ್ಚಿಮ ವಾಹಿನಿ ಯೋಜನೆಗೆ ಶೀಘ್ರವೇ ಪ್ರೋತ್ಸಾಹ ನೀಡಿ ಕುಡಿಯುವ ನೀರನ್ನು ಒದಗಿಸುವುದು ಮತ್ತು ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ನೀರಾವರಿಗೆ ಅವಕಾಶ ಮಾಡಿಕೊಡುವುದು.
- ಕೆರೆಗಳಲ್ಲಿ ಮಾಲಿನ್ಯವನ್ನುಂಟು ಮಾಡುತ್ತಿರುವ ಕೈಗಾರಿಕೆಗಳನ್ನು ಮುಚ್ಚಲು ಕಾನೂನು ರಚಿಸುವುದು ಮತ್ತು ಒಳಚರಂಡಿ ನೀರನ್ನು ಪುನರ್ಬಳಕೆ ಮಾಡಿಕೊಳ್ಳಲು ಯೋಜಿಸುವುದಕ್ಕೆ ಮುಂಚಿತವಾಗಿ ತೃತೀಯ ಸಂಸ್ಕರಣೆಯನ್ನು ಅನುಷ್ಟಾನಗೊಳಿಸುವುದು.
- ಇತ್ತೀಚೆಗಿನ ಸುಪ್ರೀಂ ಕೋರ್ಟ್ ಆದೇಶದಂತೆ ಕಾವೇರಿ ನದಿ ಪಾತ್ರದಲ್ಲಿ ನಿಗಧಿತವಾಗಿರುವ 80 ಟಿಎಮ್‌ಸಿ ನೀರಿನಲ್ಲಿ ಹೆಚ್ಚುವರಿ 15 ಟಿಎಮ್‌ಸಿ ಬಳಸಿಕೊಳ್ಳಲು ನೀಲಿ ನಕ್ಷೆಯನ್ನು ತಯಾರಿಸುವುದು.

ಕಾನೂನು

# ಕಾನೂನನ್ನು ಎತ್ತಿ ಹಿಡಿಯಿರಿ ಮತ್ತು ನ್ಯಾಯದ ಪ್ರಗತಿಯನ್ನು ಖಚಿತಪಡಿಸಿ

ಕಾಂಗ್ರೆಸ್ ಕಾನೂನಿನ ಆಡಳಿತವನ್ನು ಜಾರಿಗೊಳಿಸುತ್ತದೆ, ಅಪರಾಧಗಳನ್ನು ಕಡಿಮೆ ಮಾಡಿ ಹಿಂದುಳಿದಿರುವ ಪ್ರಕರಣಗಳ ಅವಧಿಯಲ್ಲಿ ಮಾಹಿತಿ ಸಂಪರ್ಕ ಮತ್ತು ತಂತ್ರಜ್ಞಾನದ ಶಕ್ತಿಯನ್ನು ಹೆಚ್ಚುಮಾಡಲು ಬದ್ಧವಾಗಿದೆ. ಕಾನೂನು ಆಡಳಿತದ ಮೂಲಕ-ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ಒದಗಿಸಲು ನಾವು ಬಹಳಷ್ಟು ಶ್ರಮಹಾಕಿದ್ದೇವೆ. ನಮಗೆ, ಕಾನೂನಿನ ಆಡಳಿತವನ್ನು ನಿರ್ವಹಣೆ ಮಾಡುವುದು ಹೆಚ್ಚು ಪ್ರಮುಖವಾದದ್ದು ಇದರಿಂದ ಕರ್ನಾಟಕವನ್ನು ಪ್ರಗತಿಪರ ರಾಜ್ಯವನ್ನಾಗಿಸಬಹುದು.

## ನಮ್ಮ ಪ್ರಮುಖ ಸಾಧನೆಗಳು

- ಕರ್ನಾಟಕ ಪೋಲೀಸ್ ಮೊದಲನೆಯದಾಗಿದ್ದು ಸಂಚಾರಿ ಸೂಚಕಗಳಲ್ಲಿ (ಟ್ರಾಫಿಕ್) ಸಿಸಿಟಿವಿಗಳನ್ನು ಅಳವಡಿಸಿದ್ದು ಭದ್ರತೆ ಮತ್ತು ತನಿಖಾ ಉದೇಶಗಳಿಗಾಗಿ ಬಳಸಲಾಗಿದೆ.
- ಕರ್ನಾಟಕ ಪೋಲೀಸ್ ದೇಶದಲ್ಲೇ ಮೊದಲನೇ ಮಾನವರಹಿತ ವಾಯುಯಾನ ವಾಹನವನ್ನು ಹಾರಾಟಕ್ಕಾಗಿ (ಯುಎವಿ) ಹೊಂದಿರುವ ಪೋಲೀಸ್ ವ್ಯವಸ್ಥೆಯಾಗಿದೆ
- ಕರ್ನಾಟಕ ಉಚ್ಚನ್ಯಾಯಾಲಯವು ಅನೇಕ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ತಾಂತ್ರಿಕವಾದ ಬದಲಾವಣೆಗನ್ನು ಅಳವಡಿಸಿಕೊಂಡಿದ್ದು ಮುಕ್ತ ಸಂಪನ್ಮೂಲ ತಂತ್ರಜ್ಞಾನವನ್ನು (ಎಫ್ಓಎಸ್ಎಸ್) ಹೊಂದಿದೆ.
- ಮಹಿಳೆಯರು, ಮಕ್ಕಳು, ಮತ್ತು ಸಮಾಜದ ವಿಶೇಷ ವಿಭಾಗದವರ ವಿರುದ್ಧ ನಡೆಯುವ ಅಪರಾಧಗಳಿಗಾಗಿ ವಿಶೇಷ ನ್ಯಾಯಾಲಯಗಳನ್ನು ಹೊಂದಿದೆ.

## ನಮ್ಮ ಪ್ರಮುಖ ಉಪಕ್ರಮಗಳು

ಗ್ರಾಮೀಣಾಭಿವೃದ್ಧಿ

# ಉತ್ತಮ ಗ್ರಾಮೀಣ ಪ್ರಗತಿಯ ಪ್ರಕಾಶಮಾನವಾದ ಉದಾಹರಣೆಗಳನ್ನು ಸೃಷ್ಟಿಸುವುದು

ಕಾಂಗ್ರೆಸ್ ಬಲವಾಗಿ ನಂಬುವುದು ಮತ್ತು ಬದ್ಧವಾಗಿರುವುದೇನೆಂದರೆ, ನಿರಂತರವಾಗಿ ಸಮುದಾಯದ ಮಾನವಾಭಿವೃದ್ಧಿ ಕೇಂದ್ರಿತ ಅಭಿವೃದ್ಧಿಯತ್ತ ಮುನ್ನಡೆಸುವುದು. ಅದು ನಿರಂತರವಾಗಿ ಮಾನವೀಯ, ಸಾಮಾಜಿಕ ಮತ್ತು ಕರ್ನಾಟಕದ ಎಲ್ಲಾ ಗ್ರಾಮೀಣ ಜನರ ಆರ್ಥಿಕ ಬಂಡವಾಳದತ್ತ ಶ್ರಮಿಸುವುದೇ ಆಗಿದೆ.

ನಾವು ಗ್ರಾಮೀಣ ಅಭಿವೃದ್ಧಿಯನ್ನು ಗ್ರಾಮೀಣ ಪ್ರದೇಶಗಳ ಪರಿವರ್ತನೆ ಮತ್ತು ಆರ್ಥಿಕತೆಯ ದೃಷ್ಟಿಕೋನದಿಂದಲೇ ಪರೀಕ್ಷಿಸುತ್ತೇವೆ ಅಂದರೆ, ಗ್ರಾಮೀಣ ಮತ್ತು ವಿನ್ಯಾಸದ ಪರಿವರ್ತನೆಗಳು.

## ನಮ್ಮ ಪ್ರಮುಖ ಸಾಧನೆಗಳು

- ನಾವು ಯಶಸ್ವಿಯಾಗಿ 169,774 ಮನೆಗಳನ್ನು ವಿವಿಧ ವಸತಿ ಯೋಜನೆಗಳಡಿಯಲ್ಲಿ 2016-17 ರ ಡಿಸೆಂಬರ್ 2016 ರ ಅವಧಿಯಲ್ಲಿ ನಿರ್ಮಿಸಿದ್ದೇವೆ.
- ಎನ್‌ಆರ್‌ಡಿಡಬ್ಲ್ಯೂಪಿ ಅಡಿಯಲ್ಲಿ, ಡಿಸೆಂಬರ್ 2016 ರವರೆಗೆ 7,527 ಕುಟುಂಬಗಳನ್ನು ವಸತಿಯುತ ಗೊಳಿಸಿದ್ದೇವೆ ಮತ್ತು 9,300 ಆರ್ ಓ ಸ್ಥಾವರಗಳನ್ನು ಈ ದಿನಾಂಕದ ವರೆಗೆ ಸ್ಥಾಪಿಸಿದ್ದೇವೆ. ಇದರಿಂದ 1.6 ಕೋಟಿ ಜನರನ್ನು ತಲುಪಿದ್ದೇವೆ.
- ಗ್ರಾಮೀಣ ಕರ್ನಾಟಕದಲ್ಲಿ, ಮಾರ್ಚ್ 2017ರವರೆಗೆ 63,374.15 ಕಿ.ಮೀ. ಉದ್ದದ ರಸ್ತೆ ಡಾಂಬರೀಕರಣ ಮಾಡಿದ್ದೇವೆ.
- ಗ್ರಾಮೀಣ ಪ್ರದೇಶದ ಪ್ರಾಥಮಿಕ ಶಿಕ್ಷಣಕ್ಕಾಗಿ, 2015-16 ರಲ್ಲಿ ಸುಮಾರು 4,972,276 ಮಕ್ಕಳು ದಾಖಲಾಗಿದ್ದಾರೆ.
- ಸೌರ ಬೆಳಕು ಯೋಜನೆಯಡಿಯಲ್ಲಿ ಕರ್ನಾಟಕದ ಆಯ್ದ ಜಿಲ್ಲೆಗಳ 1,409 ಗ್ರಾಮಗಳನ್ನು (2016-17) ತಲುಪಿದ್ದೇವೆ.
- 10,000 ಶುದ್ಧ ಕುಡಿಯುವ ನೀರಿನ ಆರ್ ಓ ಘಟಕಗಳನ್ನು ಸ್ಥಾಪನೆ ಮಾಡಲಾಗಿದ್ದು ಇವುಗಳ ಮೂಲಕ ಶುದ್ಧ ಕುಡಿಯುವ ನೀರನ್ನು ಗ್ರಾಮೀಣ ಪ್ರದೇಶದ ಜನರಿಗೆ ಒದಗಿಸಲಾಗುತ್ತಿದೆ.
- ಪ್ರಗತಿಪರ ಗ್ರಾಮ ಸ್ವರಾಜ್ ಮತ್ತು ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ 2015 ನ್ನು ಅನುಷ್ಠಾನಗೊಳಿಸಲಾಗಿದೆ.

## ನಮ್ಮ ಪ್ರಮುಖ ಉಪಕ್ರಮಗಳು

- ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಒಂದು ಸ್ಮಾರ್ಟ್ ಗ್ರಾಮವನ್ನು ಅಭಿವೃದ್ಧಿಪಡಿಸುತ್ತೇವೆ.
- ಗ್ರಾಮ ಪಂಚಾಯಿತಿಗಳು ರಾಜ್ಯ ಮತ್ತು ಕೇಂದ್ರದ ಅನುದಾನದ ಮೇಲಷ್ಟೇ ಅವಲಂಬಿತವಾಗದೇ ತಮ್ಮ ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳಲು ಪ್ರೋತ್ಸಾಹಿಸುವುದು.
- ಗ್ರಾಮ ಪಂಚಾಯಿತಿಯ ಎಲ್ಲಾ ಚಟುವಟಿಕೆಗಳನ್ನೂ ಗಣಕೀಕರಣಗೊಳಿಸುವುದು ಮತ್ತು ಅಂಕಿ ಅಂಶ ಚಲಾವಣೆಯಿಂದ ನಡೆಯುವ ಆಡಳಿತವನ್ನು ಪ್ರೋತ್ಸಾಹಿಸುವುದು.
- ಗ್ರಾಮ ಪಂಚಾಯಿತಿ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಎಲ್ಲಾ ಗ್ರಾಮಗಳಿಂದಲೂ ವರ್ಷಕ್ಕೊಮ್ಮೆ ಪ್ರತಿಕ್ರಿಯಾ ಸಮೀಕ್ಷೆ ನಡೆಸುವುದು ಗ್ರಾಮ ಪಂಚಾಯಿತಿಗಳು ಸ್ಥಳೀಯವಾಗಿ ಲಭ್ಯವಿರುವ ಉತ್ಪನ್ನಗಳನ್ನು ಬಳಸಿ ಹೊಸ ವ್ಯವಹಾರಿಕ ಕಲ್ಪನೆಗಳನ್ನು

ಕಂಡುಕೊಳ್ಳುವುದನ್ನು ಪ್ರೋತ್ಸಾಹಿಸುವುದು.

- ಗ್ರಾಮ ಪಂಚಾಯಿತಿಗಳು ಗ್ರಾಮೀಣ ಮೂಲಸೌಕರ್ಯಗಳನ್ನು ಸಮುದಾಯದೊಂದಿಗೆ ನಿರ್ವಹಣೆ ಮಾಡುವುದನ್ನು ಪ್ರೋತ್ಸಾಹಿಸುವುದು.
- ಎಲ್ಲಾ ಸಾರ್ವಜನಿಕ ಸೇವೆಗಳ ಮಾಹಿತಿಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ಏಕೀಕರಿಸುವುದು ಮತ್ತು ಇವುಗಳನ್ನು ಎಲ್ಇಡಿ ಪ್ರದರ್ಶನಗಳ ಮೂಲಕ ಪ್ರದರ್ಶಿಸುವುದು. ಇದಕ್ಕಾಗಿ ಸೌರ ವಿದ್ಯುತ್ ಬಳಸುವುದು.
- ಒಂದು ಗ್ರಾಮಕ್ಕೆ ಒಂದರಂತೆ ಒಂದು ಗ್ರಾಮ ಅಭಿವೃದ್ಧಿ ಸಮಿತಿಯನ್ನು ರಚಿಸುವುದು ಇದು ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ಕ್ಷೇತ್ರಗಳಲ್ಲು ಕಾರ್ಯನಿರ್ವಹಿಸುತ್ತದೆ – ಆರೋಗ್ಯ, ನೈರ್ಮಲ್ಯ, ಶಿಕ್ಷಣ, ಮೂಲಸೌಕರ್ಯ, ಪರಿಸರ ಇತ್ಯಾದಿಗಳು.
- ಪ್ರಾದೇಶಿಕ ದೃಷ್ಟಿಕೋನದಿಂದ ಎಲ್ಲಾ ಜಿಲ್ಲಾ ಮಟ್ಟದ ಪರಿಶೀಲನೆಗಳ ಮೇಲೆ ಗಮನಹರಿಸುವುದು.
- ಸಾರ್ವಜನಿಕ ಖರ್ಚುಗಳನ್ನು ಪತ್ತೆಹಚ್ಚುವ ಸಮೀಕ್ಷೆಗಳನ್ನು (ಪಿಇಟಿಎಸ್) ಬಳಸುವುದು ಮತ್ತು ಸಾಮಾಜಿಕ ಉತ್ತರದಾಯಿತ್ವಕ್ಕೆ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲೂ ಈ ಮಾಹಿತಿಯನ್ನು ಸಾರ್ವಜನಿಕವಾಗಿ ಪ್ರದರ್ಶಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.
- ಭೂಮಿ ದಾಖಲೆ ಸಂಗ್ರಹಣೆಗಾಗಿ ವಿವಿಧ ದೇಶಗಳಲ್ಲಿ ಬಳಕೆ ಮಾಡಿಕೊಳ್ಳುತ್ತಿರುವ ಬ್ಲಾಕ್ ಚೈನ್ ಆಧಾರಿತ ವೇದಿಕೆಗಳನ್ನು ಅನ್ವಯಿಸುವುದು ಮತ್ತು ಅದನ್ನು ಕರ್ನಾಟಕದಲ್ಲಿ ಪ್ರಾರಂಭಿಸಬಹುದಾಗಿದೆ.

**ಕೃಷಿಯಲ್ಲಿ ನಾವೀನ್ಯತೆಯನ್ನು ತರುವುದು ಹಾಗೂ**

- ಕರಾವಳಿ ಪ್ರದೇಶಗಳಂತಹ ಮೀನುಗಾರಿಕೆ ಪ್ರದೇಶಗಳಲ್ಲಿ ವೈವಿಧ್ಯಪೂರ್ಣ ಕೃಷಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು
- ಮೀನು ಮತ್ತು ಮೀನು ಆಧಾರಿತ ಉತ್ಪನ್ನಗಳನ್ನು ಸಂಗ್ರಹಿಸಲು ಶೈತ್ಯಾಗಾರಗಳನ್ನು ಸ್ಥಾಪನೆ ಮಾಡುವುದು.
- ವ್ಯಾಪಕ ಸಾರ್ವಜನಿಕ ಹೂಡಿಕೆಯ ಮೂಲಕ ಸಣ್ಣ ಕೃಷಿಯನ್ನು ಕಾರ್ಯಸಾಧ್ಯಗೊಳಿಸುವುದು ಮೂಲಭೂತ ಮತ್ತು ಸಾಮಾಜಿಕ ಮೂಲಸೌಕರ್ಯಗಳಲ್ಲಿ ಹೂಡಿಕೆ ಮತ್ತು ಹೊಸ ಸಂಸ್ಥೆಗಳಾದ ರೈತರ ಗುಂಪುಗಳನ್ನು ಪ್ರಾರಂಭಿಸುವುದು ಇದರಿಂದ ಕೃಷಿಯ ವೆಚ್ಚ ಕಡಿಮೆಯಾಗುತ್ತದೆ ಮತ್ತು ಹೆಚ್ಚು ಮಾರಾಟದ ಹೆಚ್ಚುವರಿಗಳಿಗೆ ಕೊಡುಗೆಯನ್ನು ನೀಡುತ್ತದೆ.
- ಸಮುದಾಯ ಆಧಾರಿತ ಕೃಷಿಯನ್ನು ಪ್ರೋತ್ಸಾಹಿಸುವುದು (ಸಿಎಸ್ಎ) – ಇದು ವಿಶ್ವದ ಅನೇಕ ಭಾಗಗಳಲ್ಲಿ ಯಶಸ್ವಿಯಾಗಿರುವ ಒಂದು ಅನನ್ಯವಾದ ವಿಧಾನವಾಗಿದೆ. ಸಂಸ್ಥೆಯ ವಿನ್ಯಾಸದಲ್ಲಿ ಕೊಳ್ಳುವವರು ಇರುತ್ತಾರೆ ಇವರು ಕೃಷಿಯಲ್ಲಿ ಹಣ ಹೂಡಿಕೆ ಮಾಡುತ್ತಾರೆ ಮತ್ತು ಅಂತಿಮವಾಗಿ ತಾವು ಹೂಡಿಕೆ ಮಾಡಿದ ಹಣಕ್ಕೆ ಕೃಷಿಯ ಲಾಭವನ್ನು ಪಡೆಯುತ್ತಾರೆ.
- ಮಾರುಕಟ್ಟೆ ಮತ್ತು ಹವಾಮಾನಗಳ ನಿಖರವಾದ ಮಾಹಿತಿಗಳನ್ನು ಒದಗಿಸಲು ತಾಂತ್ರಿಕತೆಯನ್ನು ಹೆಚ್ಚಿಸುವುದು.
- ಕೃಷಿ ಭೂಮಿಯಲ್ಲಿ ಸರಣಿ ಕಾರ್ಯಗಳಾದ ಮಣ್ಣು ಮತ್ತು ಜಮೀನಿನ ವಿಶ್ಲೇಷಣೆ, ನಾಟಿ, ಬೆಳೆಗಳಿಗೆ ಸಿಂಪರಣೆ, ಬೆಳೆಯ ಮೇಲ್ವಿಚಾರಣೆ ಮತ್ತು ಬೆಳೆಗಳ ಅರೋಗ್ಯದ ವಿವರಗಳನ್ನು ಪಡೆದುಕೊಳ್ಳಲು ಕೃಷಿಯಲ್ಲಿ ಡ್ರೋನ್ ನಂತಹ ತಂತ್ರಜ್ಞಾನವನ್ನು ಬಳಸುವುದು.

**ಗ್ರಾಮೀಣ ಆರ್ಥಿಕತೆಯನ್ನು ಬಲಗೊಳಿಸುವುದು ಮತ್ತು**

- ತಾಲ್ಲೋಕು ಪಂಚಾಯಿತಿ/ಗ್ರಾಮ ಪಂಚಾಯಿತಿಗಳಿಗೆ ಮುಂಗಡ ಪತ್ರದಲ್ಲಿ ಅನುದಾನವನ್ನು ಹೆಚ್ಚಿಸುವುದು.
- ಸಾಹಸೋದ್ಯಮ ಬಂಡವಾಳದ ಮೂಲಕ ಸ್ವಸಹಾಯ ಗುಂಪುಗಳಲ್ಲಿ (ಎಸ್‌ಹೆಚ್‌ಜಿ) ಹೂಡಿಕೆಯನ್ನು ಪ್ರೋತ್ಸಾಹಿಸುವುದು. ಬಂಡವಾಳವನ್ನು ಬಳಸಿಕೊಂಡು ಗ್ರಾಮೀಣ ಮಹಿಳೆಯರಿಂದ ನಡೆಸಲ್ಪಡುವ ಉದ್ಯಮಗಳನ್ನು ಸ್ಥಾಪನೆ ಮಾಡಬಹುದು.
- ಖಾಸಗಿ ಸಂಸ್ಥೆಗಳು ಸರ್ಕಾರಿ ಬೆಂಬಲಿತ ಸಾಮಾಜಿಕ ಉದ್ಯಮಗಳ ಹೂಡಿಕೆಗಳ (ಸಮುದಾಯ ಆರ್ಥಿಕ ಘಟಕಗಳು) ಸಾಮಾಜಿಕ ಸಾಹಸೋದ್ಯಮದ ಬಂಡವಾಳದ ಅವಕಾಶವನ್ನು ಬಳಸಿಕೊಳ್ಳಬಹುದು.
- ಗ್ರಾಮ ಪಂಚಾಯಿತಿಗಳು ಮತ್ತು ಸಿಬಿಓಗಳ ಮೂಲಕ ಸಮುದಾಯವನ್ನು ತಲುಪುವ ಸವಾಲು ನಿಧಿಯನ್ನು ಸ್ಥಾಪಿಸುವುದು. ಸವಾಲು ನಿಧಿಯು ಷರತ್ತುಬದ್ಧವಾಗಿರುತ್ತದೆ. ಏನೆಂದರೆ ಅದನ್ನು ಗ್ರಾಮೀಣ ಪ್ರದೇಶದಲ್ಲಿನ ಜನರನ್ನು ಗ್ರಾಮೀಣ ಪ್ರದೇಶದಲ್ಲಿಯೇ ನೇಮಕ ಮಾಡಬೇಕು. ಸಿಬಿಓಗಳು ಮತ್ತು ಗ್ರಾಮ ಪಂಚಾಯಿತಿಗಳು ಇದಕ್ಕಾಗಿ ಪ್ರಸ್ತಾವನೆಗಳನ್ನು ಸಲ್ಲಿಸಬಹುದು.
- ಬ್ಯಾಂಕುಗಳಿಲ್ಲದ ಗ್ರಾಮಗಳಿಗೆ ಬ್ರಿಕ್ ಮತ್ತು ಮಾರ್ಟರ್ ಶಾಖೆಗಳು, ಸಂಚಾರಿ ಶಾಖೆಗಳು (ಸಂಚಾರಿ ಎಟಿಎಮ್‌ಸೇರಿ) ಮತ್ತು ಬ್ಯಾಂಕ್ ಪ್ರತಿನಿಧಿಗಳ ಮೂಲಕ ಬ್ಯಾಂಕಿನ ಸೇವೆಗಳನ್ನು ಒದಗಿಸುವುದು.

ಕೌಶಲ್ಯ

# ವೇಗವರ್ಧಿತ ಪ್ರಗತಿಗೆ ಕೌಶಲ್ಯಗಳನ್ನು ಸಜ್ಜುಗೊಳಿಸುವುದು

ಕಾಂಗ್ರೆಸ್ ಪೂರಕ ವಾತಾವರಣವನ್ನು ನಿರ್ಮಿಸಿ ಅಂತರ್ ರಾಷ್ಟ್ರೀಯವಾಗಿ ಸ್ವೀಕಾರಾರ್ಹ ಕೌಶಲ್ಯಗಳನ್ನು ಯೋಗ್ಯ ಉದ್ಯೋಗ ಪಡೆಯಲು ಮತ್ತು ಎಲ್ಲಾ ನಾಗರೀಕರೂ ಸುಸ್ಥಿರ ಜೀವನೋಪಾಯ ಕಂಡುಕೊಳ್ಳಲು ಆಮೂಲಕ ಗರಿಷ್ಟ ಜನಸಂಖ್ಯಾ ಡಿವಿಡೆಂಡ್ ಪಡೆದುಕೊಳ್ಳಲು ಅನುವು ಮಾಡಿಕೊಡುವಂತೆ ಮಾಡುವುದು.

## ನಮ್ಮ ಪ್ರಮುಖ ಸಾಧನೆಗಳು

- ರಾಜ್ಯವನ್ನು ಸೀಮೆ ಎಣ್ಣೆ ಮುಕ್ತ ರಾಜ್ಯವಾಗಿಸಲು ಬಡ ಕುಟುಂಬಗಳಿಗೆ ಅಡುಗೆ ಅನಿಲ ಸಂಪರ್ಕವನ್ನು ಉಚಿತವಾಗಿ ಒದಗಿಸಲಾಗುತ್ತಿದೆ.
- ಕೌಶಲ್ಯಾಭಿವೃದ್ಧಿ ಸಚಿವಾಲಯ ಸ್ಥಾಪನೆ
- ಬೃಹತ್ ಹಾಗೂ ವೈವಿಧ್ಯ ಕೈಗಾರಿಕಾ ಮತ್ತು ಬ್ಯುಸಿನೆಸ್ ವಲಯಗಳಿಗೆ ಕೌಶಲ್ಯಯುತ ಕಾರ್ಮಿಕ ಬಲ ಒದಗಿಸಲು ಕೌಶಲ್ಯ ನೀತಿಯನ್ನು ಅಂತಿಮಗೊಳಸಲಾಗಿದೆ.

## ನಮ್ಮ ಪ್ರಮುಖ ಉಪಕ್ರಮಗಳು

ಮುಂದಿನ 5 ವರ್ಷಗಳಲ್ಲಿ, ನಾವು ಉದ್ಯೋಗಾರ್ಹತೆಯ ವೃತ್ತಿಪರರನ್ನು 1,2 ಮತ್ತು 3 ನೇ ಶ್ರೇಣಿಯ ನಗರಗಳಲ್ಲಿ ಮುಕ್ತಾಯಗೊಳಸುವ ಶಾಲೆ, ಸಂಪರ್ಕ ತರಗತಿ ಮತ್ತು ಇತರೆ ಕೌಶಲ್ಯಾಭಿವೃದ್ಧಿ ಕಾರ್ಯಾಗಾರಗಳನ್ನು ವಿವಿಧ ಸಚಿವಾಲಯಗಳಾದ್ಯಂತ ಸಮನ್ವಯತೆಯ ಪ್ರಯತ್ನಗಳನ್ನು ಬಳಸಿ ಹೆಚ್ಚಿಸುತ್ತೇವೆ.

- ಪದವೀಧರರು ತಮ್ಮ ಉದ್ಯೋಗಾರ್ಹತೆಯನ್ನು ಉತ್ತಮಪಡಿಸಿಕೊಳ್ಳಲು ಮತ್ತು ಸಮಾಜಕ್ಕೆ ಯುವಕರ ಕೊಡುಗೆಯನ್ನು ಆಕರ್ಷಿಸಲು ಸರ್ಕಾರಿ ಮತ್ತು ಖಾಸಗಿ ಯೋಜನೆಗಳ ಆಂತರಿಕ ಕಲಿಕೆಯನ್ನು ನೀಡುತ್ತೇವೆ. ಅಭಿವೃದ್ಧಿ ಯೋಜನೆಗಳ ಈ ಆಂತರಿಕ ಕಲಿಕೆಗಳು ಹೊಸ ಕಲ್ಪನೆ ಮತ್ತು ಶಕ್ತಿಯನ್ನು ತಂದುಕೊಡುತ್ತವೆ.
- ವಿಶ್ವ ಮಟ್ಟದ ಉದ್ಯೋಗ ಮೇಳಗಳು ಸ್ಥಳೀಯವಾಗಿ ಲಭ್ಯವಿರುವ ಉದ್ಯೋಗಗಳನ್ನು ಖಚಿತಪಡಿಸುತ್ತವೆ ಮತ್ತು ತಕ್ಷಣವೇ ಸ್ಥಳೀಯವಾದ ಅರ್ಹ ಅಭ್ಯರ್ಥಿಗಳನ್ನು ತುಂಬಿಕೊಳ್ಳುತ್ತವೆ.

**ಕುಶಲ ಕರ್ಮಿಗಳು ಮತ್ತು ಕರಕುಶಲ ಕೆಲಸಗಾರರಿಗೆ ಕೌಶಲ್ಯಾಭಿವೃದ್ಧಿ ಅವಕಾಶಗಳನ್ನು ಒದಗಿಸುವುದು ಸಮಾಜದ ಕೆಳಹಂತಕ್ಕೂ ತಲುಪುವಂತೆ ಸಮರ್ಪಕ ಜಾಲದೊಂದಿಗೆ ಕೌಶಲ್ಯ ವಿಶ್ವವಿದ್ಯಾಲಯ ಸ್ಥಾಪಿಸುವುದು.**

- ಕುಶಲ ಕರ್ಮಿಗಳಿಗೆ ಅವರಿಗೆ ಸಂಬಂಧಿಸಿದ ವೃತ್ತಿಗಳಲ್ಲಿ ಕೌಶಲಾಭಿವೃದ್ಧಿ ಕೋರ್ಸ್‌ಗಳನ್ನು ಸ್ಥಾಪಿಸುವುದು (ಕುಶಲ ಕರ್ಮಿಗಳು ಮತ್ತು ಕರಕುಶಲ ಕೆಲಸಗಾರರು ತಮ್ಮ ಕೌಶಲ್ಯವನ್ನು ಉತ್ತಮಪಡಿಸಿಕೊಳ್ಳಲು ಮತ್ತು ಇತ್ತೀಚಿನ ತಾಂತ್ರಿಕ ಯಂತ್ರಗಳಿಂದ ಗುಣಮಟ್ಟದ ಉತ್ಪನ್ನಗಳನ್ನು ಉತ್ಪಾದಿಸಲು ವಿಸ್ತೃತವಾದ ತರಬೇತಿಯನ್ನು ನೀಡಲಾಗುವುದು)
- ಗ್ರಾಮೀಣ ಯುವಕರಿಗೆ ಬಡ್ಡಿ ರಹಿತ ಸಾಲದ ಅವಕಾಶಗಳು ಮತ್ತು ಕುಶಲಕರ್ಮಿಗಳು ಸ್ವಯಂ ಉದ್ಯೋಗವನ್ನು ಪ್ರಾರಂಭಿಸಲು ಪ್ರೋತ್ಸಾಹ.
- ಸಂಬಂಧಿಸಿದ ಕರಕುಶಲ ವಸ್ತುವಿನ ದರ ನಿಗಧಿಗಾಗಿ ಪರಿಣಿತರ ಸಮಿತಿಯ ರಚನೆ.
- ಮಾರಾಟಕ್ಕಾಗಿ ಸಹಕಾರ ಸಂಘಗಳನ್ನು ರಚಿಸುವುದು.

- ಕೃತಕ ಬೌದ್ಧಿಕತೆ, ಯಂತ್ರಗಳ ಕಲಿಕೆ, ಜಾಗತಿಕ ಅರ್ಥಿಕತೆ, ಆಟೋಮೋಟಿವ್, ಪರಿಸರ ತಾಂತ್ರಿಕತೆ ಮತ್ತು ಬ್ಯಾಂಕಿಂಗ್‌ನಂತಹ ಕ್ಷೇತ್ರಗಳಲ್ಲಿ ಸರ್ಟಿಫೈಡ್ ಕೋರ್ಸ್‌ಗಳು.
- ಸರ್ಕಾರಿ ಸಿಬ್ಬಂದಿಯ ಸಾಮರ್ಥ್ಯ ಮತ್ತು ಪ್ರತಿಕ್ರಿಯೆಗಳಲ್ಲಿ ಅವರ ಕೌಶಲ್ಯಗಳನ್ನು ಮೇಲ್ದರ್ಜೆಗೇರಿಸಲು ಪ್ರೋತ್ಸಾಹಕಾರಿ ಯೋಜನೆಗಳು.
- ನಾವು ಜಿಲ್ಲಾ ಮಟ್ಟದಲ್ಲಿ ಉಪ ಸಂಸ್ಥೆ ಮಾದರಿಯಲ್ಲಿ ವಿಶೇಷವಾದ ಮಾರಾಟ ಮಳಿಗೆಗಳನ್ನು ಸ್ಥಾಪನೆ ಮಾಡುತ್ತೇವೆ.
- ರಫ್ತು ಪ್ರೋತ್ಸಾಹಕ ಕೇಂದ್ರಗಳನ್ನು ಪ್ರಾದೇಶಿಕ ಮಟ್ಟದಲ್ಲಿ ಅಥವಾ ಸೂಕ್ತ ಏಜೆನ್ಸಿ (ಸಂಸ್ಥೆಗಳು) ಸ್ಥಾಪನೆ ಮಾಡಿ ಸಮರ್ಥ ವಿದೇಶೀ ಮಾರುಕಟ್ಟೆ ಬೆಂಬಲವನ್ನು ನೀಡುತ್ತೇವೆ.
- ವಿವಿಧ ವ್ಯಾಪಾರವನ್ನು ಒಳಗೊಂಡ RUDSET ಗಳನ್ನು ತಾಲ್ಲೂಕು ಮಟ್ಟದಲ್ಲಿ ಸ್ಥಾಪಿಸುವುದು.
- ಕೌಶಲ್ಯಗಳನ್ನು ಮೇಲ್ದರ್ಜೆಗೇರಿಸಲು ಐಟಿಐಗಳನ್ನು ಸಬಲೀಕರಿಸುವುದು ಸಶಕ್ತಗೊಳಿಸುವುದು.

**ಯುವಜನತೆ ಮತ್ತು ಉದ್ಯೋಗ**

ಕರ್ನಾಟಕವು ಆಸಕ್ತಿಕರ ಅನುಕೂಲತೆಗಳನ್ನು ಹೊಂದಿದ್ದು – ಸ್ಥಳೀಯವಾಗಿ ಆರ್ಥಿಕವಾಗಿ ಕ್ರಿಯಾಶೀಲರಾಗಿರುವವರಲ್ಲಿ 15ರಿಂದ59 ವರ್ಷಗಳವರೆಗಿನ 65.9% ರಷ್ಟು ಜನರಿದ್ದಾರೆ, ರಾಷ್ಟ್ರೀಯ ಸರಾಸರಿ 62.5% ಕ್ಕಿಂತ ಹೆಚ್ಚು. ನಮ್ಮ ಒಟ್ಟು ಜನಸಂಖ್ಯೆ 6.1 ಕೋಟಿಗಳಲ್ಲಿ – ಯುವ ಜನರ ಸಂಖ್ಯೆ– 15–24 ವರ್ಷದೊಳಗಿನವರು 1.18 ಕೋಟಿಗಳಷ್ಟಿದ್ದಾರೆ. ಇದು ವೇಗವಾದ ಆರ್ಥಿಕ ಬೆಳವಣಿಗೆಯ ಮೂಲಕ ಅನುಕೂಲಕರ ಜನಸಂಖ್ಯಾ ಡಿವಿಡೆಂಡ್ ಸಾಧಿಸುವ ಅವಕಾಶವನ್ನು ಪ್ರತಿನಿಧಿಸುತ್ತದೆ.

- ನಾವು ವಾರ್ಷಿಕ ಕನಿಷ್ಟ 10–15 ಲಕ್ಷ ಉದ್ಯೋಗಗಳನ್ನು ಸೃಜಿಸುವ ಗುರಿಯನ್ನು ಹೊಂದಿದ್ದೇವೆ ಕರ್ನಾಟಕದಲ್ಲಿ ಯುವ ಸಬಲೀಕರಣಕ್ಕಾಗಿ ಕಾರ್ಯಕ್ರಮಗಳು.
- ಕೌಶಲ್ಯ ಕರ್ನಾಟಕ – ಕೌಶಲ್ಯಾಭಿವೃದ್ಧಿ ಒದಗಿಸುವುದು – ಮಾಹಿತಿ ಮತ್ತು ತಿಳುವಳಿಕೆ ನೀಡುವುದು ಮತ್ತು ಯುವಕರಲ್ಲಿ ಕೌಶಲ್ಯಾಕಾಂಕ್ಷೆಯನ್ನು ಪ್ರೋತ್ಸಾಹಿಸುವುದು ಮತ್ತು ಉಪಯೋಗಿಸಿಕೊಳ್ಳುವುದು.
- ಅಂತರ್‌ಪ್ರೇರಣಾ – ಉದ್ಯಮಶೀಲತಾ ಉತ್ಸಾಹವನ್ನು ಅಭಿವೃದ್ಧಿಪಡಿಸುವುದು – ಯುವಕರಿಗೆ ಉದ್ಯಮಶೀಲತಾ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಗುಡಿಕೈಗಾರಿಕೆ ಮತ್ತು ಸಣ್ಣ ಉದ್ಯಮಗಳಲ್ಲಿ ಕ್ಲಸ್ಟರ್ ಅಭಿವೃದ್ಧಿ ಯೋಜನೆಯ ಮೂಲಕ ಅವರದ್ದೇ ಆದ ವ್ಯವಹಾರದ ಉದ್ಯಮವನ್ನು ಸ್ಥಾಪಿಸುವುದು.
- ಪ್ರಯುಕ್ತೆ – ಅವರ ಉದ್ಯೋಗಾರ್ಹತೆ ಸಾಮರ್ಥ್ಯವನ್ನು ಹೆಚ್ಚಿಸುವುದು – ಉದ್ಯೋಗ ಮಾರ್ಗದರ್ಶನಗಳನ್ನು ನೀಡುವುದು, ಅವರ ಸ್ವಂತ ನಗರದಲ್ಲಿ ಉದ್ಯೋಗಾವಕಾಶ ಕಲ್ಪಿಸಿಕೊಡುವುದು ಮತ್ತು ಉದ್ಯೋಗಾರ್ಹತೆಯನ್ನು ಹೆಚ್ಚಿಸುವುದು, ಉನ್ನತ ಶಿಕ್ಷಣ ಪಡೆದುಕೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ 2 ಮತ್ತು 3 ನೇ ಶ್ರೇಣಿಯ ನಗರ ಮತ್ತು ಪಟ್ಟಣಗಳಲ್ಲಿ ಈ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
- ನಾವು ಗ್ರಾಮೀಣಾಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಗಳನ್ನು (ರುಡ್‌ಸೆಟ್) ಪ್ರತಿ ತಾಲ್ಲೂಕುಗಳಲ್ಲಿ ಪ್ರಾರಂಭಿಸುತ್ತೇವೆ, ಸದ್ಯದಲ್ಲಿ ಜಿಲ್ಲೆಗೆ ಒಚಿದಿದೆ.
- ನಾವು ಕೌಶಲ್ಯಾಭಿವೃದ್ಧಿಯಲ್ಲಿ ಪರಿಣಿತ ತರಬೇತುದಾರರನ್ನು ತರಬೇತುಗೊಳಿಸಲು ಕೇಂದ್ರಗಳನ್ನು ತೆರೆಯುತ್ತೇವೆ ಅವು ಮೋಕ್ಷಗುಂಡಂ ಸರ್ ಎಮ್ ವಿಶ್ವೇಶ್ವರಯ್ಯ ಕೇಂದ್ರಗಳಂತೆಯೇ ಇರುತ್ತವೆ ಇವು ಕೌಶಲ್ಯಾಭಿವೃದ್ಧಿಯಲ್ಲಿ ಪರಿಣಿತ ತರಬೇತುದಾರರನ್ನು ತರಬೇತಗೊಳಿಸುತ್ತವೆ.

**ವೃತ್ತಿಪರ ಕೆಲಸಗಾರರು**

- ವೃತ್ತಿಪರ ತೆರಿಗೆಯಲ್ಲಿ ಇಳಿಕೆ :– ನಮ್ಮ ಸರ್ಕಾರವು ವೃತ್ತಿ ತೆರಿಗೆಯನ್ನು ಕಡಿಮೆ ಮಾಡುತ್ತದೆ. ಇದರಿಂದ ಕೇಂದ್ರ ಸರ್ಕಾರವು ರಾಜ್ಯದ ತೆರಿಗೆದಾರ ವೃತ್ತಿಪರರಿಗೆ ವಿಧಿಸಿರುವ ಹೊರೆ ಕಡಿಮೆಯಾಗುತ್ತದೆ.

**ಬಲಿಷ್ಟ ಆಡಳಿತ ಮತ್ತು ಜಿಲ್ಲಾ ಮಟ್ಟ ಮತ್ತು ಉಪ ವಿಭಾಗ ಮಟ್ಟದಲ್ಲಿ ಅನುಷ್ಠಾನ ಯಾಂತ್ರಿಕತೆ.**

- ಕೌಶಲ್ಯ ಅಭಿಯಾನ ನಿಧಿಯನ್ನು ಸ್ಥಾಪಿಸುವುದು.
- ಕೆಎಸ್‌ಕ್ಯೂಎ ಪ್ರಾರಂಭ
- ಜೀವನೋಪಾಯ, ಉದ್ಯಮಶೀಲತೆ ಮತ್ತು ಸಾಮಾಜಿಕ ವ್ಯವಹಾರ ನೀತಿಗಳನ್ನು ಅಭಿವೃದ್ಧಿಪಡಿಸುವುದು
- ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗಕ್ಕಾಗಿ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸುವುದು.
- ವಲಸೆ ಕಾರ್ಮಿಕರ ಸಮೀಕ್ಷೆಯ ನಂತರ ವಲಸೆ ಕಾರ್ಮಿಕರನ್ನು ಅಂತಿಮಗೊಳಿಸುವ ನೀತಿ

**ಅಂಗವೈಕಲ್ಯವಿರುವ ವ್ಯಕ್ತಿಗಳಿಗೆ ತರಬೇತಿಗಾಗಿ ಕೌಶಲ್ಯಾಭಿವೃದ್ಧಿ ವ್ಯವಸ್ಥೆಯನ್ನು ಸೇರ್ಪಡೆ ಮಾಡಿಕೊಳ್ಳುವುದು.**

- ಐಇಸಿ ಲಭ್ಯತೆ ಮತ್ತು ಕೌಶಲ್ಯಾಭಿವೃದ್ಧಿಯು ಪಿಡಬ್ಲ್ಯೂಡಿಗಳನ್ನು ಪರಿಣಾಮಕಾರಿಯಾಗಿ ತಲುಪಲು ಸಂಪನ್ಮೂಲ ವಸ್ತುಗಳು
- ಪಿಡಬ್ಲ್ಯೂಡಿಗಳಿಗೆ ಎಲ್ಲಾ ತರಬೇತಿ ಸಂಪನ್ಮೂಲಗಳ (ದೈಹಿಕ ಮತ್ತು ಮಾನಸಿಕ) ಲಭ್ಯತೆಯನ್ನು

ಖಚಿತಪಡಿಸಿಕೊಳ್ಳುವುದು

- ರಾಜ್ಯ ಮಟ್ಟದಲ್ಲಿ ಪಿಡಬ್ಲ್ಯೂಡಿಗಳ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಲು, ಅನುಕೂಲಮಾಡಿಕೊಡಲು ಮತ್ತು ಕಾರ್ಯಕ್ರಮಗಳ ಮೇಲ್ವಿಚಾರಣೆಯನ್ನು ಖಚಿತಪಡಿಸಿಕೊಳ್ಳಲು ಒಂದು ವಿಶೇಷವಾದ ಕೋಶ ರಚನೆ.

- ಎಲ್ಲಾ ತರಬೇತಿ ಮೂಲಸೌಕರ್ಯಗಳು, ಈಗಿರುವ ಮತ್ತು ಹೊಸದಾದ, ಸರ್ಕಾರೀ ಮತ್ತು ಖಾಸಗಿಯವುಗಳ ಅಂಗವೈಕಲ್ಯತೆ ಇರುವ ಜನರನ್ನು ಮಾನದಂಡಗಳ ಆಧಾರದ ಮೇಲೆ ವ್ಯಕ್ತಿಯ ಹಕ್ಕುಗಳು ಅಂಗವೈಕಲ್ಯತೆ ಕಾಯಿದೆ 2016 ರಂತೆ ತಲುಪುವಂತಿರಬೇಕು.

ಸಾಮಾಜಿಕ ನ್ಯಾಯ

# ನಯವಾದ ಪ್ರಗತಿಗಾಗಿ ಸಮಾಜವನ್ನು ಬಲಪಡಿಸುವುದು

ನಮ್ಮ ಪಕ್ಷವು ಕರ್ನಾಟಕದ ಜನರಿಗೆ ಸೇವೆಯನ್ನು ಮಾಡುವಾಗ ತನ್ನ ದೃಢವಾದ ಕೆಲಸಗಳು ಮತ್ತು ಸಬಲೀಕರಣ ಮಾಡಬೇಕೆಂಬ ಉದ್ದೇಶಿತ ನಂಬಿಕೆಗಳಿಂದ ನಿರಂತರವಾಗಿ ಮುನ್ನುಗ್ಗುತ್ತಿದೆ : ಎಸ್‌ಸಿ, ಮತ್ತು ಜಾತಿಪದ್ಧತಿಯಿಂದ ದಮನಿತರಾದ ಇತರೆ ಜಾತಿಗಳು; ಎಸ್‌ಟಿಗಳು, ಬಿಸಿಗಳು, ಧಾರ್ಮಿಕ ಮತ್ತು ಜನಾಂಗೀಯ ಅಲ್ಪಸಂಖ್ಯಾತರು; ಹಿರಿಯ ನಾಗರೀಕರು, ಮಕ್ಕಳು ಮತ್ತು ಎಲ್ಲಾ ತಾರತಮ್ಯಗಳಿಂದ ದುರ್ಬಲರಾದ ಮಹಿಳೆಯರತ್ತ ಹೆಚ್ಚಿನ ಗಮನ ನೀಡಿದೆ.

## ನಮ್ಮ ಪ್ರಮುಖ ಸಾಧನೆಗಳು

- ಅನ್ನಭಾಗ್ಯ ಯೋಜನೆಯಡಿಯಲ್ಲಿ 3.5 ಕೋಟಿ ಜನರು ಅನುಕೂಲ ಪಡೆದುಕೊಂಡಿದ್ದಾರೆ. ಬಿಪಿಎಲ್ (ಬಡತನ ರೇಖೆಯಿಂದ ಕೆಳಗಿರುವವರ) ಕುಟುಂಬಗಳ 1 ಕೋಟಿಗೂ ಅಧಿಕ ಜನರಿಗೆ ಉಚಿತ ಆಹಾರ ಧಾನ್ಯಗಳನ್ನು ಒದಗಿಸಲಾಗಿದೆ.
- ಇಂದಿರಾ ಕ್ಯಾಂಟೀನ್ ಪ್ರಾರಂಭವು ಇತಿಹಾಸದಲ್ಲಿ ಒಂದು ಹೊಸ ಮೈಲಿಗಲ್ಲಾಗಿದೆ, ಇದು ಬಡಜನತೆಗೆ ಮಾಡಿರುವ ಮಹದುಪಕಾರವಾಗಿದೆ.
- ಹಿಂದುಳಿದ ವರ್ಗ ಮತ್ತು ಪಂಗಡದವರು (ಎಸ್‌ಸಿ/ಎಸ್‌ಟಿ) ಅಭಿವೃದ್ಧಿಗಾಗಿ 2013ರ ಉಪಯೋಜನೆ ಕಾಯಿದೆಯನ್ನು ಜಾರಿಗೆ ತರಲಾಗಿದೆ. ಅವರ ಜನಸಂಖ್ಯೆಯ ಆಧಾರದ ಮೇಲೆ, ಶೇಕಡಾ 24.10 ರಷ್ಟು ಮುಂಗಡ ಪತ್ರದಲ್ಲಿ ಹಣ ಕಾಯ್ದಿರಿಸಿರುವುದು ಅವರ ಕಲ್ಯಾಣದ ಹೆಗ್ಗುರುತಾಗಿದೆ. ಎಸ್‌ಸಿಪಿ/ಎಸ್‌ಟಿಪಿ ನಿಧಿಯನ್ನು ಬಳಸಿಕೊಳ್ಳಲು ವಿಶೇಷ ಕಾಯಿದೆಯನ್ನು ಜಾರಿಗೊಳಿಸಲಾಗಿದೆ.
- ರಾಜ್ಯವನ್ನು ಗುಡಿಸಲು ಮುಕ್ತ ರಾಜ್ಯವನ್ನಾಗಿಸಲು ಮತ್ತು ಎಲ್ಲರಿಗೂ ಸೂರನ್ನು ಒದಗಿಸಲು ಇದುವರೆಗೆ 11.75 ಲಕ್ಷ ಮನೆಗಳನ್ನು ನಿರ್ಮಿಸಲಾಗಿದೆ ಅಲ್ಲದೆ ಇನ್ನೂ 7 ಲಕ್ಷ ಮನೆಗಳನ್ನು ಈ ವರ್ಷಕ್ಕೆ ಮಂಜೂರು ಮಾಡಲಾಗಿದೆ.
- ಕರ್ನಾಟಕವು ಮುಂಗಡಪತ್ರದಲ್ಲಿ ಲಿಂಗ ಸಮಾನತೆ ಮತ್ತು ಲಿಂಗಾಧಾರಿತ ಆಯವ್ಯಯ ಮಂಡನೆ ಮಾಡಿರುವುದು ಒಂದು ಪ್ರಮುಖ ಹೆಜ್ಜೆಯಾಗಿದೆ.
- ಮುಸಲ್ಮಾನರು, ಬೌದ್ಧರು, ಜೈನರು, ಕ್ರಿಶ್ಚಿಯನ್ನರು, ಸಿಖ್ಖರು ಮತ್ತು ಪಾರ್ಸಿಗಳಂತಹ ಸಮುದಾಯದವರ ಏಳಿಗೆಯನ್ನು ಪ್ರೋತ್ಸಾಹಿಸುತ್ತಿದೆ. ಇತರೆ ಸಮುದಾಯಗಳಿಗೆ ಸಮನಾಗಿ ಸರ್ಕಾರವು ವಿವಿಧ ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸಿದೆ.
- ಯುಪಿಎ ಸರ್ಕಾರವು ಹೈದರಾಬಾದ್ ಕರ್ನಾಟಕ ಪ್ರದೇಶದ ಆರು ಹಿಂದುಳಿದ ಜಿಲ್ಲೆಗಳಿಗೆ ವಿಶೇಷ ಅನುದಾನವನ್ನು ನೀಡಿದೆ. ರಾಜ್ಯ ಸರ್ಕಾರವು ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಲು ಕ್ರಿಯಾ ಯೋಜನೆಯನ್ನು ಅನುಮೋದಿಸಿದೆ, ಅಗತ್ಯ ಅನುದಾನವನ್ನು ಒದಗಿಸಲಾಗಿದೆ.
- ಎಸ್‌ಎಚ್‌ಜಿ ಗಳಿಗೆ ನೀಡುವ ಸುತ್ತು ನಿಧಿಯನ್ನು 25,000 ರೂಗಳಿಂದ 50,000 ರೂಗಳಿಗೆ ಹೆಚ್ಚಿಸಲಾಗಿದೆ.

## ನಮ್ಮ ಪ್ರಮುಖ ಉಪಕ್ರಮಗಳು

- ಅಲ್ಪಸಂಖ್ಯಾತ ಸಮುದಾಯ, ಬಹು-ಜನಾಂಗೀಯ, ಬಹು-ಸಾಂಸ್ಕೃತಿಕ, ಬಹುಭಾಷೀಯ ಮತ್ತು ಬಹುಧರ್ಮೀಯ ಲಕ್ಷಣಗಳನ್ನುಳ್ಳ ರಾಜ್ಯವಾಗಿದ್ದು ಇವುಗಳನ್ನು ಸಬಲೀಕರಿಸಲು ನಾವು ಈ ಕೆಳಗಿನವುಗಳ ಮೇಲೆ ಗಮನಹರಿಸಿದ್ದೇವೆ.
- ಎಲ್ಲಾ ಎಸ್‌ಸಿ/ಎಸ್‌ಟಿ ಪದವೀಧರರ ಕೌಶಲ್ಯಾಭಿವೃದ್ಧಿ ಮಾಡಿದ್ದು ಕೈಗಾರಿಕೆಗಳು ಮತ್ತು ಸೇವಾ ಕ್ಷೇತ್ರಗಳಲ್ಲಿ

ಅವರ ಉದ್ಯೋಗಾರ್ಹತೆಯನ್ನು ಹೆಚ್ಚಿಸಲಾಗಿದೆ.

- ಎಸ್‌ಸಿ/ಎಸ್‌ಟಿಗಳಲ್ಲಿ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸಲು ಸಾಲ ಸೌಲಭ್ಯಗಳನ್ನು ಒದಗಿಸಲಾಗಿದೆ.
- ಸಫಾಯಿ ಕರ್ಮಚಾರಿಗಳನ್ನು ಖಾಯಂ ಮಾಡಿಕೊಂಡು ವೇತನವನ್ನು ಅವರ-ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗುತ್ತಿದ್ದು ಮುನ್ಸಿಪಲ್ ಕಾರ್ಪೋರೇಷನ್‌ಗಳು ಸಾಮಾಜಿಕ ಭದ್ರತಾ ಯೋಜನೆಗಳಾದ ವೇತನ ಹೆಚ್ಚಳ, ಅಪಾಯ ಭತ್ಯೆ, ಉಚಿತ ಆರೋಗ್ಯ ವಿಮೆ, ವಸತಿ, ಸಫಾಯಿ ಕರ್ಮಚಾರಿಗಳಿಗಾಗಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಇತ್ಯಾದಿಗಳನ್ನು ನೀಡುತ್ತಿವೆ.
- ಮಲ ಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿಷಿದ್ಧಗೊಳಿಸುವುದು.
- ಸಫಾಯಿ ಕರ್ಮಚಾರಿ, ಹಾಗೂ ಸ್ಮಶಾನ ಅಗೆಯುವವರಿಗೆ ಶೇ 10 ರಷ್ಟು  ಮನೆಗಳನ್ನು ಮೀಸಲಾಗಿಸುವುದು.
- ನಾವು ಪ್ರತಿ ವರ್ಷ ಎಲ್ಲಾ ಜಿಲ್ಲೆಗಳಿಂದಲೂ 100 ಎಸ್‌ಸಿ/ಎಸ್‌ಟಿ ಉದ್ಯಮಶೀಲರಿಗೆ ಬೆಂಬಲ ನೀಡುತ್ತಿದ್ದೇವೆ.
- ಗುಡಿ ಕೈಗಾರಿಕೆಗಳಿಗೆ ಕಡಿಮೆ ಬೆಲೆಯಲ್ಲಿ ಕಚ್ಚಾ ವಸ್ತುಗಳನ್ನು ಒದಗಿಸಿ ಅವರ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ರಕ್ಷಿಸುವುದು.
- ಕುಶಲ ಕರ್ಮಿಗಳಿಗೆ ಸುಧಾರಿತ ಹೊಸ ತಾಂತ್ರಿಕತೆಗಳ ಗ್ಯಾಜೆಟ್‌ಗಳಿಂದ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ನೀಡುವುದು.
- ಕುಶಲಕರ್ಮಿಗಳ ಉತ್ಪನ್ನಗಳಿಗೆ ರಾಷ್ಟ್ರ ಮತ್ತು ಅಂತರ್ ರಾಷ್ಟ್ರ ಮಟ್ಟದಲ್ಲಿ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವುದು ಮತ್ತು ಅವರು ವಹಿವಾಟು ಮಾರುಕಟ್ಟೆ/ಪೇಟೆಂಟ್/ಭೌಗೋಳಿಕ ಸೂಚಕಗಳನ್ನು ಅವರ ಉತ್ಪನ್ನಗಳಿಗೆ (ಚನ್ನಪಟ್ಟಣ ಗೊಂಬೆಗಳು ಮತ್ತು ಮೈಸೂರು ರೇಷ್ಮೆ) ಪಡೆದುಕೊಳ್ಳಲು ಸಹಾಯ ಮಾಡುವುದು.
- 500 ಕುಶಕರ್ಮಿ ಉದ್ಯಮಗಳನ್ನು ಸ್ಥಾಪಿಸುವುದು.
- ಪ್ರತಿ ವರ್ಷ 1,000 ಕುಶಲಕರ್ಮಿಗಳ ಕೌಶಲ್ಯಾಭಿವೃದ್ಧಿ ಮಾಡುವುದು 2018 ರಿಂದ ಪ್ರಾರಂಭಿಸಿ 8,000 ಕುಶಲ ಕರ್ಮಿಗಳನ್ನು ಸೇರ್ಪಡೆ ಮಾಡಿಕೊಳ್ಳುವುದು.
- ಉದ್ಯಮಶೀಲತೆ ಅಭಿವೃದ್ಧಿಗಾಗಿ ಪ್ರತಿ ವರ್ಷವೂ 1,000 ಕುಶಲಕರ್ಮಿಗಳಿಗೆ ಪ್ರೋತ್ಸಾಹ ನೀಡುವುದು.
- ಕಾಂಗ್ರೆಸ್ ಒಂದು ಓಬಿಸಿ ನಿಗಮವನ್ನು ಸ್ಥಾಪಿಸಲಿದ್ದು ಇದು ಇತರ ಹಿಂದುಳಿದ ವರ್ಗಗಳ ಸಮಸ್ಯೆಗಳನ್ನು ಪರಿಹರಿಸಲಿದೆ.
- ನಮ್ಮ ಸರ್ಕಾರವು ನೇಕಾರ ಭವನ ಹಾಗೂ ವಿನ್ಯಾಸ ಭವನ ಮತ್ತು ಪ್ರತಿ ನೇಕಾರ ಕೇಂದ್ರಗಳಲ್ಲಿ ತರಬೇತಿ ಕೇಂದ್ರ ನಿರ್ಮಾಣಕ್ಕೆ ಧನ ಸಹಾಯ ನೀಡಲಿದೆ
- ನಾವು ರಾಜ್ಯದಲ್ಲಿನ ಓಬಿಸಿಗಳ ಕೌಶಲ್ಯಾಭಿವೃದ್ಧಿ ಮತ್ತು ತರಬೇತಿಗಾಗಿ ಮೊದಲ ಆಧ್ಯತೆ ನೀಡುತ್ತೇವೆ. ಸರ್ಕಾರವು ಕಿಯೋನಿಕ್ಸ್ ಇತ್ಯಾದಿಗಳನ್ನು ಸ್ಥಾಪಿಸಲಿದೆ.
- ಕಾಂಗ್ರೆಸ್ ಒಬಿಸಿ ಸಮುದಾಯದ ವಿದ್ಯಾರ್ಥಿಗಳ ಪ್ರವೇಶ ಶುಲ್ಕದ 75% ರಷ್ಟು ರಿಯಾಯಿತಿ ನೀಡಲಿದೆ.
- ನಾವು ಬಿಪಿಎಲ್ ಸ್ಲಾಬನ್ನು ರೂ.2,00,000/ಕ್ಕೆ ಹೆಚ್ಚಿಸಲಿದ್ದೇವೆ.
- ನಮ್ಮ ಸರ್ಕಾರವು ಪ್ರಾರಂಭಿಸಿರುವ ಕೇಂದ್ರಗಳಲ್ಲಿ ಒಬಿಸಿ ಮಹಿಳೆಯರನ್ನು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು ಮತ್ತು ತರಬೇತಿಯಲ್ಲಿ ಪರಿಗಣಿಸುವಾಗ ಪ್ರಥಮ ಆಧ್ಯತೆಯನ್ನು ನೀಡಲಾಗುತ್ತದೆ
- ಸೋಲಿಗ ಬುಡಕಟ್ಟು ಜನಾಂಗಕ್ಕೆ ಶೇ 100 ರಷ್ಟು ವಸತಿ ಒದಗಿಸುವುದು
- ಸೋಲಿಗ ಸಮುದಾಯದ ಹೆಣ್ಣುಮಕ್ಕಳಿಗೆ ನರ್ಸಿಂಗ್ ಮತ್ತು ಎಎನ್‌ಎಮ್ ತರಬೇತಿ ನೀಡುವುದು
- ಮೈಸೂರು ಕೇಂದ್ರಿತ ಆದಿವಾಸಿ ಸಂಶೋಧನಾ ಸಂಸ್ಥೆಯು ಆದಿವಾಸಿಗಳ ಕುರಿತಾದ ಸಂಶೋಧನೆ ಕೈಗೊಳ್ಳುವಂತೆ ಪ್ರೋತ್ಸಾಹಿಸುವುದು.
- ದ.ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕೊರಗ ಸಮುದಾಯದ ಯುವಕರ ನೇಮಕಾತಿಗೆ  ವಿಶೇಷ ಪ್ಯಾಕೇಜ್ ಮತ್ತು ಶೇ 100 ರಷ್ಟು ವಸತಿ ವ್ಯವಸ್ಥೆ
- ಸೋಲಿಗ ಸಮುದಾಯಕ್ಕೆ ಚಾಮರಾಜನಗರದಲ್ಲಿ ವಸತಿಯುತ ಶಾಲೆಗಳನ್ನು ನಿರ್ಮಿಸುವುದು.
- ಸಮಾಜದ ದಲಿತ ಮತ್ತು ಇತರೆ ದುರ್ಬಲ ವರ್ಗದ ಘನತೆಯನ್ನು ಕಾಪಾಡುವುದು ಸಮರ್ಪಕ ಮೂಲಸೌಕರ್ಯ ಮತ್ತು ನೆರವನ್ನು ಒದಗಿಸುವುದು.

**ಮಕ್ಕಳ ಅಭಿವೃದ್ಧಿ:**

- ನಾವು ಬದ್ಧರಾಗಿರುವುದೇನೆಂದರೆ  ಕರ್ನಾಟಕದಲ್ಲಿರುವ ಪ್ರತಿ ಮಗುವೂ ಗೌರವದ ವಾತಾವರಣದಲ್ಲಿ ಬದುಕಬೇಕು ಅದು ಯಾವುದೇ ರೀತಿಯ ತಾರತಮ್ಯತೆ ಮತ್ತು ಹಿಂಸೆಯಿಂದ ಮುಕ್ತವಾಗಿರಬೇಕು. ನಾವು ಪ್ರತಿ ಮಗುವಿನ ಹಕ್ಕುಗಳಾದ ಜೀವಿಸುವಿಕೆ, ಅಭಿವೃದ್ಧಿ, ರಕ್ಷಣೆ, ಮತ್ತು ಬಾಲ್ಯದಾದ್ಯಂತ ಭಾಗವಹಿಸುವಿಕೆಗಳನ್ನು ಸಂರಕ್ಷಿಸಲಾಗುತ್ತದೆ
- ವಿಕಲಚೇತನ ವ್ಯಕ್ತಿಗಳು : ನಮ್ಮ ಸರ್ಕಾರದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ವಿಕಲ ಚೇತನ ವ್ಯಕ್ತಿಗಳಿಗೆ ವಿಶೇಷ ಗಮನ ಹರಿಸಿದ್ದು ಅವರಿಗೆ ಸಮಾನ ಅವಕಾಶಗಳನ್ನು ಒದಗಿಸಲಾಗುತ್ತದೆ.
    - ಮಾಸಿಕ ಭತ್ಯೆಯನ್ನು ಈಗಿರುವ ಮಟ್ಟ ರೂ. 500 ಮತ್ತು ರೂ.1200 ಮತ್ತು ರೂ. 1000 ಮತ್ತು 3000 ಗಳನ್ನು ಮುಂದಿನ 5 ವರ್ಷಗಳಲ್ಲಿ ದ್ವಿಗುಣಗೊಳಿಸಲಾಗುವುದು.

- ಎಮ್‌ಆರ್‌ಡಬ್ಲ್ಯೂ ಮತ್ತು ವಿಆರ್‌ಡಬ್ಲ್ಯೂಗಳ ಗೌರವಧನವನ್ನು ರೂ. 6000 ಮತ್ತು 10000 ಗಳಿಗೆ ಹಂತಹಂತವಾಗಿ 5 ವರ್ಷಗಳಲ್ಲಿ ಹೆಚ್ಚಿಸುವುದು.
- ಆಟಿಸಂ/ಬುದ್ಧಿ ಮಾಂದ್ಯರಿರುವ ಪ್ರತಿ ಜಿಲ್ಲೆಗಳಲ್ಲಿ ವೃತ್ತಿಪರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವುದು.

ಹಿರಿಯ ನಾಗರೀಕರು : ವಯಸ್ಸಾಗುತ್ತಿರುವವರು ಸಮಾಜದೊಂದಿಗೆ ವ್ಯವಹರಿಸುವ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಇಡಿಯಾಗಿ ಪ್ರೋತ್ಸಾಹಿಸುವುದು. ಹಿರಿಯ ನಾಗರೀಕರ ಹಿತರಕ್ಷಣೆ ಯನ್ನು ಖಚಿತಪಡಿಸಲು ಮತ್ತು ಅವರ ಜೀವನದ ಕೊನೆಯ ಹಂತವನ್ನು ಗೌರವ ಮತ್ತು ಶಾಂತಿಯಿಂದ ಜೀವಿಸಲು ಸಹಾಯ ಮಾಡುವ ಉದ್ದೇಶದೊಂದಿಗೆ ನಾವು :

- ವೃದ್ಧಾಶ್ರಮಗಳು ಮತ್ತು ಆರೋಗ್ಯ ರಕ್ಷಣಾ ಕೇಂದ್ರಗಳನ್ನು ಪ್ರತಿ ತಾಲ್ಲೋಕಿನಲ್ಲಿ ಉತ್ತಮ ಎನ್‌ಜಿಓಗಳ ಸಹಭಾಗಿತ್ವದೊಂದಿಗೆ ಸ್ಥಾಪಿಸಲಿದ್ದೇವೆ.
- ಜಿಲ್ಲಾ ಮತ್ತು ತಾಲ್ಲೋಕು ಆಸ್ಪತ್ರೆಗಳಲ್ಲಿ ಕಾರ್ಯಶೀಲ ವಯಸ್ಸಾದವರ ಕೇಂದ್ರಗಳನ್ನು ಸ್ಥಾಪಿಸಲಿದ್ದೇವೆ.
- ಹಿರಿಯ ನಾಗರೀಕರ ಪಿಂಚಣಿಯನ್ನು ಹೆಚ್ಚಿಸಲಾಗುವುದು.

- **ತೃತೀಯ ಲಿಂಗಿಗಳನ್ನು ಸಮಾಜದ ಮುಖ್ಯವಾಹಿನಿಯ ಭಾಗವಾಗಿಸಲು ನಾವು ಈ ಕೆಳಗಿನವುಗಳ ಮೇಲೆ ಗಮನಹರಿಸುತ್ತೇವೆ**
- ತೃತೀಯ ಲಿಂಗಿಗಳು ಸ್ವೀಕಾರಾರ್ಹರೆಂಬ ಅನುಭವ ಉಂಟಾಗುವಂತೆ, ಅವರ ನೆರೆಹೊರೆಯವರು, ಶಾಲೆ ಮತ್ತು ವ್ಯಾಪಕ ಸಮಾಜದಲ್ಲಿ ಅವರ ಕುಟುಂಬದವರ ಗೌರವ ಮತ್ತು ಭದ್ರತೆಗೆ ಧಕ್ಕೆ ಬಾರದಂತೆ ಸಾರ್ವಜನಿಕ ತಿಳುವಳಿಕೆ ನೀಡುವುದು.
  - ತೃತೀಯ ಲಿಂಗಿಗಳು ಸಾಂವಿಧಾನಿಕ ಹಕ್ಕು ಮತ್ತು ಸ್ವಾತಂತ್ರವನ್ನು ವಿಶೇಷವಾಗಿ ಸಾರ್ವಜನಿಕ ಸ್ಥಳಗಳು, ಸಂಪನ್ಮೂಲಗಳು ಮತ್ತು ಅಭಿವ್ಯಕ್ತಿ ಸ್ವಾತಂತ್ರವನ್ನು ಪಡೆಯುವುದನ್ನು ಖಚಿತಪಡಿಸುವುದು.
  - ತೃತೀಯ ಲಿಂಗಿಗಳು 2022 ರಷ್ಟರಲ್ಲಿ ಸಣ್ಣ ವ್ಯವಹಾರಗಳನ್ನು ಕೈಗೆತ್ತಿಕೊಳ್ಳಲು ಸ್ವಯಂ ಉದ್ಯೋಗ ಅನುದಾನಗಳನ್ನು ಒದಗಿಸುವುದು.
  - ತೃತೀಯ ಲಿಂಗಿಗಳಿಗೆ ವಿವಿಧ ಕ್ಷೇತ್ರಗಳಾದ ಆಭರಣ ತಯಾರಿಕೆ, ಹೊಲಿಗೆ, ಇತ್ಯಾದಿಗಳಲ್ಲಿ ವೃತ್ತಿಪರ ತರಬೇತಿ ನೀಡುವುದು
  - ಈಗಿರುವ ಉದ್ಯೋಗಿನಿ ಯೋಜನೆಯಲ್ಲಿ ಎಲ್ಲಾ ತೃತೀಯ ಲಿಂಗಿಗಳೂ ಒಳಗೊಳ್ಳುವಂತೆ ವಿಸ್ತರಿಸುವುದು

**ಕಾಂಗ್ರೆಸ್ ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಿನ ಅಸಮಾನತೆಗಳನ್ನು ಕಡಿಮೆಗೊಳಿಸುವುದಕ್ಕೆ ಬದ್ಧವಾಗಿದೆ ಮತ್ತು ನಾವು :**

- ಪ್ರತಿ ಗ್ರಾಮಗಳನ್ನೂ ಸರ್ವ ಋತು ರಸ್ತೆಗಳೊಂದಿಗೆ ಸಂಪರ್ಕಿಸುತ್ತೇವೆ ಮತ್ತು ಅವು ಲಭ್ಯವಾಗುವಂತೆ ಮಾಡುತ್ತೇವೆ.
- ಅರೆ ನಗರ ಪ್ರದೇಶಗಳಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ರೈತ ಮಾರುಕಟ್ಟೆಗಳನ್ನು ಪ್ರಾರಂಭಿಸುತ್ತೇವೆ.
- ಸಮುದಾಯ ಬೆಂಬಲ ಕೃಷಿಯನ್ನು ಉತ್ತೇಜಿಸುವುದು.
- ಸಾಹಸೋದ್ಯಮ ಬಂಡವಾಳ ನಿಧಿಯನ್ನು ಪ್ರಾರಂಭಿಸಿ ಸಾಮಾಜಿಕ ವ್ಯವಹಾರ ಘಟಕಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿಸುತ್ತೇವೆ.
- ಕರ್ನಾಟಕದ ಎಲ್ಲಾ ಗ್ರಾಮಗಳಲ್ಲಿ 3 ಫೇಸ್ ವಿದ್ಯುತ್ ಅನ್ನು 20/7 ತಾಸು ನೀಡುತ್ತೇವೆ.
- ಗ್ರಾಮೀಣ ಪ್ರದೇಶಗಳಿಗಾಗಿ ಆಹಾರ ಭದ್ರತಾ ಸೂಚಿ ಯನ್ನು ವಿಶೇಷವಾಗಿ ಅಭಿವೃದ್ಧಿಪಡಿಸುತ್ತೇವೆ.
- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹೆಚ್‌ಡಿಐ ಹೊರತರುತ್ತೇವೆ.
- ಸಮಾನತೆಯ ನೀಲಿನಕ್ಷೆ ಸಿದ್ಧಪಡಿಸಿ-ಮುಂದಿನ 5 ವರ್ಷಗಳಲ್ಲಿ ಅಸಮಾನತೆಯನ್ನು ಕಡಿಮೆಗೊಳಿಸಲು ಪ್ರಯತ್ನಿಸಲಾಗುವುದು.
- ಸಮಾನತೆಯ ಹಕ್ಕನ್ನು ಖಚಿತಪಡಿಸುವುದು ಅದಕ್ಕಾಗಿ ನಮ್ಮ ಸರ್ಕಾರವು ಈ ಕೆಳಗಿನವುಗಳನ್ನು ಮಾಡಲಿದೆ.
- ಮುಂಗಡ ಪತ್ರದಲ್ಲಿ ಅಲ್ಪಸಂಖ್ಯಾತರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ಉತ್ತಮಪಡಿಸಲು ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚು ಅನುದಾನವನ್ನು ಒದಗಿಸುವುದು
- ಅಲ್ಪ ಸಂಖ್ಯಾತರ ಶೈಕ್ಷಣಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸುವುದು, ನಾವು ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 1.25 ಕೋಟಿ ರೂ.ಗಳ ಆರ್ಥಿಕ ಸಹಾಯವನ್ನು ನೀಡುತ್ತೇವೆ, ಪ್ರತಿಭಾವಂತರಿಗೆ ಮತ್ತು ಉಚಿತ ಹಣ ವಾಪಸಾತಿಯನ್ನು ನೀಡುತ್ತೇವೆ.
- ವಿದ್ಯಾರ್ಥಿಗಳಲ್ಲಿ ಶಿಕ್ಷಣವನ್ನು ಪ್ರೋತ್ಸಾಹಿಸಲು ನಾವು 250 ಹಾಸ್ಟೆಲ್‌ಗಳು ಮತ್ತು 150 ವಸತಿ ಶಾಲೆಗಳನ್ನು ನಿರ್ಮಿಸಿ 12500 ಮತ್ತು 37500 ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಕ್ರಮವಾಗಿ ಅನುಕೂಲ ಒದಗಿಸಿಕೊಟ್ಟಿದ್ದೇವೆ.
- 60,000 ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಲ್ಲಿ ಶಾಲೆಬಿಡುವವರನ್ನು ಕಡಿಮೆ ಮಾಡಲು ನಾವು 1000 ಮೌಲಾನ ಅಝಾದ್ ಶಾಲೆಗಳನ್ನು ನಿರ್ಮಿಸಲು ಉದ್ದೇಶಿಸಿದ್ದೇವೆ.
- ಪ್ರತಿ ತಾಲ್ಲೂಕುಗಳಲ್ಲಿ ಮೌಲಾನಾ ಶಾಲೆಗಳನ್ನು ಸ್ಥಾಪಿಸುವುದು.
- ಮದರಸಾ ಬೋರ್ಡ್‌ಗಳನ್ನು ಸ್ಥಾಪಿಸಿ ಉದ್ಯೋಗ, ಸ್ವಯಂ-ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿಗೆ

ಸಂಬಂಧಿಸಿದಂತೆ ಮದರಸಾ ವ್ಯವಹಾರಗಳನ್ನು ನಿರ್ವಹಣೆ ಮಾಡಲಾಗುತ್ತದೆ.

- ಕ್ರಿಶ್ಚಿಯನ್ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಿ ಕ್ರಿಶ್ಚಿಯನ್ ಸಮುದಾಯದ ವ್ಯವಹಾರಗಳನ್ನು ನಿರ್ವಹಣೆ ಮಾಡಲಾಗುತ್ತದೆ.
- ನಾವು ಸಾಕು ಪ್ರಾಣಿಗಳನ್ನು ಕೊಂಡುಕೊಳ್ಳಲು 5000ಫಲಾನುಭವಿಗಳಿಗೆ ರೂ.140 ಕೋಟಿಗಳ ಆರ್ಥಿಕ ಸಹಾಯವನ್ನು ಒದಗಿಸುತ್ತೇವೆ.
- ಮುಂದಿನ ಐದು ವರ್ಷಗಳಲ್ಲಿ 300 ವಾಣಿಜ್ಯ ಸಮೃದ್ಧ ಆಸ್ತಿಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ವಕ್ಫ್ ಗೆ ಸಹಾಯ ಮಾಡಲಿದ್ದೇವೆ.
- ವಕ್ಫ್ ಸ್ವತ್ತುಗಳ ಅಭಿವೃದ್ಧಿ ಕಾರ್ಪೋರೇಷನ್ (ಮಂಡಳಿ) ಯನ್ನು ರಚನೆ ಮಾಡಲಾಗುವುದು.
- ಕರ್ನಾಟಕದ ಎಲ್ಲಾ 30 ಜಿಲ್ಲೆಗಳಲ್ಲಿ ಅಲ್ಪ ಸಂಖ್ಯಾತರಿಗಾಗಿ ಜಿಲ್ಲಾ ಮಟ್ಟದಲ್ಲಿ ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನು ತೆರೆಯಲಾಗುವುದು.
- ಅಲ್ಪ ಸಂಖ್ಯಾತರ ಗುಣ ಮಟ್ಟದ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಸುಲಭ ಸಾಲಗಳನ್ನು ಕೆಎಮ್‌ಡಿಸಿ ಮೂಲಕ ರೂ. 5.00 ಕೋಟಿಗಳವರೆಗೆ ನೀಡಲಾಗುವುದು ಅಂತಹ ಸಂಸ್ಥೆಗಳು 4% ರಷ್ಟು ಆಧಾರ ಭದ್ರತೆಯನ್ನು ನೀಡಬೇಕಾಗುತ್ತದೆ.
- ಅಲ್ಪ ಸಂಖ್ಯಾತ ಆಟೋ ಮತ್ತು ಟ್ಯಾಕ್ಸಿ ಡ್ರೈವರ್‌ಗಳ ಮಕ್ಕಳ ಶಿಕ್ಷಣ ಮತ್ತು ಆರೋಗ್ಯ ವ್ಯಾಪ್ತಿಗಳಿಗಾಗಿ ವಿಮಾ ಯೋಜನೆಗಳು.
- ಎಲ್ಲಾ ಮೊರಾರ್ಜಿ ದೇಸಾಯಿ ಶಾಲೆಗಳನ್ನು ಪಿಯುಸಿ ಮಟ್ಟಕ್ಕೆ ಮೇಲ್ದರ್ಜೆಗೇರಿಸುವುದು ಹೆಣ್ಣು ಮಕ್ಕಳಿಗಾಗಿ ಹಾಸ್ಟೆಲ್ ನಿರ್ಮಾಣ (ಪ್ರತಿ ಜಿಲ್ಲೆಯಲ್ಲಿ ಒಚಿದು)
- ಅಲ್ಪ ಸಂಖ್ಯಾತರಿಗಾಗಿ 50 ನವೋದ್ಯಮಗಳು : 50 ಅಲ್ಪ ಸಂಖ್ಯಾತರ ನವೋದ್ಯಮಗಳನ್ನು ಸ್ಥಾಪಿಸುವ ಒಂದು ಯೋಜನೆಯಾಗಿದ್ದು ಪ್ರಾರಂಭಿಕ ಹಂತದಲ್ಲಿ 10-12 ಲಕ್ಷಗಳಷ್ಟು ಹಣವನ್ನು ಪ್ರತಿ ನವೋದ್ಯಮಗಳಿಗೆ ನೀಡಲಾಗುತ್ತದೆ. ಅವರಿಗೆ ಯಶಸ್ವೀ ನವೋದ್ಯಮ ಮತ್ತು ಮೂಲಸೌಕರ್ಯವನ್ನು ಸ್ಥಾಪಿಸಲು ವಿಶ್ವ ಮಟ್ಟದ ತರಬೇತಿಯನ್ನು ನೀಡಲಾಗುತ್ತದೆ.
- ನೆರೆಹೊರೆ ಆರೋಗ್ಯ ಕೇಂದ್ರಗಳು : ಅಲ್ಪ ಸಂಖ್ಯಾತರು ಅಧಿಕವಾಗಿರುವ 100 ನಗರ ಪ್ರದೇಶಗಳಲ್ಲಿ ಮತ್ತು ಬೆಂಗಳೂರಿನ ವಾರ್ಡ್‌ಗಳಲ್ಲಿ ಮತ್ತು II ದರ್ಜೆ ನಗರಗಳಲ್ಲಿ ಮತ್ತು ಗ್ರಾಮಂತರ ಪ್ರದೇಶಗಳಲ್ಲಿ ನೆರೆಹೊರೆ ಕ್ಲಿನಿಕ್‌ಗಳನ್ನು ಸ್ಥಾಪನೆ ಮಾಡಲಿದ್ದು ಕನಿಷ್ಟ 10 ಹಾಸಿಗೆಗಳು ಒಂದು ಪ್ರಯೋಗಾಲಯ, ಔಷಧಾಲಯ, ಮತ್ತು ಡಯಾಲಿಸಿಸ್ ಘಟಕವನ್ನು ಪಿಪಿಪಿ ಆಧಾರದಲ್ಲಿ ತೆರೆಯಲಾಗುತ್ತದೆ.

**ಎನ್ ಆರ್ ಐ ನಿಂದ ಬೆಂಬಲ**

- ಎನ್‌ಆರ್‌ಕೆ ಕಾರ್ಡ್‌ಗೆ ಅಧಿಕೃತ ಅನುಮೋದನೆ ನೀಡುವುದು.
- ಬೆಂಗಳೂರು, ಮಂಗಳೂರು ಮತ್ತು ಹುಬ್ಬಳಿಗಳಲ್ಲಿ ವಲಸೆ ಸಂಪನ್ಮೂಲ ಕೇಂದ್ರ (ಮೈಗ್ರೇಷನ್ ರಿಸೋರ್ಸ್ ಸೆಂಟರ್) ವನ್ನು ಸ್ಥಾಪಿಸುವುದು.
- ಅನಿವಾಸಿ ಕನ್ನಡಿಗರ ಸ್ವತ್ತುಗಳ ವ್ಯಾಜ್ಯಗಳನ್ನು ಪರಿಹರಿಸಲು ಸಮನ್ವಯ ಸಮಿತಿಯನ್ನು ರಚಿಸುವುದು.
- ಪ್ರವಾಸಿ ಐಡಿ ಕಾರ್ಡ್ ನೀಡುವುದು.
- ಎನ್ ಆರ್ ಐ ಹೂಡಿಕೆದಾರರಿಗೆ ರಿಯಾಯಿತಿಗಳನ್ನು ನೀಡುವುದು ಮತ್ತು ಕಡಿಮೆ ಬಡ್ಡಿ ದರದಲ್ಲಿ ಕೈಗಾರಿಕೆಗಳು ಮತ್ತು ಸಂಸ್ಥೆಗಳನ್ನು ಸ್ಥಾಪಿಸಲು ಸಾಲ ನೀಡುವುದು.
- ಹೂಡಿಕೆಯಲಿ ವಿಶೇಷ ರಿಯಾಯಿತಿ ಮತ್ತು ಕನಿಷ್ಟ ಬಡ್ಡಿ ದರ ಸೌಲಭ್ಯಗಳನ್ನು ಅನಿವಾರ್ಯ ಸಂದರ್ಭಗಳಲ್ಲಿ ಕರ್ನಾಟಕಕ್ಕೆ ಬೆಂಬಲ ನೀಡಿದವರಿಗೆ ಕೊಡಲಾಗುವುದು.
- ಬೆಂಗಳೂರಿನಲ್ಲಿ "ಕನ್ನಡ ಭವನ" ನಿರ್ಮಿಸಲಾಗುವುದು ಇದರಿಂದ ಎಲ್ಲಾ ಕನ್ನಡಿಗರೂ ಸೌವಲತ್ತುಗಳನ್ನು ಪಡೆದುಕೊಳ್ಳಬಹುದು ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಬಹುದು.

ಪ್ರವಾಸೋದ್ಯಮ

# ಪ್ರವಾಸೋದ್ಯಮ

ನಾವು ಕರ್ನಾಟಕವನ್ನು ವಿಶ್ವದರ್ಜೆಯ ಪ್ರವಾವಸೋದ್ಯಮ ತಾಣವನ್ನಾಗಿಸಿ ದೇಶದಲ್ಲಿ ಎರಡನೇ ಅತ್ಯುತ್ತಮ ರಾಜ್ಯವನ್ನಾಗಿಸುತ್ತೇವೆ ಹಾಗೂ ಮೂಲಭೂತ ಸೌಲಭ್ಯಗಳು, ವಿಷಯಾಧಾರಿತ ಸುತ್ತಾಟ, ಸುಸ್ಥಿರ ಪ್ರವಾಸೋದ್ಯಮ ಅಭ್ಯಾಸಗಳೊಂದಿಗೆ ಪ್ರವಾಸೋದ್ಯಮವನ್ನು ಮೇಲ್ದರ್ಜೆಗೇರಿಸುತ್ತೇವೆ. ಅಲ್ಲದೆ ಖಾಸಗಿ ಪಾಲುದಾರಿಕೆಯನ್ನು ಪ್ರೋತ್ಸಾಹಿಸುತ್ತೇವೆ ಹೂಡಿಕೆಯಿಂದ ಹಾಗೂ ಪೂರಕ ವ್ಯವಹಾರಿಕ ವಾತಾವರಣವನ್ನು ಸೃಷ್ಟಿಸುತ್ತೇವೆ, ಅಲ್ಲದೆ ಕರ್ನಾಟಕವನ್ನು ಪ್ರವಾಸೋದ್ಯಮದಲ್ಲಿ ರಾಷ್ಟ್ರೀಯ ಹಾಗೂ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸ್ಥಾನದಲ್ಲಿರುವಂತೆ ಮಾಡುತ್ತೇವೆ ಮತ್ತು ರಾಜ್ಯದಲ್ಲಿ ಅತಿದೊಡ್ಡ ನೇರ ಮತ್ತು ಪರೋಕ್ಷ ಉದ್ಯೋಗ ಸೃಷ್ಟಿಸುವ ಕ್ಷೇತ್ರವನ್ನಾಗಿಸುತ್ತೇವೆ.
ನಾವು ಕರ್ನಾಟಕಕ್ಕಾಗಿ ಪ್ರಗತಿಪರ ಪ್ರವಾಸೋದ್ಯಮ ನೀತಿಯೊಂದನ್ನು ರಚನೆ ಮಾಡಿದ್ದು ಇದರಡಿಯಲ್ಲಿ ಖಾಸಗಿ ಸಹಭಾಗಿತ್ವ ಮತ್ತು ಐಸಿಟಿ ಬಳಕೆಯನ್ನು ಪ್ರೋತ್ಸಾಹಿಸುತ್ತದೆ. 2016 ರಲ್ಲಿ ಸುಮಾರು 13 ಕೋಟಿ ಪ್ರವಾಸಿಗಳು ಬಂದಿದ್ದು ಹಿಂದಿನ ವರ್ಷಕ್ಕಿಂತ ಇದು ಶೇಕಡಾ 10 ರಷ್ಟು ಹೆಚ್ಚಳವಾಗಿದೆ.

## ನಮ್ಮ ಪ್ರಮುಖ ಸಾಧನೆಗಳು

- 2015-20 ರ ಕರ್ನಾಟಕ ಪ್ರವಾಸೋದ್ಯಮ ನೀತಿಯಂತೆ, 2015-20 ರಲ್ಲಿ ರೂ.54,000 ಕೋಟಿಗಳಷ್ಟು ಹೂಡಿಕೆ ಮಾಡಬಹುದೆಂದು ಅಂದಾಜಿಸಲಾಗಿದೆ (ಪಿಪಿಪಿ ಅಡಿಯಲ್ಲಿ ಖಾಸಗಿ ಕ್ಷೇತ್ರದಿಂದ ಹೆಚ್ಚಿನ ಹೂಡಿಕೆಯನ್ನು ನಿರೀಕ್ಷಿಸಲಾಗಿದೆ) ಇದರಿಂದ ಸುಮಾರು 30 ಲಕ್ಷ ಉದ್ಯೋಗಗಳು ಸೃಷ್ಟಿಯಾಗಬಹುದು.
- ಡಬ್ಲ್ಯೂಟಿಟಿಸಿ 2016 ರ ವರದಿಯಂತೆ, ಕರ್ನಾಟಕ ಪ್ರವಾಸೋದ್ಯಮವು ದೇಶದ ಪ್ರವಾಸೋದ್ಯಮ ಜಿಡಿಪಿಗೆ ಅಂದಾಜು ಶೇಕಡಾ 8 ರಷ್ಟು ಕೊಡುಗೆಯನ್ನು ನೀಡಿದೆ( 2015 ರಲ್ಲಿ ಪ್ರವಾಸೋದ್ಯಮದ ಪಾಲು ಜಿಎಸ್‌ಡಿಪಿ ಶೇಕಡಾ 14.8ರಷ್ಟು ಎಂದು ಊಹಿಸಿಕೊಂಡು)
- ಬೆಂಗಳೂರು ತನ್ನದೆ ಆದ ಪ್ರವಾಸೋದ್ಯಮ ಚಿನ್ಹೆಯನ್ನು ಹೊಂದಿರುವ ಮೊದಲ ಭಾರತೀಯ ನಗರವಾಗಿದೆ.
- ಪ್ರವಾಸಿಗರ ಆಗಮನದ ಆಧಾರದ ಮೇಲೆ ಕರ್ನಾಟಕವನ್ನು ಭಾರತದ ಎರಡನೇ ದೊಡ್ಡ ರಾಜ್ಯವನ್ನಾಗಿ ಮಾಡುತ್ತೇವೆ.
- ರಾಜ್ಯದಲ್ಲಿ ಪ್ರವಾಸೋದ್ಯಮಕ್ಕಾಗಿ ಸುಮಾರು 65 ಲಕ್ಷ ಉದ್ಯೋಗವನ್ನು ನೀಡುತ್ತೇವೆ.
- ಕರ್ನಾಟಕವನ್ನು ವಿಶ್ವದರ್ಜೆಯ ಪ್ರವಾಸಿ ತಾಣವನ್ನಾಗಿಸಲು ವಿಶ್ವದರ್ಜೆಯ ಮೂಲ ಸೌಕರ್ಯಗಳನ್ನು ನಿರ್ಮಿಸುತ್ತೇವೆ.
- ಸುಸ್ಥಿರ ಪ್ರವಾಸೋದ್ಯಮದೊಂದಿಗೆ ನಮ್ಮ ಸಂಸ್ಕೃತಿಯನ್ನು ಪ್ರೋತ್ಸಾಹಿಸಲು, ಕರ್ನಾಟಕ ಪರಂಪರೆಗಳ ಪ್ರಾಧಿಕಾರವನ್ನು ಸ್ಥಾಪನೆ ಮಾಡುತ್ತೇವೆ.
- ಕರ್ನಾಟಕ ಉತ್ಸವ ಪ್ರಾಧಿಕಾರವನ್ನು ಸ್ಥಾಪಿಸುವುದು. ಮಂಗಳೂರು, ಉಡುಪಿ ಮತ್ತು ಕಾರವಾರಗಳಲ್ಲಿ ಸಮುದ್ರ ತೀರದ ಪ್ರವಾಸೋದ್ಯಮವನ್ನು ಪ್ರಾರಂಭಿಸಲು ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸುತ್ತೇವೆ

## ನಮ್ಮ ಪ್ರಮುಖ ಉಪಕ್ರಮಗಳು

- ಜಿಎಸ್‌ಡಿಪಿಗೆ ಪ್ರವಾಸೋದ್ಯಮ ಕೊಡುಗೆಯನ್ನು ಈಗಿನ 14.8% ನಿಂದ 20% ಕ್ಕೆ ಏರಿಕೆ ಮಾಡುತ್ತೇವೆ.

ನಗರಾಭಿವೃದ್ಧಿ

# ಪ್ರಗತಿಯ ನಗರದಲ್ಲಿ ಸಾಟಿಯಿಲ್ಲದ ಜೀವನ ಗುಣಮಟ್ಟ

ಕಾಂಗ್ರೆಸ್ **ರಾಜ್ಯದ ಎಲ್ಲಾ ನಿವಾಸಿಗಳ ಸೌಖ್ಯ ಮತ್ತು ಬೆಳವಣಿಗೆ ಸಾಧ್ಯವಾಗುವಂತಹ**

**ನಗರ ಕರ್ನಾಟಕವನ್ನು, ಜೀವಿಸುವ, ಬೆಳೆಯುತ್ತಿರುವ, ಸುರಕ್ಷಿತ, ಚೇತರಿಸಿಕೊಳ್ಳಬಲ್ಲ ಮತ್ತು ಅಂತರ್ಗತವಾಗುವಂತೆ** ಮಾಡಲು ಬಧ್ಧವಾಗಿದೆ.

ನಮ್ಮ ನಂಬಿಕೆಯೆಂದರೆ ಪೂರ್ಣ ವೈಯಕ್ತಿಕ ಮತ್ತು ಗುಂಪು ಸಾಮರ್ಥ್ಯವನ್ನು ಬಳಕೆ ಮಾಡಿ ಉತ್ತಮ ಗುಣಮಟ್ಟದ ಜೀವನಕ್ಕೆ ಸುಸ್ಥಿರ ಮತ್ತು ಒಳಗೊಳ್ಳುವಿಕೆಯ ಬೆಳವಣಿಗೆಯ ಮೂಲಕ ಉನ್ನತಿಯನ್ನು ಸಾಧಿಸಬಹುದು, ಇದು ಕಾಂಗ್ರೆಸಿನ ಕೆಲವು ಸಾಧನೆಗಳಿಂದ ನಗರ ಕರ್ನಾಟಕದಲ್ಲಿ ಪ್ರತಿಫಲನಗೊಂಡಿದೆ.

- **ಮೆಟ್ರೋ ರೈಲು** : ಬೆಂಗಳೂರು ಮಾತ್ರ ಮೆಟ್ರೋ ಹೊಂದಿದೆ ಇದನ್ನು ಎರಡು ಹಂತಗಳಲ್ಲಿ ಅನುಷ್ಟಾನಗೊಳಿಸಲಾಗಿದೆ. ನಮ್ಮ ಮೆಟ್ರೋ ಹಂತ 1 ರಲ್ಲಿ ಎರಡು ಮೆಟ್ರೋ ಲೈನಗಳಿರುತ್ತವೆ– ಒಟ್ಟು ಉದ್ದ 42.5 ಕಿ.ಮೀ. ಹಂತ 2 ರಲ್ಲಿ ಈಗಿರುವ ಲೈನ್‌ಗಳಿಗೆ ನಾಲ್ಕು ವಿಸ್ತರಣೆಗಳಿದ್ದು ಹೆಚ್ಚುವರಿಯಾಗಿ ಎರಡು ಹೊಸ ಲೈನ್‌ಗಳನ್ನು ಸೇರಿಸಿದರೆ ಒಟ್ಟು 72.095 ಕಿ.ಮೀ.ಉದ್ದವಾಗುತ್ತದೆ.
- ನಾವು 2004 ರ ಮುನ್ಸಿಪಲ್ ಘನ ತ್ಯಾಜ್ಯ ನೀತಿಯಲ್ಲಿ ಎಮ್‌ಎಸ್‌ಡಬ್ಲ್ಯೂ(ಎಮ್ ಮತ್ತು ಹೆಚ್) ಕಾಯಿದೆ 2000ದಂತೆ ಕರ್ನಾಟಕವನ್ನು ಮೊದಲನೇ ರಾಜ್ಯವನ್ನಾಗಿ ಮೇಲೆತ್ತಿದ್ದೇವೆ
- ಕರ್ನಾಟಕ ಮುನ್ಸಿಪಲ್ ಡೇಟಾ ಸಂಸ್ಥೆಯು ಒಂದು ಉದಾಹರಣೆಯಾಗಿದ್ದು ಇದನ್ನು ಯುಎಲ್ ಬಿಗಳ ಕೇಂದ್ರೀಕೃತ ಡೇಟಾಬೇಸ್ ಮುನ್ಸಿಪಲ್ ರಿಫಾರ್ಮ್ ಸೆಲ್ ನಡಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ ಮತ್ತು ಮಾಹಿತಿ ತಂತ್ರಜ್ಞಾನವನ್ನು ಹೆಚ್ಚಿಸು ಶಕ್ತಿಯ ಯುಎಲ್‌ಬಿಗಳ ಸಾಮರ್ಥ್ಯವರ್ಧನೆ ಮಾಡಲಾಗಿದೆ.
- ನಾವು ಕಸ ವಿಲೇವಾರಿ ಯೋಜನೆಗಳನ್ನು ಅನುಷ್ಟಾನಗೊಳಿಸಿದ್ದೇವೆ(ಕಸದಿಂದ ರಸ) ಮತ್ತು ಅದನ್ನು ಶಕ್ತಿ ಮೂಲವಾಗಿ, ಗೊಬ್ಬರ ಮತ್ತು ಇತರೆ ವಸ್ತುಗಳಾಗಿ ಪುನರ್ಬಳಕೆ ಮಾಡಿಕೊಂಡಿದ್ದೇವೆ.
- ನಾವು
- ಆರ್ಥಿಕ ಬೆಳವಣಿಗೆಯಲ್ಲಿ ಮತ್ತು ಕರ್ನಾಟಕದ ಎಲ್ಲಾ ನಗರಗಳಾದ್ಯಂತ ಆರ್ಥಿಕತೆ ಮತ್ತು ಉದ್ಯೋಗದಲ್ಲಿ ಕ್ಷೇತ್ರೀಯ ಜೋಡಣೆ ಮಾಡಿ  ಪ್ರಾದೇಶಿಕ ಅಸಮಾನತೆಯನ್ನು ಕಡಿಮೆ ಮಾಡುತ್ತೇವೆ
- ಸಾರಿಗೆ ಮತ್ತು ಸಂಪರ್ಕ ಮೂಲಸೌಕರ್ಯಗಳನ್ನು ಸ್ಥಾಪಿಸುತ್ತೇವೆ.
- ರಾಜ್ಯದ ಪ್ರತಿ ಪ್ರದೇಶದಲ್ಲಿ ದೊಡ್ಡ ಐದು ನಗರಗಳಲ್ಲಿ ಆರ್ಥಿಕಾಭಿವೃದ್ಧಿಯ ಯೋಜನೆಗಳನ್ನು ರಚನೆ ಮಾಡುತ್ತೇವೆ.
- ಅವಳಿ ನಗರಗಳು, ನಗರ ಸಂಕೀರ್ಣಗಳು ಮತ್ತು ನಗರ ಕೇಂದ್ರಗಳಂತಹ ಪರಿಕಲ್ಪನೆಗಳನ್ನು ಬಳಸಿಕೊಂಡು ಸಂಪನ್ಮೂಲಗಳನ್ನು ಹಂಚಿಕೆ ಮಾಡುವ ಕೊಳವನ್ನಾಗಿಸುತ್ತೇವೆ.
- ಅಭಿವೃದ್ಧಿ ಹೊಂದಿದ ಮತ್ತ ಸುಧಾರಿತ ಯೋಜನೆಗಳ ಚೌಕಟ್ಟಿನೊಂದಿಗೆ ಸಾಂಸ್ಥಿಕ ವಿನ್ಯಾಸಗಳನ್ನು ಸುಸಂಬದ್ಧಗೊಳಿಸಿ ವಿಸ್ತರಣೆ ಮಾಡುತ್ತೇವೆ.

- ಕರ್ನಾಟಕ ಪಟ್ಟಣ ಮತ್ತು ಗ್ರಾಮ ಯೋಜನಾ ಕಾಯಿದೆಯನ್ನು ತಿದ್ದುಪಡಿ ಮಾಡಿ ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು.
- ಅಭಿವೃದ್ಧಿ ಪ್ರಾಧಿಕಾರವನ್ನು ಮರುವಿನ್ಯಾಸಗೊಳಿಸಿ ಅದನ್ನು ಯೋಜನೆ ಮತ್ತು ಅಭಿವೃದ್ಧಿ ಪ್ರಕ್ರಿಯೆಗಳಿಗೆ ಅನುವುಮಾಡಿಕೊಡುವುದು
- ಯೋಜಿತ, ಪರಿಸರ ಸಂರಕ್ಷಣೆ ಮತ್ತು ನಗರ ಕೇಂದ್ರಗಳ ಬೆಳವಣಿಗೆ ಚೇತರಿಕೆಯೊಂದಿಗೆ ಗರಿಷ್ಟ ಭೂಮಿ ಮತ್ತು ಸಂಪನ್ಮೂಲಗಳ ಬಳಕೆಮಾಡಿಕೊಳ್ಳುವುದು.
- ನಗರ ಬೆಳವಣಿಗೆ ಕಾರ್ಯತಂತ್ರಗಳನ್ನು ಮಾಸ್ಟರ್ (ಪ್ರಮುಖ) ಯೋಜನೆ ಮತ್ತು ವಿಧಾನಗಳನ್ನು ಸೇರ್ಪಡೆ ಮಾಡಲಾಗಿದೆ ಅವುಗಳೆಂದರೆ ಭೂ ಪುನರ್ ಹೊಂದಾಣಿಕೆ, ಭೂಮಿ ಪೂಲಿಂಗ್ (ಕೊಳ) ಮತ್ತು ಮಾಸ್ಟರ್ ಯೋಜನೆಯ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಖಾಸಗಿ ಕ್ಷೇತ್ರದ ಸಂಪನ್ಮೂಲಗಳನ್ನು ಹೆಚ್ಚಿಸುವುದು
- ಗ್ರಾಮ ನಿವೇಶನಗಳನ್ನು ಅಥವಾ ಗ್ರಾಮಠಾಣಾಗಳ ಕ್ಷೇತ್ರವನ್ನು ಪುನರ್ ಜೋಡಣೆ ಮಾಡುವುದು ಮತ್ತು ನಗರದೊಂದಿಗೆ ಒಟ್ಟುಗೂಡಿಸುವುದು.
- ನಕ್ಷೆ ಮತ್ತು ನಗರ ಪ್ರದೇಶವನ್ನು ಒಳಗೊಂಡಿರುವ ಮರಗಳು ಮತ್ತು ಅರಣ್ಯ ನಾಶವನ್ನು ಕಡಿಮೆಗೊಳಿಸುವುದು
- ರಾಜ್ಯ ಪ್ರತಿ ಮನೆಗೆ ಕನಿಷ್ಟ ಒಂದು ನಲ್ಲಿಯನ್ನು ಒದಗಿಸುವುದರ ಮೂಲಕ ಎಲ್ಲರಿಗೂ ನೀರು ದೊರೆಯುವಂತೆ ಮಾಡುವುದು.
- ನಾಗರೀಕರ ಭಾಗವಹಿಸುವಿಕೆಯನ್ನೊಳಗೊಂಡು, ದೊಡ್ಡದಾದ ಪಾರದರ್ಶಕತೆಯನ್ನು ಪ್ರೋತ್ಸಾಹಿಸುವುದು, ತೆರೆದ ಡೆಟಾ ಲಭ್ಯತೆಯನ್ನು ಉತ್ತಮ ಪಡಿಸಿಕೊಳ್ಳುವುದು ಮತ್ತು ಉತ್ತರದಾಯಿತ್ವವನ್ನು ಬಲಗೊಳಿಸುವುದು ಮತ್ತು ನಗರ ಆಡಳಿತ ಪ್ರಕ್ರಿಯೆಯಲ್ಲಿ ಸಾಮರ್ಥ್ಯ ಹೆಚ್ಚಿಸುವುದು.
- ತೀರ್ಮಾನ ಮಾಡುವಿಕೆಯಲ್ಲಿ ನಾಗರೀಕರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು
- ಈಗಿರುವ ನಗರಯೋಜನೆ ಸಿಬ್ಬಂದಿಯ ಸಾಮರ್ಥ್ಯವನ್ನು ಇತ್ತೀಚಿನ ಪ್ರವೃತ್ತಿಗಳಗನುಗುಣವಾಗಿ ಹೆಚ್ಚಿಸುವುದು
- ಸಾಮಾನ್ಯ ಡೇಟಾಬೇಸ್ ವೇದಿಕೆಯನ್ನು ಸಾರ್ವಜನಿಕರ ಭಾಗವಹಿಸುವಿಕೆ ಮತ್ತು ಸಹಭಾಗಿತ್ವಕ್ಕಾಗಿ ಹೆಚ್ಚಿಸುವುದು
- ಎಲ್ಲಾ ನೈಸರ್ಗಿಕ ಜಲ ಮೂಲಗಳನ್ನು ಸಂರಕ್ಷಿಸುವುದಕ್ಕೆ ಆದ್ಯತೆಯನ್ನು ನೀಡಿ ಎಲ್ಲರಿಗೂ ಸುರಕ್ಷಿತ ಕುಡಿಯಲು ನೀರು ಲಭ್ಯವಾಗುವುದನ್ನು ಖಚಿತಪಡಿಸುವುದು.
- ನೀರಿನ ಬಳಕೆಯನ್ನು ಸಮರ್ಥವಾಗಿ ಹೆಚ್ಚಿಸುವುದು
- ಕಠಿಣವಾದ ಸರಬರಾಜು ಭಾಗದ ನಿರ್ವಹಣಾ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳುವುದು
- ಸ್ಥಳೀಯ ಜಲ ಮೂಲಗಳನ್ನು ಸೂಕ್ತವಾಗಿ ಬಳಸಿಕೊಳ್ಳುವುದಕ್ಕೆ ಒತ್ತು ನೀಡುವುದು.
- ಸಮಗ್ರ ಜಲಾನಯನ ನಿರ್ವಹಣಾ ನೀತಿಗಳನ್ನು ಅಳವಡಿಸಿಕೊಳ್ಳುವುದು
- ಸಮಗ್ರ ಜಲ ನಿರ್ವಹಣೆಗಾಗಿ ಮೇಲ್ಮೈ ನೀರು ಮತ್ತು ಅಂತರ್ಜಲ ಮೂಲಗಳೆರಡಕ್ಕೂ  ಏಕ ಸಮನ್ವಯತೆಯ ಡೇಟಾಬೇಸ್‌ನ್ನು ರಚಿಸುವುದು.
- ನೈರ್ಮಲ್ಯ ಮತ್ತು ಒಳಚರಂಡಿ ನಿರ್ವಹಣಾ ಯೋಜನೆಗಳನ್ನು ಜಲ ನಿರ್ವಹಣಾ ಯೋಜನೆಗಳೊಂದಿಗೆ ಜೋಡಣೆ ಮಾಡುವುದು.
- ನೈರ್ಮಲ್ಯ ಮೂಲಸೌಕರ್ಯಕ್ಕೆ ಮೇಲ್ಮೈ ಲಭ್ಯತೆಯನ್ನು ಒದಗಿಸುವುದು ಮತ್ತು ಎಲ್ಲರಿಗೂ ಎಲ್ಲಾ ಸಮಯದಲ್ಲೂ ಸೇವೆಗಳನ್ನು ನೀಡುವುದು ಮತ್ತು ಮಾನವ ಮಲದಿಂದ ಪರಿಸರ ಮತ್ತು ಸಮಾಜದ ಮೇಲೆ ಶೂನ್ಯ ಅಡ್ಡಪರಿಣಾಮಗಳನ್ನು ಖಚಿತ ಪಡಿಸುವುದು
- ಶೌಚಾಲಯಗಳನ್ನು ಕಟ್ಟುವಾಗ ಮಾನವ ಕೇಂದ್ರಿತ ವಿನ್ಯಾಸದ ಮಾನಗಳನ್ನು ಅಳವಡಿಸಿಕೊಳ್ಳುವುದು
- ಕಾಲಾತ್ಮಕ ತಂತ್ರಜ್ಞಾನಗಳ ವೇದಿಕೆಗಳು ಮತ್ತು ಸಲಕರಣೆಗಳನ್ನು ಯೋಜನೆಗಾಗಿ ಬಳಸುವುದನ್ನು ಹೆಚ್ಚಿಸುವುದು.
- ಎಫ್‌ಎಸ್‌ಟಿಪಿಗಳು ಮತ್ತು ಎಸ್‌ಟಿಪಿಗಳ ಅಂತಿಮ ಉತ್ಪನ್ನಗಳನ್ನು ಪುನರ್ಬಳಕೆ ಮಾಡಿಕೊಳ್ಳಲು ಮಾರುಕಟ್ಟೆ ಸ್ಥಿತಿಯ ಸಹಕಾರವನ್ನು ಸ್ಥಾಪಿಸುವುದು.
- ನೈರ್ಮಲ್ಯ ಕ್ಷೇತ್ರದಲ್ಲಿರುವ ಔಪಚಾರಿಕ ಮತ್ತು ಅನೌಪಚಾರಿಕ ಕ್ಷೇತ್ರಗಳ ಕೆಲಸಗಾರರ ಆರೋಗ್ಯ ರಕ್ಷಣೆಗಾಗಿ ನಿಯಮಗಳನ್ನು ಅನುಷ್ಠಾನಗೊಳೀಸುವುದು ಮತ್ತು ಅಳವಡಿಸಿಕೊಳ್ಳುವುದು.
- ನಗರ ಪ್ರವಾಹಗಳನ್ನು ಕಡಿಮೆಗೊಳಿಸುವುದು ಮತ್ತು ಜನರ ಮೇಲೆ ಅದರ ಪರಿಣಾಮವನ್ನು ಕಡಿಮೆ ಮಾಡುವುದು.
- ತಾಂತ್ರಿಕತೆಗಳ ಬಳಕೆ, ವಿಶೇಷವಾಗಿ ಐಸಿಟಿಯನ್ನು ಪ್ರವಾಹ ಉಂಟಾಗಬಹುದಾದ ಮತ್ತು ಅಪಾಯದ ನಕ್ಷೆಯ ಮೂಲಕ ಮುನ್ಸೂಚನೆಯನ್ನು ಉತ್ತಮಪಡಿಸುವುದು ಮತ್ತು ತಂತ್ರಗಳನ್ನು ಆಧುನೀಕರಿಸುವುದು.
- ಪ್ರವಾಹದ ನೀರನ್ನು ಸಂಪನ್ಮೂಲವಾಗಿ ಬಳಸಲು ಮೂಲಸೌಕರ್ಯವನ್ನು ರಚಿಸುವುದು.
- ನಗರಗಳು ಮತ್ತು ಅವುಗಳ ಸುತ್ತಮುತ್ತಲಿನ ಎಲ್ಲ ಕೊಳಚೆಗಳಿಂದ ಮುಕ್ತಗೊಳಿಸುವುದು ಮತ್ತು ಮುನ್ಸಿಪಲ್ ಘನ ತ್ಯಾಜ್ಯದಿಂದ ಪರಿಸರ ಮತ್ತು ಸಮಾಜದ ಮೇಲೆ ಶೂನ್ಯ ಪರಿಣಾಮವನ್ನು ಖಚಿತಪಡಿಸಿಕೊಳ್ಳುವುದು.
- ಎಮ್‌ಎಸ್‌ಡಬ್ಲ್ಯೂ ನಿರ್ವಹಣೆಯಲ್ಲಿ ತ್ಯಾಜ್ಯ ಸಂಸ್ಕರಣೆಯಲ್ಲಿ, ಗರಿಷ್ಟ ಸಂಗ್ರಹಣೆ ಮತ್ತು ಸಮಯದಂತೆ ಸಾಗಾಣೀಕೆಯಲ್ಲಿ ವಿಕೇಂದ್ರೀಕರಿಸುವಿಕೆಯನ್ನು ಅಳವಡಿಸಿಕೊಂಡು ದಕ್ಷತೆಯನ್ನು ತರುವುದು.

- ಸಂಸ್ಕರಣೆಗೆ ಹೊಸ ತಂತ್ರಜ್ಞಾನ, ಪುನಶ್ಚೇತನ ಮತ್ತು ಪುನರ್ಬಳಕೆ, ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆಯನ್ನೊಳಗೊಂಡಂತೆ ಪ್ರೋತ್ಸಾಹಿಸುವುದು
- ಸಮಗ್ರ ಘನ ತ್ಯಾಜ್ಯ ನಿರ್ವಹಣೆಯಕಡೆಗೆ (ಐಎಸ್‌ಡಬ್ಲ್ಯೂಎಮ್) ಬದಲಾವಣೆಗೆ ಕ್ರಮತೆಗೆದುಕೊಳ್ಳುವುದು ಶ್ರೇಣೀಕರಣ ಮತ್ತು ಅದು ಯುಎಲ್‌ಬಿಗೆ ಹೊಂದಿಕೊಂಡಿರುವುದನ್ನು ಖಚಿತಪಡಿಸುವುದು.
- ಕಾನೂನು ಮತ್ತು ಹಣಕಾಸಿನ ಸಾಮರ್ಥ್ಯವಿರುವ ಸಂಘಟಿತ ಮೆಟ್ರೋಪಾಲಿಟನ್ ಸಂಚಾರಿ ಪ್ರಾಧಿಕಾರ (ಯುಎಮ್‌ಟಿಎ) ಸ್ಥಾಪಿಸುವುದು.
- ಎಲ್ಲರಿಗೂ ಕೈಗೆಟುಕುವ ದರದಲ್ಲಿ ಸಾಕಷ್ಟು ಮನೆಗಳು ದೊರೆಯುವಂತೆ ಮಾಡುವುದು.
- ತುಳಿತಕ್ಕೊಳಗಾದ ಗುಂಪುಗಳಿಗಾಗಿ ವಸತಿಯನ್ನು ನೀಡುವತ್ತ ಹೆಚ್ಚು ರಾಜ್ಯ ಮಟ್ಟದ ಕಾರ್ಯಕ್ರಮಗಳನ್ನು ರಚಿಸುವುದು.
- ಕೈಗೆಟುಕುವ ದರದಲ್ಲಿ ಮನೆ ಕಟ್ಟಲು ಭೂಮಿಯ ಲಭ್ಯತೆಯನ್ನು ಹೆಚ್ಚಿಸುವುದು.
- ಬಡವರಿಗೆ ಮನೆಗಳು ಕೈಗೆಟುಕುವಂತೆ ಕಾರ್ಯನಿರ್ವಹಣೆ ಮಾಡುವುದು ಮತ್ತು ಜಿಲ್ಲೆಯಲ್ಲಿ ಒಂದು ನಗರಕ್ಕೆ ಕನಿಷ್ಟ ಎರಡು ಕೊಳೆಗೇರಿ ಮುಕ್ತ ಪಟ್ಟಣಗಳನ್ನು ನಿರ್ಮಾಣ ಮಾಡುವುದು
- ವಸತಿ ಕಾರ್ಯಕ್ರಮಗಳನ್ನು ಉದ್ಯೋಗ ಕಾರ್ಯಕ್ರಮ ಮತ್ತು ಉದ್ಯೋಗ ಸೃಷ್ಟಿ ಕೌಶಲ್ಯಾಭಿವೃದ್ಧಿ ಕಾರ್ಯತಂತ್ರಗಳೊಂದಿಗೆ ಸಂಯೋಜಿಸುವುದು
- ಕಡಿಮೆ ಖರ್ಚಿನ ಮತ್ತು ದೇಶೀಕಯ ಮನೆ ನಿರ್ಮಾಣ ತಂತ್ರಜ್ಞಾನಗಳನ್ನು ಪ್ರೋತ್ಸಾಹಿಸುವುದು.
- ವಸತಿ ಕಾರ್ಯಕ್ರಮಗಳನ್ನು ಮೂಲಭೂತ ಸೌಕರರ್ಯಗಳ ನಿಯಮಗಳೊಂದಿಗೆ ಸಂಯೋಜಿಸುವುದು
- ಎಲ್ಲಾ ಹಂತದ ಆದಾಯವಿರುವ ಜನರಿಗೆ ಬಾಡಿಗೆ ಮನೆಗಳ ಲಭ್ಯತೆಯನ್ನು ವಿಸ್ತರಿಸುವುದು
- ನಗರಗಳಲ್ಲಿ ಶುದ್ಧಗಾಳಿಗೆ ಅವಕಾಶವಾಗುವಂತೆ ಕಡಿಮೆ ಇಂಗಾಲದ ಮಾದರಿಗಳನ್ನು ಪ್ರೋತ್ಸಾಹಿಸಿ ಎಲ್ಲರಿಗೂ ಸುರಕ್ಷಿತ ಮತ್ತು ಸುಲಭಲಭ್ಯ ಸಾರಿಗೆಯನ್ನು ಒದಗಿಸುವುದು.
- ಎಲ್ಲಾ ನಗರ ಪ್ರದೇಶಗಳಿಗೆ ತಡೆಯಿರಿ–ಬದಲಾಯಿಸಿ–ಅಭಿವೃದ್ಧಿ(ಎಎಸ್‌ಐ) ಚೌಕಟ್ಟನ್ನು ಪ್ರಸ್ತಾಪಿಸುವುದು.
- ಅನಗತ್ಯ ಪ್ರಯಾಣದ ಬೆಳವಣಿಗೆಯನ್ನು ಕಡಿಮೆ ಮಾಡಿ ಅಥವಾ ತಡೆಯುವುದು.
- ಪ್ರಯಾಣವನ್ನು ವೈಯಕ್ತಿಕ ವಾಹನ ಮಾದರಿಯಿಂದ ಎನ್‌ಎಮ್‌ಟಿ ಮತ್ತು ಸಾರ್ವಜನಿಕ ಸಾರಿಗೆಗೆ ಬದಲಾಯಿಸುವುದು.
- ಪ್ರತಿ ಮಾದರಿಗೂ ಕಾರ್ಯನಿರ್ವಹಣೆ ಮತ್ತು ಇಂಧನ ಮತ್ತು ಇಂಗಾಲ ಸಾಮರ್ಥ್ಯವನ್ನು ಉತ್ತಮ ಪಡಿಸಿ.
- ನಗರಗಳನ್ನು ಬದಲಾಗುವ ವಾತಾವರಣದ ವಿಪತ್ತುಗಳಿಗೆ ಮತ್ತು ಚೇತರಿಕೆಗಳಿಗೆ ಅನುಗುಣವಾಗಿಸುವುದು
- ಜಿಲ್ಲಾಮಟ್ಟದ ವಿಪತ್ತು ನಿರ್ವಹಣಾ ಯೋಜನೆಗಳನ್ನು ಮಾಡುವುದು
- ಎಲ್ಲಾ ಯೋಜನೆಗಳ ಮೌಲ್ಯ ಮಾಪನ ಮಾಡುವ ಒಂದು ನೋಡಲ್ ಸಂಸ್ಥೆಯನ್ನು ರಚಿಸುವುದು
- ನಗರ ಮಟ್ಟದ ಕ್ರಿಯಾ ಯೋಜನೆಗಳನ್ನು ಮಾಡುವುದು.
- **ಪ್ರತಿ ನಗರ ರಾಷ್ಟ್ರೀಯ ಹೆದ್ದಾರಿಗಳ ಮುನ್ಸಿಪಲ್ ಕೌನ್ಸಿಲ್ (ಸಿಎಮ್‌ಸಿ) ಗಳಲ್ಲೂ ಹೊರ ಭಾಗದ ಟ್ರಕ್ (ಲಾರಿ) ಮತ್ತು ಸರಕುಸಾಗಣೆ ನಿಲ್ದಾಣ ನಿರ್ಮಿಸುವುದು**
- ಗ್ರಾಮ ಪಂಚಾಯಿತಿ ಮಟ್ಟದ ಕೆರೆ ಸಂರಕ್ಷಣಾ ಸಮಿತಿಯೊಂದಿಗೆ ಅರೆ ನ್ಯಾಯಾಲದ ಅಧಿಕಾರವಿರುವ ರಾಜ್ಯ ಮಟ್ಟದ ಕೆರೆ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪನೆ ಮಾಡುವುದು (ಸಹಕಾರಿಗಳು/ಎನ್‌ಜಿಒಗಳನ್ನು ಸದಸ್ಯರನ್ನಾಗಿ ಹೊಂದಿರುವಂತೆ)

**ಸಾರಿಗೆ ಮತ್ತು ಸಂಚಾರ ನಿರ್ವಹಣೆ.**

- ಸಿಗ್ನಲ್ (ಸೂಚನೆ) ಗಳು ಮತ್ತು ಸ್ಮಾರ್ಟ್ ಸಂಚಾರಿ ನಿರ್ವಹಣೆ – ಉತ್ತಮ ನಾಗರೀಕ ಮೂಲಸೌಕರ್ಯ
- ತಂತ್ರಜ್ಞಾನ–ಹೊಂದಿರುವ, ಸ್ವಯಂಚಾಲಿತ ಸಂಚಾರ ನಿರ್ವಹಣಾ ವ್ಯವಸ್ಥೆಯನ್ನು ನಗರದಾದ್ಯಂತ ಸಿಗ್ನಲ್(ಸೂಚನೆ)ಗಳಿಗೆ ಸಂಪರ್ಕಿಸಿ ನಗರದಲ್ಲಿ ಸಂಚಾರ ಸ್ಥಿತಿಯನ್ನು ಉತ್ತಮಪಡಿಸುವುದು.
- ದಟ್ಟಣೆ ಮತ್ತು ಹೆಚ್ಚು ಉದ್ದದ ಸಂಚಾರವನ್ನು ನಾವು ಕಡಿಮೆ ಮಾನವ ಸಂಪನ್ಮೂಲ ಬಳಸಿ ಸುಗಮಗೊಳಿಸಿದಲ್ಲಿ
- ಪ್ರಪಂಚದ ಪ್ರಮುಖ ನಗರಗಳ ಉತ್ತಮ ಅಭ್ಯಾಸಗಳನ್ನು ಪಡೆದುಕೊಳ್ಳುವುದು
- ಉತ್ತಮ ಸಂಚಾರಿ ಸೂಚನೆಗಳು(ಸಿಗ್ನಲ್) ನಮ್ಮ ರಸ್ತೆಗಳನ್ನು ಮತ್ತು ದಾಟುವಿಕೆಯನ್ನು ಪಾದಚಾರಿ ಸ್ನೇಹಿಯಾಗಿ ಮಾಡುತ್ತವೆ, ಅಪಘಾತಗಳನ್ನು ಕಡಿಮೆ ಮಾಡುತ್ತವೆ ಮತ್ತು ಪಾದಚಾರಿಗಳಿಗೆ, ವಿಕಲ ಚೇತನರಿಗೆ, ಮತ್ತು ಮಕ್ಕಳಿಗೆ ನಗರವನ್ನು ಸುರಕ್ಷಿತ ನಗರವನ್ನಾಗಿಸುತ್ತವೆ. ವ್ಯವಸ್ಥೆಯಲ್ಲಿ ಜಿಪಿಎಸ್ ಮತ್ತ ಡ್ರೋಣ್ ಬಳಸಬೇಕು ಇದರಿಂದ ರಸ್ತೆಯ ಮೇಲಿನ ಸಂಚಾನ ಇಕ್ಕಟ್ಟು ಕಡಿಮೆಯಾಗುತ್ತದೆ ಮತ್ತು ನಿಜವಾದ ಸಮಯದಲ್ಲಿನ ದಟ್ಟಣೆಯನ್ನು ತಡೆಯಬಹುದಾಗಿದೆ. ಮುಂದಿನ 5 ವರ್ಷಗಳಲ್ಲಿ ಸಿಗ್ನಲ್ ಮುಕ್ತ ಕಾರಿಡಾರ್‌ಗಳನ್ನು ದ್ವಿಗುಣಗೊಳಿಸುವುದು.
- ಪ್ರತಿ ನಗರಗಳನ್ನು 6–8 ಗ್ರಿಡ್ (ಜಾಲ) ಗಳನ್ನಾಗಿ ವಿಭಾಗಿಸುವುದು. ಪ್ರತಿ ಜಾಲವು ಯಾವಾಗಲೂ ಸಿಗ್ನಲ್ ಮುಕ್ತ ಸಂಚಾರಿ ಕಾರಿಡಾರ್ ಹೊಂದಿರುತ್ತದೆ.

- ಒಂದು ಗ್ರಿಡ್ ನಿಂದ ಮತ್ತೊಂದಕ್ಕೆ ಚಲಿಸುವಾಗ ಸಂಚಾರಿ ದಟ್ಟಣೆ 6-8 ಗ್ರಿಡ್ ಸಂಧಿಸುವಲ್ಲಿ ಮಾತ್ರ ಇರಬೇಕು. ಒಂದು ಗ್ರಿಡ್ ಕನಿಷ್ಟ 10 ಕಿ.ಮೀ.ಯಷ್ಟಿರುವುದು.

- ಸಂಚಾರಿ ನಿರ್ವಹಣೆಗೆ ಡ್ರೋಣ್ ತಂತ್ರಜ್ಞಾನ ಬಳಸಿಕೊಳ್ಳುವುದು.

- ಆಂಬ್ಯುಲೆನ್ಸ್‌ಗಳು, ಅಗ್ನಿಶಾಮಕ ವಾಹನಗಳು, ಪೋಲೀಸ್ ವಾಹನಗಳು, ಶಾಲಾ ವಾಹನಗಳು ಮತ್ತು ವಿಕಲ ಚೇತನರನ್ನು ಒಯ್ಯುತ್ತಿರುವ ವಾಹನಗಳಿಗೆ ಮೀಸಲಾಗಿರುವ ಮಾರ್ಗಗಳು.

- ಎಲ್ಲಾ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಡಿಜಿಟಲ್ ಲೈಬ್ರರಿ ಇರುವುದು

- ಇಂದ್ರ ಸಾರಿಗೆ- ಗಾರ್ಮೆಂಟ್ ಮತ್ತು ನಿರ್ಮಾಣ ಕಾರ್ಮಿಕರಿಗಾಗಿ

- 16 ಆಸನಗಳನ್ನುಳ್ಳ ತುರ್ತು ಸಲಕರಣೆಗಳಾದ ಆಮ್ಲಜನಕದ ಕಿಟ್, ಮಾನೀಟರ್ ಇತ್ಯಾದಿಗಳಿರುವ ಆಂಬ್ಯುಲೆನ್ಸ್ ವಾಹನಗಳನ್ನು ಪ್ರಾರಂಭಿಸಲಾಗುವುದು ಇದರಲ್ಲಿ ತರಬೇತಿ ಪಡೆದ ನರ್ಸ್‌ಗಳಿದ್ದು ಅವುಗಳನ್ನು ವೈದ್ಯಕೀಯ ಕಾಲೇಜುಗಳು ಮತ್ತು ಜಿಲ್ಲಾ ಆಸ್ಪತ್ರೆಗಳ ಬಳಿ ನಿಲ್ಲಿಸಲಾಗುವುದು.

- ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬೆಂಗಳೂರು ಮೆಟ್ರೋಪಾಲಿಟನ್ ನಗರದಲ್ಲಿ ಬೃಹತ್ತಾಗಿ ವಿಸ್ತರಿಸಲಾಗುವುದು.

- ಇಂದಿರಾ ಸಂಚಾರಿ ಕ್ಲಿನಿಕ್ ಪ್ರಾರಂಭ. ವೈದ್ಯಕೀಯ ಸೌಲಭ್ಯಗಳನ್ನು ಎಲ್ಲಾ 6 ಸಾರಿಗೆ ಪ್ರದೇಶಗಳಲ್ಲು ಇರಲಿವೆ.

### ಪರಿಸರ ಸುಸ್ಥಿರತೆ

- ಪರಿಸರ ಮತ್ತು ಸುಸ್ಥಿರತೆ ಸಂರಕ್ಷಣೆ ಮತ್ತು ಜಿಲ್ಲಾ ಗಣಗಾರಿಕೆ ನಿಧಿಯ ಲಭ್ಯತೆಯನ್ನು ಖಚಿತಪಡಿಸಿಕೊಂಡು ತಕ್ಷಣವೇ ಸಮರ್ಥ ಮತ್ತು ಪರಿಣಾಮಕಾರಿ ಬಳಕೆಯನ್ನು ಪ್ರಾರಂಭಿಸುವುದು- ಅಗತ್ಯ ಮೇಲ್ವಿಚಾರಣೆ ಮತ್ತು ವರದಿಗಾರಿಕೆಯನ್ನು ಸಾರ್ವಜನಿಕಗೊಳಿಸಲಾಗುವುದು.

- ಅವಸಾನದ ಅಂಚಿನಲ್ಲಿರುವ 25 ಸಸ್ಯಗಳನ್ನು ಪುನಸ್ಥಾಪನೆ ಮಾಡುವುದು

### ಪರಿಸರ ಮತ್ತು ಅರಣ್ಯಗಳು :

- ವನತೋಟಗಾರಿಕೆಯನ್ನು ಪ್ರೋತ್ಸಾಹಿಸಿ ಪ್ರತಿ ವರ್ಷ 11% ರಂತೆ 3 ವರ್ಷಗಳಲ್ಲಿ 33% ರಷ್ಟು ಭೌಗೋಳಿಕ ಕ್ಷೇತ್ರವನ್ನು ವಿಸ್ತರಿಸುವುದು.ನಮ್ಮ ಸರ್ಕಾರವು ಎಲ್ಲಾ ಅಗತ್ಯ ಬೆಂಬಲಗಳಾದ ಹಣಕಾಸು ಮತ್ತು ಇತರೆ ಸೌಲಭ್ಯಗಳನ್ನು ಇಡೀ ಬೆಳೆಗಾರರಿಗೆ ನೀಡುತ್ತದೆ. ಭಾರತ ಕ್ರಿ.ಶ. 1700 ರಲ್ಲಿ ವಿಶ್ವ ವ್ಯವಹಾರದ 25% ರಷ್ಟು ಏಕಸ್ವಾಮ್ಯವನ್ನು ಹೊಂದಿತ್ತು.

- ಬಿದಿರನ್ನು ಒಂದು ಮುಂಚೂಣಿಯನ್ನಾಗಿ ಬಳಸಿ ಸಸ್ಯಗಳನ್ನು ಬಳಸುವುದು

- ಬಿದಿರಿನ ಕಟ್ಟಡಗಳು ಮತ್ತು ವಿನ್ಯಾಸಗಳನ್ನು ಅಭಿವೃದ್ಧಿಪಡಿಸಲು ಮತ್ತು ಗೃಹ ಸಮಸ್ಯೆಗಳನ್ನು ಕಡಿಮೆ ಮಾಡಲು.

- ಆವಿಷ್ಕಾರೀ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಮತ್ತು ಉದ್ಯೋಗ ಮತ್ತು ಸಂಪತ್ತನ್ನು ಉತ್ಪಾದಿಸಲು ಬಿದಿರು ಇಂಗಾಲ ಚಾಲಿತ ಕೈಗಾರಿಕೆಗಳನ್ನು ಪ್ರಾರಂಭಿಸುವುದು.

### ಮಾಲಿನ್ಯ ನಿಯಂತ್ರಣಗಳು

- ಮಾಲಿನ್ಯ ಮಾನದಂಡಗಳನ್ನು ಉಲ್ಲಂಘಿಸುವ ಕೈಗಾರಿಕೆಗಳು / ಸಂಸ್ಥೆಗಳವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.

- ಸಾರ್ವಜನಿಕ ಸಾರಿಗೆಯ ಹಂಚಿಕೆಯನ್ನು 55% ರಿಂದ 80% ಕ್ಕೆ ಹೆಚ್ಚಿಸುವುದು.

- ಸಾರ್ವಜನಿಕ ಸಾರಿಗೆ ಬಸ್‌ಗಳು ಮತ್ತು ವಾಹನಗಳನ್ನು ಸಿಎನ್‌ಜಿಗಳಾಗಿ ಪರಿವರ್ತಿಸುವುದು.

- ಹಳೆಯ ವಾಹನಗಳನ್ನು ಹೊರಹಾಕುವುದು

- ಅರಣ್ಯೀಕರಣ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು ಮತ್ತು ಖಾಲಿ ಇರುವ ಸರ್ಕಾರಿ ಮತ್ತು ಖಾಸಿಗೆ ಭೂಮಿಗಳಲ್ಲಿ ಮರಗಳನ್ನು ನೆಡುವುದು.

- ಒಳಚರಂಡಿ ನೀರು ಜಲ ಸ್ಥಾವರಗಳಿಗೆ ಹರಿಯುವುದನ್ನು ತಡೆಯಲು ವ್ಯಾಪಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು.

- ಕಾನೂನುಗಳನ್ನು ಉಲ್ಲಂಘಿಸುವ ಮೇಲ್ವಿಚಾರಣಾ ಪ್ರಾಧಿಕಾರಗಳಿಗೆ ದಂಡ ವಿಧಿಸುವುದು.

- ವಾಹನ ನೋಂದಣಿಗಳ ಮೇಲೆ ನಿರ್ಬಂಧ ಹೇರುವುದು.

## ಮಹಿಳಾ ಸಬಲೀಕರಣ

# ಎಲ್ಲಾ ಪ್ರಗತಿಯ ಹೃದಯದಲ್ಲಿ ಮಹಿಳೆಯರು ಮತ್ತು ಮಕ್ಕಳು

ಕಾಂಗ್ರೆಸ್ ನ್ಯಾಯಯುತ ಮಾನವೀಯ ಸಮಾಜವನ್ನು ಹೊಂದುವದರಲ್ಲಿ ನಂಬಿಕೆ ಇರಿಸಿಕೊಂಡಿದೆ ಇದು **ಮಹಿಳೆಯನ್ನು ತಮ್ಮ ಸಾಮರ್ಥ್ಯವನ್ನು ಪೂರ್ಣವಾಗಿ ಕಂಡುಕೊಳ್ಳಲು ಮತ್ತು ಅವರ ಆಯ್ಕೆ ಗೌರವಯುತ ಜೀವನವನ್ನು ನಡೆಸಲು** ಅನುವು ಮಾಡಿಕೊಡುತ್ತದೆ ಅವರು ಸಮಾನ ಭಾಗೀದಾರರಾಗಿ ಸಾಮಾಜಿಕ ಬದಲಾವಣೆಯನ್ನು ಪ್ರಭಾವಿಸುವ ತೀರ್ಮಾನ ಮಾಡುವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಹಾಯ ಮಾಡುತ್ತದೆ. ನಾವು ಸಾಧಿಸುತ್ತೇವೆ :

- ನಾವು ಎಲ್ಲಾ ಕ್ಷೇತ್ರಗಳಲ್ಲಿ ಮತ್ತು ವ್ಯಾಪಕ ಸಮಾಜದಲ್ಲಿಯೂ ಸುರಕ್ಷಿತ ಕೆಲಸದ ವಾತಾವರಣದ ಭರವಸೆ ನೀಡುತ್ತೇವೆ.
- ಯಾವುದೇ ವೇತನವಿಲ್ಲದೆ ಗೃಹ ಕೃತ್ಯಗಳ ವಾತವರಣದಲ್ಲಿ ತೊಡಗಿಸಿಕೊಂಡಿರುವ ಮಹಿಳಾ ಉದ್ಯಮಶೀಲರಿಗೆ ಮಹಿಳೆಯರಿಗೆ ಗುರಿಯ ಕಾರ್ಯಕ್ರಮಗಳನ್ನು ಪ್ರಾರಂಭಿಸುತ್ತೇವೆ.
- ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಖರ್ಚುಗಳನ್ನು ನಿಭಾಯಿಸಲು ಲಿಂಗ ನ್ಯಾಯಡ್ಡಿ ಮುಂಗಡ ಪತ್ರದ ಭರವಸೆ ನೀಡುತ್ತೇವೆ.
- ಸ್ಥಳೀಯ ಸಂಸ್ಥೆಗಳು ಮತ್ತು ಲಿಂಗಸಂಬಂಧಿ ಚಿಂತಕರ ಚಾವಡಿಯ  ಮೂಲಕ ಯೋಜನೆಯ ಪ್ರಕ್ರಿಯೆಯಲ್ಲಿ ಲಿಂಗ ದೃಷ್ಟಿಕೋನವನ್ನು  ಪ್ರಾರಂಭಿಸುವುದು
- ಲಿಂಗಾಭಿವೃದ್ಧಿ ಸೂಚ್ಯಂಕಗಳನ್ನು ಅಭಿವೃದ್ಧಿಪಡಿಸುವುದು(ಜಿಡಿಐ) ಲಿಂಗ ಅಸಮಾನತೆ ಸೂಚಿ.
- ಪೋಲೀಸ್, ಶಾಸನ, ನ್ಯಾಯಾಲಯ ಮತ್ತು ಟ್ರೇಡ್ ಯೂನಿಯನ್ ಗಳನ್ನು ಲಿಂಗ ಸಂವೇದಿಯನ್ನಾಗಿಸಿ ಮುಖ್ಯವಾಹಿನೀಕರಣ ಮಾಡುವುದು.
- ಎಲ್ಲಾ ಸಚಿವಾಲಯ/ಇಲಾಖೆಗಳಲ್ಲಿ ಸರ್ಕಾರದ ಇಲಾಖೆಗಳ ಎಲ್ಲಾ ಕ್ಷೇತ್ರಗಳಲ್ಲಿ ಲಿಂಗ ಕಾಳಜಿಯನ್ನು ಮುಖ್ಯವಾಹಿನೀಕರಣಗೊಳಿಸುವ ದೃಷ್ಟಿಯಿಂದ ಕ್ರಿಯಾಶೀಲ ಲಿಂಗ ಮುಂಗಡಪತ್ರ ಕೋಶಗಳನ್ನು ಸ್ಥಾಪಿಸುವುದು.
- 2018 ರಿಂದ ಪ್ರಾರಂಭಿಸಿ 8000 ಗ್ರಾಮೀಣ ಮಹಿಳೆಯರನ್ನು ಒಳಗೊಂಡಂತೆ ಪ್ರತಿ ವರ್ಷ 1,000 ಮಹಿಳೆಯರ ಕೌಶಲ್ಯಾಭಿವೃದ್ಧಿ ಮಾಡುವುದು.
- ಪ್ರತಿ ವರ್ಷ 1,000 ಮಹಿಳಾ ಉದ್ಯಮಿಗಳಿಗೆ ಬೆಂಬಲ ನೀಡಿ ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸುವುದು.
- ಪಾರ್ಲಿಮೆಂಟ್ ಮತ್ತು ರಾಜ್ಯ ವಿಧಾನ ಸಭೆಗಳಿಗೆ ಶೇಕಡಾ 33 ಮೀಸಲಾತಿಯೊಂದಿಗೆ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು.
- ಒಂದು ಜಿಲ್ಲೆಯಲ್ಲಿ ಮೊದಲನೇ ಮಹಿಳಾ ಬ್ಯಾಂಕನ್ನು ಮಾರ್ಗದರ್ಶಕ ಬ್ಯಾಂಕ್ ಆಧಾರದ ಮೇಲೆ ಪ್ರಾರಂಭಿಸುವುದು ಅದು ಸಂಘಟಿತ ಬ್ಯಾಂಕ್ ಕ್ಷೇತ್ರದಿಂದ ಹೆಚ್ಚು ಮಹಿಳೆಯರನ್ನು ಹೊಂದಿರಬೇಕು ಮತ್ತು ಅವರನ್ನು ಗ್ರಾಮೀಣ ಕರ್ನಾಟಕದಲ್ಲಿ ಸಬಲೀಕರಣ ಮಾಡಬೇಕು.
- ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪೂರ್ಣವಾಗಿ ನಮ್ಮ ಅನುದಾನದಿಂದ ಕಲ್ಯಾಣ ಮಂಟಪಗಳು/ಸಮುದಾಯ ಭವನಗಳು ಕಟ್ಟುವುದು.
- ಕುಟುಂಬ ಶ್ರೀ ಮಾದರಿಯಲ್ಲಿ ರಾಜ್ಯ ಮಟ್ಟದ ಸ್ತ್ರೀ ಶಕ್ತಿ ಒಕ್ಕೂಟವನ್ನು ರಚಿಸುವುದು.
- 5000 ಸ್ತ್ರೀ ಶಕ್ತಿ ಮೈಕ್ರೋ ಉದ್ಯಮಗಳನ್ನು 5 ವರ್ಷಗಳ ಅವಧಿಯಲಿ ಬೆಳೆಸುವುದು ; 21 ನೇ ಶತಮಾನದ ಅಗತ್ಯಗಳಾದ : ಆಹಾರ ಸಂಸ್ಕರಣೆ, ಅಡುಗೆ, ಸಂಚಾರಿ ಕ್ಯಾಂಟೀನ್‌ಗಳು, ಘನ ತ್ಯಾಜ್ಯ ನಿರ್ವಹಣೆ, ಪಾರ್ಕಿಂಗ್ ನಿರ್ವಹಣೆ.
- ಪ್ರತಿ ತಾಲ್ಲೋಕಿನಲ್ಲಿ ಕೆಲಸ ಮಾಡುವ ಮಹಿಳೆಯರ ಹಾಸ್ಟೆಲ್‌ಗಳನ್ನು ನಿರ್ಮಿಸುವುದು ಆ ಮೂಲಕ ಅವರನ್ನು ಸಬಲೀಕರಣಗೊಳಿಸಿ ಕಾರ್ಯಪಡೆಯಲ್ಲಿ ಅವರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು.

- ಕರ್ನಾಟಕದಾದ್ಯಂತದ ಕುಶಲ ಸಂಪ್ರದಾಯಗಳ ಸ್ತ್ರೀ ಶಕ್ತಿ ಸೂಕ್ಷ್ಮ ಉದ್ಯಮಗಳನ್ನು ಸ್ಥಾಪಿಸುವುದು ಅಂದರೆ, ಚನ್ನಪಟ್ಟಣದ ಗೊಂಬೆಗಳು, ಇಳಕಲ್ ಸೀರೆಗಳು, ಕಿನ್ನಾಳ ಕುಶಲ ಕಲೆ.
- ಮಹಿಳಾ ಸಮಖ್ಯಾವನ್ನು ವಿಸ್ತರಣೆ ಮಾಡಿ ಎಲ್ಲಾ ಜಿಲ್ಲೆಗಳನ್ನು ಒಳಗೊಳ್ಳುವುದು ಮತ್ತು ತಾಂತ್ರಿಕ ಸಂಪನ್ಮೂಲ ಘಟಕಗಳಾಗುವುದು.
- ರಚನೆಯಾದ ಸ್ತ್ರೀ ಶಕ್ತಿ ಸಂಘಗಳು, ಸ್ತ್ರೀಶಕ್ತಿ ಗುಂಪುಗಳನ್ನು ನೋಂದಣಿ ಮಾಡುವುದು
- ಸ್ತ್ರೀ ಶಕ್ತಿ ಸಂಘಗಳಿಂದ ಉತ್ಪಾದಿಸಲಾದ ಉತ್ಪನ್ನಗಳ ಮಾರಾಟಕ್ಕೆ ಪರಿಣಾಮಕಾರಿ ಮಾರುಕಟ್ಟೆ ಮಾದರಿಗಳನ್ನು ರಚಿಸುವುದು.
- ಸ್ತ್ರೀ ಶಕ್ತಿ ಗುಂಪುಗಳನ್ನು ಉದ್ಯೋಗ ದೃಷ್ಟಿಯ ಕೋರ್ಸ್‌ಗಳಗಾಗಿ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸುವುದು.
- ಪ್ರತಿ ತಾಲ್ಲೋಕುಗಳಲ್ಲೂ ಸ್ತ್ರೀ ಶಕ್ತಿ ಭವನಗಳನ್ನು ನಿರ್ಮಿಸುವುದು.
- ನಮ್ಮ ಮೆಟ್ರೋದಲ್ಲಿ ಮಹಿಳಾ ಭೋಗಿಯನ್ನು ಪ್ರತ್ಯೇಕಿಸುವುದು.
- ಹೆಣ್ಣು ಮಕ್ಕಳ ಶಾಲೆ, ಹೆಣ್ಣು ಮಕ್ಕಳ / ಮಹಿಳೆಯರ ಹಾಸ್ಟೆಲ್‌ಗಳು, ಮಹಿಳಾ ಕಾಲೇಜುಗಳು, ಹೆಚ್ಚು ಮಹಿಳೆಯರು ನೇಮಕಗೊಂಡಿರುವ ಗಾರ್ಮೆಂಟ್ ಫ್ಯಾಕ್ಟರಿಗಳು ಮತ್ತು ಐಟಿ ಕೇಂದ್ರಗಳ ಹತ್ತಿರ ಸಿಸಿಟಿವಿಗಳನ್ನು ಅಳವಡಿಸುವುದು.
- ಸಿದ್ದು ಉಡುಪು ಕೈಗಾರಿಗೆ ಮತ್ತು ಸಂಬಂಧಿತ ಕೈಗಾರಿಕೆಗಳಿರುವ ತಾಲ್ಲೋಕುಗಳಲ್ಲಿ ಮಹಿಳಾಧಾರಿತ ಕೌಶಲ್ಯ ಮತ್ತು ತರಬೇತಿ ಕೇಂದ್ರಗಳನ್ನು ತೆರೆಯುವುದು.
- ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಆಧಾರಿತ ಉದ್ಯೋಗಗಳನ್ನು ಸೃಷ್ಟಿಸುವುದು ಇದರಿಂದ ಮಹಿಳೆಯರು ನಗರಗಳಲ್ಲಿರುವ ಕಾರ್ಖಾನೆಗಳತ್ತ ಹೋಗುವುದನ್ನು ತಡೆಯಬಹುದು–ಇದರಿಂದ ಗ್ರಾಮಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಕೃಷಿ ಚಟುವಟಿಕೆಗಳಿಗೆ ಸ್ಥಳೀಯ ಕಾರ್ಮಿಕರನ್ನು ಸಹ ಸೃಜಿಸುತ್ತದೆ.
- ಅನಧಿಕೃತ ಗರ್ಭಪಾತ ಮತ್ತು ಲಿಂಗ ನಿರ್ಧಾರ ಕೇಂದ್ರಗಳನ್ನು ಕಠಿಣ ಪರೀಕ್ಷೆಗೆ ಒಳಪಡಿಸಬೇಕು
- ಎಲ್ಲಾ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳು ಐಐಟಿಗಳು ಮತ್ತು ಶಾಲೆ ಹಾಗೂ ಸಾರ್ವಜನಿಕ ಶೌಚಾಲಯಗಳಲ್ಲಿ ರಿಯಾಯಿತಿ ನ್ಯಾಪ್‌ಕಿನ್ ವಿತರಣಾ ಯಂತ್ರಗಳನ್ನು ಸ್ಥಾಪಿಸಬೇಕು.
- ಸ್ಯಾನಿಟರಿ ಪ್ಯಾಡ್ (ನೈರ್ಮಲ್ಯ) ಗಳ ಮೇಲಿನ ತೆರಿಗೆಯನ್ನು ತೆಗೆದುಹಾಕಬೇಕು.
- ಪಿಡಿಎಸ್ ನಿಂದ ಬಿಪಿಎಲ್ ಮಹಿಳೆಯರಿಗೆ ಉಚಿತ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಹಂಚಿಕೆ ಮಾಡುವುದು
- ಅಕುಶಲ ಕಾರ್ಮಿಕರಾಗಿ ಗಾರ್ಮೆಂಟ್‌ಗಳು ಮತ್ತು ಇತರೆ ಸಂಸ್ಕರಣಾ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ ಆರೋಗ್ಯ ಕಾರ್ಡನ್ನು ನೀಡುವುದು.
- ಬೆಂಗಳೂರು ನಗರ ಮತ್ತು ತಾಲ್ಲೋಕುಗಳಲ್ಲಿ ಮಹಿಳಾ ಕಾರ್ಮಿಕರು ಮತ್ತು ಕೆಲಸಗಾರರಿರುವಲ್ಲಿ ವಿಶೇಷವಾಗಿ (ಗರ್ಭಕೋಶ, ಗರ್ಭಕಂಠ, ಮತ್ತು ಅಂಡಾಶಯ ಕ್ಯಾನ್ಸರ್) ಮಹಿಳಾ ಸಂಬಂಧಿತ ರೋಗಗಳಿಗೆ ಚಿಕಿತ್ಸೆ ನೀಡಲು ರೋಗಪತ್ತೆ ಕೇಂದ್ರಗಳನ್ನು ಹೊಂದಿರುವ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗಳನ್ನು ಪ್ರಾರಂಭಿಸುವುದು.
- ಉದ್ಯೋಗದಲ್ಲಿ 30% ಮೀಸಲಾತಿ
- ಸ್ನಾತಕೋತ್ತರ ಮಟ್ಟದಲ್ಲಿ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ
- ಕಡಿಮೆ ಬಡ್ಡಿ ಅಥವಾ ಬಡ್ಡಿ ರಹಿತವಾಗಿ ಹೆಣ್ಣು ಮಕ್ಕಳಿಗೆ ಶೈಕ್ಷಣಿಕ ಸಾಲ ನೀಡುವುದು.
- ಪ್ರತಿ ತಾಲ್ಲೋಕುಗಳಲ್ಲಿ ಮಹಿಳೆಯರಿಂದ ಮಹಿಳೆಯರಿಗಾನಿ ನಡೆಯುವಂತಹ ಮಹಿಳಾ ಸಹಕಾರ ಬ್ಯಾಂಕ್ ನಿರ್ಮಿಸುವುದು.
- ಹಣಕಾಸು ಸಂಸ್ಥೆಗಳು ಮತ್ತು ಸಹಕಾರ ಬ್ಯಾಂಕ್‌ಗಳಲಿ ಶೂನ್ಯ ಬಾಕಿಯ ಉಳಿತಾಯ ಖಾತೆಯನ್ನು ತೆರೆಯುವುದು.
- ಆರ್ಥಿಕವಾಗಿ ಹಿಂದುಳಿದ ವರ್ಗಗಳ ವಿಧವೆಯರಿಗೆ ಮನೆ ನಿರ್ಮಿಸುವುದು.
- ಮೆಟ್ರಿಕ್‌ಗಿಂತ ಕಡಿಮೆ ಓದಿರುವ ಮಹಿಳೆಯರಿಗೆ ಆರ್‌ಟಿಓದಲ್ಲಿ ಉಚಿತ ಮೋಟಾರು ವಾಹನ ತರಬೇತಿ ನೀಡುವುದು ಮತ್ತು ಅವರಿಗೆ ರಿಯಾಯಿತಿ ದರದಲ್ಲಿ ಆಟೋರಿಕ್ಷಾಗಳು ಮತ್ತು ಕಾರುಗಳನ್ನು ಒದಗಿಸುವುದು ಅದರಿಂದ ಅವರು ತಮ್ಮ ಜೀವನ ನಿರ್ವಹಣೆ ಮಾಡಬಹುದು ಮತ್ತು ಮಹಿಳಾ ಪ್ರಯಾಣಿಕರಿಗೆ ಸುರಕ್ಷತೆಯನ್ನು ಖಚಿತಪಡಿಸಬಹುದು (ನಿರ್ಭಯ ವಾಹಿನಿ)
- ಇಂತಹ ವಾಹನಗಳಿಗೆ ಐಟಿ/ಬಿಟಿ ಕೇಂದ್ರಗಳು, ಮಹಿಳಾ ಕಾಲೇಜುಗಳು, ಹಾಸ್ಟೆಲ್‌ಗಳು, ಪಾವತಿ ಅತಿಥಿ ಗೃಹಗಳು, ಗಾರ್ಮೆಂಟ್ ಕಾರ್ಖಾನೆಗಳು, ಮತ್ತು ಹೆಣ್ಣು ಮಕ್ಕಳ ಶಾಲೆಗಳ ಬಳಿಯಲ್ಲಿ ಪ್ರತ್ಯೇಕ ಪಾರ್ಕಿಂಗ್ ಪ್ರದೇಶವನ್ನ ನಿರ್ಮಿಸುವುದು
- ಮಹಿಳೆಯರಿಗೆ ಮಾತ್ರ ಸೇವೆಗಳನ್ನು ಸಂಜೆ 7 ಗಂಟೆಯಿಂದ ಬೆಳಗ್ಗೆ 7 ರವರೆಗೆ ನೀಡುವುದು (ಪಿಂಕ್ ಬಸ್‌ಗಳು)
- ಪಿಂಕ್ (ಗುಲಾಬಿ) ಬಣ್ಣವನ್ನು ಹೊಂದಿರುವ ರಾತ್ರಿ 7 ರಿಂದ ಬೆಳಗ್ಗೆ 7 ರವರೆಗೆ ಮಹಿಳಾ ಪ್ರಯಾಣಿಕರ ಜೊತೆಗೂಡಿ ರಾತ್ರಿ ಸಂಚಾರವನ್ನು ನಿರ್ವಹಿಸುವ ಮತ್ತು ಮಾಸಿಕವಾಗಿ ಸರ್ಕಾರದ ನಿರ್ಭಯ ನಿಧಿಯಿಂದ ಮಾಸಿಕ ಕಂತುಗಳನ್ನು ಪಡೆಯುವ ಪೋಲೀಸ್ ಪರೀಕ್ಷಿತ ಆಟೋ (ಪಿವಿಎ) ಒಂದನ್ನು ಪ್ರಾರಂಭಿಸುವುದು

- ಕೆಲಸ ಮಾಡುವ ದಂಪತಿಗಳನ್ನು ಅದೇ ಜಿಲ್ಲೆಯಲ್ಲಿ ಹುದ್ದೆ ನಿರ್ವಹಿಸಲು ಅನುವು ಮಾಡಿಕೊಡುವುದನ್ನು ಪರಿಗಣಿಸುವುದು.
- ಮಹಿಳೆಯರು ಗೃಹ ಕೈಗಾರಿಕೆಗಳನ್ನು ಪ್ರಾರಂಭಿಸುವುದನ್ನು ಪ್ರೋತ್ಸಾಹಿಸುವುದು ಅಂದರೆ ಅಡಕೆ ಹಾಳೆಗಳನ್ನು ಉಪಯೋಗಿಸಿ ಊಟದ ತಟ್ಟೆಗಳನ್ನು ತಯಾರಿಸುವುದು, ಸ್ಯಾನಿಟರಿ ನ್ಯಾಪ್‌ಕಿನ್(ನೈರ್ಮಲ್ಯದ ಬಟ್ಟೆ) ತಯಾರಿಕಾ ಘಟಕ, ಕೋಕೋಪೀಟ್ ತಯಾರಿಕೆಘಟಕ, ಫೆನಾಲ್ ತರ್ಯಾರಿಕೆ ಘಟಕ, ಪೇಪರ್ ಮತ್ತು ಬಟ್ಟೆ ಬ್ಯಾಗ್‌ಗಳು, ಮೌಲ್ಯವರ್ಧಿತ ವಸ್ತುಗಳು ಇತ್ಯಾದಿಗಳು.
- ಮಹಿಳಾ ಸಂಘಟಿತ ಕ್ಷೇತ್ರಗಳಿಗೆ ಆರೋಗ್ಯ ವಿಮೆ
- ಮಹಿಳೆಯರಿಗಾಗಿ ಮೊಬೈಲ್ ಮೂಲಕ ನೀಡಲಾಗುವ ಒತ್ತಡದ ಆಪ್ ಪ್ರಾರಂಭಿಸುವುದು ಇದನ್ನು ತುರ್ತು ಸಮಯದಲ್ಲಿ ಬಳಸಬಹುದಾಗಿದೆ.
- ಸುರಕ್ಷಿತ ಮತ್ತು ಸಹಾಯಕ ಕೆಲಸದ ಸ್ಥಳದ ನೀತಿಗಳನ್ನು ಮಹಿಳೆಯರಿಗಾಗಿ ರಚನೆ ಮಾಡುವುದು.
- ಎಲ್ಲಾ ಸಂಸ್ಥೆಗಳಲ್ಲು ಲೈಂಗಿ ದೌರ್ಜನ್ಯ ನೀತಿಯನ್ನು ಅನುಷ್ಟಾನಗೊಳಸುವುದು
- ಲೈಂಗಿಕ ದೌರ್ಜನ್ಯ ಪ್ರಕರಣಗಳ ವಿಚಾರಣೆಗಾಗಿ ಫಾಸ್ಟ್ ಟ್ರ್ಯಾಕ್ ಕೋರ್ಟ್‌ಗಳನ್ನು ಪ್ರಾರಂಭಿಸುವುದು.
- ವಿಚಾರಣೆ ಮುಕ್ತಾಯಗೊಳ್ಳುವವರೆಗೆ ಆಪಾದಿತನ ಚರ ಮತ್ತು ಸ್ಥಿರ ಆಸ್ತಿಗಳನ್ನು ವಶಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳುವುದು.
- ವಿಚಾರಣೆ ಮುಕ್ತಾಯಗೊಳ್ಳುವವರೆಗೆ ಎಲ್ಲಾ ಸರ್ಕಾರ ಸೌಲಭ್ಯಗಳಾದ ಆರೋಗ್ಯ ಕಾರ್ಡ್, ಪಿಡಿಎಸ್‌ಗಳನ್ನು ಅಮಾನತಿನಲ್ಲಿಡುವುದು.
- ಬಾಧಿತರಿಗೆ ಆರ್ಥಿಕ, ಶೈಕ್ಷಣಿಕ, ಉದ್ಯೋಗ, ಉಚಿತ ನಿವೇಶನಗಳನ್ನು ನೀಡುವುದನ್ನು ಪರಿಗಣಿಸಬಹುದು.
- ವಿಚಾರಣೆಯಲ್ಲಿ ನಿಧಾನಗತಿ– ಡಿಸಿಗಳು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್‌ಗಳ ಮೇಲೆ ಹೊರೆ ಹೆಚ್ಚಾಗುತ್ತದೆ.
- ಲಿಂಗ ಸಂವೇದನೆಗಾಗಿ ಕಾರ್ಯಕ್ರಮಗಳನ್ನು ಮೀಸಲಿರಿಸುವುದು.
- ಈಗಿರುವ ಎಲ್ಲಾ ಜಿಲ್ಲಾ ನ್ಯಾಯಲಗಳ ಆವರಣವನ್ನು ನವೀಕರಿಸಿ ಮಗು ಸ್ನೇಹಿ ನ್ಯಾಯಾಲಯಗಳನ್ನು ಸ್ಥಾಪಿಸುವುದು.
- ಯುವ ಉದ್ಯಮಶೀಲರಿಗೆ ಮಾರುಕಟ್ಟೆಯಲ್ಲಿ ಅವಕಾಶಗಳನ್ನು ಕಲ್ಪಿಸಿಕೊಡುವುದು
- ಮಹಿಳೆಯರ ದೈಹಿಕ ಕ್ಷಮತೆ ಮತ್ತು ಆರೋಗ್ಯಕ್ಕಾಗಿ ಶಿಬಿರಗಳನ್ನು ಏರ್ಪಡಿಸುವುದು
    - ತಿಳುವಳಿಕೆ ಮೂಡಿಸಲು ಮಹಿಳಾ ವಾಕಥಾನ್ ಏರ್ಪಡಿಸುವುದು
    - ಸ್ತನ ಕ್ಯಾನ್ಸರ್ ತಡೆಯುವುದು ಕಲ್ಪನೆಯನ್ನು ರೂಪಿಸಲು ರಕ್ಷಣಾತ್ಮಕ ಆರೋಗ್ಯ ಪರೀಕ್ಷೆಗಳು

**ಮಹಿಳೆಯರಿಗಾಗಿ ಕರ್ನಾಟಕ ಸುರಕ್ಷಿತವಾಗಿದೆ ಪ್ರಚಾರ ಮಾಡುವುದು ಮತ್ತು ಇವುಗಳನ್ನು ಒದಗಿಸುವುದು**

- ರಾತ್ರಿ ಗಸ್ತು
- ಸ್ಥಳೀಯ ಸುರಕ್ಷಾ ಭಾಗವಹಿಸುವಿಕೆ
- ಸ್ವಯಂ ರಕ್ಷಣಾ ಶಿಬಿರಗಳು– ಪಾರ್ಕ್‌ಗಳಲ್ಲಿ ಮತ್ತು ಶಾಲೆಗಳಲ್ಲಿ
- ಪ್ರತಿ ಸ್ಥಳಗಳಲ್ಲೂ ಸುರಕ್ಷಾ ಎಚ್ಚರಿಕೆಗಳು.
- ಮಹಿಳಾ ನಿರ್ವಾಹಕರೊಂದಿಗೆ ಮಹಿಳೆಯರಿಗಾಗಿ ಮಾತ್ರ ಬಸ್ಸುಗಳು.
- ಗುಲಾಬಿ (ಪಿಂಕ್) ಆಟೋಗಳು : ಮಹಿಳಾ ಚಾಲಕರಿರುವ ಮಹಿಳೆಯರಿಗಾಗಿಯೇ ಆಟೋಗಳು
- ಮೆಟ್ರೊದಲ್ಲಿ ಮಹಿಳಾ ವಿಶೇಷ ಭೋಗಿಗಳು.
- ಮಹಿಳಾ ಸುರಕ್ಷಾ ಗಸ್ತುದಳ : ಸಾರ್ವಜನಿಕ ಸಾರಿಗೆ, ಕೆಲಸದ ಸ್ಥಳ, ರಸ್ತೆಯ ಮೇಲೆ, ಸಿದ್ಧ ಉಡುಪು ಕೈಗಾರಿಕೆಗಳು ಇತ್ಯಾದಿಗಳಲ್ಲಿ ಮಹಿಳಾ ಸುರಕ್ಷೆಯನ್ನು ಪರೀಕ್ಷಿಸಲು ಒಂದು ತಂಡವನ್ನು ರಚಿಸುವುದು.
- ಎಲ್ಲಾ ಮಹಿಳಾ ಸಮಸ್ಯೆಗಳನ್ನು ನಿವಾರಿಸಲು ಬದ್ಧವಾದ ವೆಬ್ ಸೈಟನ್ನು ರಚನೆ ಮಾಡುವುದು ಮತ್ತು ಅದನ್ನು ಪ್ರೋತ್ಸಾಹಿಸುವುದು.
- ಪೋಲೀಸ್ ಪಡೆಗೆ ಹೆಚ್ಚು ಮಹಿಳೆಯರನ್ನು ನೇಮಕ ಮಾಡಿಕೊಳ್ಳುವುದು. ಆಂತರಿಕ ಕಲಿಕೆಯ ಕಾರ್ಯಕ್ರಮಗಳು, ಸ್ವಯಂಸೇವೆ ಇತ್ಯಾದಿಗಳಲ್ಲಿ.



Governance
Decentralized e-Governance Enable System
Equitable
Accessible
Transparent
Women Empowerment & Child Development
1000 Women Skill Development Per Year
Women/ Girls Security
Prevention Of Child Trafficking
5000 Stree Shakti Micro Enterprises
RTE For All Children 3-18yrs
Health and Nutrition
1 Super Speciality Hospital Per 3 Districts
Malnutrition Free Karnataka
50 Bed Ayush Hospitals
20,000 Anganwadis
Food Security
IT & Biotechnology
$300 Bn IT Contributions
20,000 IT Startups
$50 Bn Biotech Contributions
Infrastructure
Mangalore-Hubli Air Connectivity
Roads To All Villages
Mangalore Harbour
Inland Port Authority for State
Law and Justice
Alternate Dispute Resolution Mechanisms
Prison Reforms
Specialized Courts
Mordernize Court Infrastructure
Education, Sport and Culture
Comprehensive Kannada Development Roadmap
12Yrs Of Schooling Guaranteed To Every Child
Tourism
65 Lakhs Tourism Jobs To Be Created
20% of GSDP
Festival Authority of Karnataka
Industrial Development
Single Window Project Clearance
MMSEs
Marketing Support
Insurance
Irrigation
125,000 Cr to be spent
Social Justice
18000 Skilled Artisans
Right to Equality
Right to Health
100% Housing for Soliga, Koraga, Pambada, Nalika, Parava, Kubali Communities
Energy
Sustainable
24x7 Power To All Villages
Reliable
Clean
100% Electricity For All
Rural Development
Smart Villages
Improved Infrastructure & Governance
Tech Innovation
Robust Finance
Agriculture
Agricultural Corridor for Karnataka
Skilling & Employment
15-20 Lakhs Jobs To Be Created Annually
Reduce Professional Tax
50% Employability Increase
Skill Development
Urban Development
Pollution Control
Zero Adverse Impact Of Waste
Unified Metropolitan Transport Authority
Safe Accessible Transport For All
One Tap In Every Household
Environmentally Sound Growth

# ನಾವು ಪ್ರಗತಿಯ ಪಥದಲ್ಲಿ ಉಳಿಯೋಣ

The manifesto committee of the INC would like to thank the people of the Karnataka who were an essential and integral part of authoring this "People's Manifesto".

We are humbled by the love, affection and faith that the people have bestowed upon us, and are honored to be the custodians of the hopes and dreams that the people of the state have for themselves and their fellow countrymen.

The vision of the future for the people of the state that we have illustrated comes on the back of the last five years of stable, sustainable and inclusive growth under the able leadership of Shri Siddaramiah.

We know the people of the state expect more from us and we believe we are well prepared to not just to meet those expectations but to exceed them like we have always done in the past.

As a nation we are at a crossroads, we are in a fight against forces that want to redefine who we are as a Republic, forces that want exclusive and not inclusive growth, forces that want to stifle dissenting views, forces that finally want to impose a perverse version of what it is to be a true Indian.

We believe Karnataka under the Indian National Congress in the last five years has shown that there is a better way - a way that leads not only to better economic progress for all the people, but a way that has the values and teachings of Basavanna, Mahatma Gandhi, Jawarharlal Nehru, Ambedkar ... as its lodestar.

The Indian National Congress seeks the vote of the people of Karnataka based on our track record and our vision of a glorious future for the state.

It would be our privileged and honor to serve you.



ಕರ್ನಾಟಕ ಪ್ರದೇಶ
ಕಾಂಗ್ರೆಸ್ ಸಮಿತಿ

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್